# ಪ್ರಸಾದ

ಸಂಪುಟ 24  ಸಂಚಿಕೆ 4 ಜುಲೈ-ಆಗಸ್ಟ್ 2009

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**
**94ನೆಯ ಜಯಂತಿ ಮಹೋತ್ಸವ**

**29 ಆಗಸ್ಟ್ 2009**

ಸಂಪಾದಕ
**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**
ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಶ್ರೀ ಎಸ್. ನಂಜುಂಡಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಎನ್. ಎಸ್. ತಾರಾನಾಥ
ಶ್ರೀ ಮ.ಗು. ಸದಾನಂದಯ್ಯ
ಡಾ. ಪದ್ಮಾಶೇಖರ್
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಲೇಖಕರವು

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 7

ಮೌನಕ್ರಾಂತಿಯ ಮಹಾಂತರು 9
**ಕರ್ನಾಟಕ ರತ್ನ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು**

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರುತ ಕೆಲವು ನೆನಪುಗಳು 11
**ಡಾ. ಡಿ. ವೀರೇಂದ್ರ ಹೆಗ್ಗಡೆಯವರು**

ಸಮಾಜಮುಖಿ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು 14
**ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು**

ಯುಗಪ್ರಜ್ಞೆಯ ಸಾಕಾರಮೂರ್ತಿಗಳು 17
**ಶ್ರೀ ಮ.ನಿ.ಪ್ರ.ಸ್ವ.ಜಗದ್ಗುರು ಡಾ. ಅನ್ನದಾನೀಶ್ವರ ಮಹಾಸ್ವಾಮಿಗಳು**

ಸಂಗೀತ, ಸಾಹಿತ್ಯ ಪೋಷಕರು 20
**ಡಾ. ಪುಟ್ಟರಾಜ ಕವಿ ಗವಾಯಿಗಳವರು**

ಮಾತೃಹೃದಯದ ದೈವತಾಸ್ವರೂಪಿ 21
**ಶ್ರೀ ಕುಮಾರನಿಜಗುಣ ಸ್ವಾಮಿಗಳು**

ನಮ್ಮ ಅಂತರಂಗದ ಮಾರ್ಗದರ್ಶಿಗಳು 32
**ಶ್ರೀ ಶ್ರೀ ಚೆನ್ನಬಸವ ಸ್ವಾಮಿಗಳು**

ಉಪಮಾತೀತರು ಶ್ರೀ ರಾಜೇಂದ್ರರು 35
**ಶ್ರೀ ನಿ.ಪ್ರ.ಸ್ವ. ಮಹಂತ ಸ್ವಾಮಿಗಳು**

ಮಮತೆಯ ಕಲ್ಪವೃಕ್ಷ... ಚಿಂತನೆಯ ಕಾಮಧೇನು 39
**ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು**

ಶ್ರೀಗಳವರ ಸನ್ನಿಧಿಯಲ್ಲಿ ಕಳೆದ ರಸಗಳಿಗೆಗಳು 43
**ವಿದ್ವಾನ್ ಶ್ರೀ ಸಿದ್ಧಮಲ್ಲಸ್ವಾಮಿಗಳು**

ಅವರ ನಡೆ ಪರುಷ, ನುಡಿ ಪರುಷ, ನೋಟ ಪರುಷ... 47
**ಶ್ರೀ ಗುರುಶಾಂತ ಸ್ವಾಮಿಗಳು**

ಕಾಯಕಯೋಗಿ ಲಿಂ. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು 53
**ಪಟ್ಟದ ಶ್ರೀ ಸಿದ್ಧಮಲ್ಲಸ್ವಾಮಿಗಳು**

ಎಲ್ಲರನ್ನೂ ಇವರು ನಮ್ಮವರೆಂದವರು 58
**ಶ್ರೀ ಸದಾಶಿವ ಸ್ವಾಮಿಗಳು**

ಮಹಾನ್ ಜಂಗಮಪ್ರೇಮಿ ಜಗದ್ಗುರುವರರು 65
**ಶ್ರೀ ಶಿವಲಿಂಗಸ್ವಾಮಿಗಳು (ಮೇದಿನಿ ಸ್ವಾಮಿಗಳು)**

ನಮ್ಮನ್ನುದ್ಧರಿಸಿದ ಮಹಾನ್ ಜಗದ್ಗುರುವರರು 70
**ಶ್ರೀ ಸೋಮಶೇಖರಸ್ವಾಮಿ**

ಸಾಗರಂ ಸಾಗರೋಪಮಂ 75
**ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು**

ಅವರ ನೆನಪು ಮಧುರ... ಅಜರಾಮರ 80
**ಶ್ರೀ ಪರಶಿವಮೂರ್ತಿ ಸ್ವಾಮಿಗಳು**

ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರೊಡನೆ ಸಂದರ್ಶನ 85
**ಸಂದರ್ಶಕರು: ಮಲೆಯೂರು ಗುರುಸ್ವಾಮಿ**

ಸಾಧನೆಯ ಪಕ್ಷಿನೋಟ 93

# ಸಂಪಾದಕೀಯ

**ತನು ಕರಗಿದವರು.......ಮನ ಕರಗಿದವರು**

ಇದು ಲಿಂಗೈಕ್ಯ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರಿಗೆ ಮೀಸಲಾದ 'ಪ್ರಸಾದ' ವಿಶೇಷ ಸಂಚಿಕೆ. ಆಗಸ್ಟ್ 29 ರಂದು ಪರಮಪೂಜ್ಯರ 94ನೇ ಜಯಂತಿ ಮಹೋತ್ಸವ. ತ್ರಿವಿಧದಾಸೋಹಿಗಳಾಗಿ ಮೆರೆದ ಪರಮಪೂಜ್ಯರನ್ನು ಸಂಸ್ಮರಿಸಿಕೊಳ್ಳುವ ನೆಪದಲ್ಲಿ ಅವರಲ್ಲಿ ಮಡುಗಟ್ಟಿದ್ದ ಮಹಾನ್ ಮಾನವೀಯ ಗುಣಗಳನ್ನು ನಮ್ಮೊಳಗೆ ಅಷ್ಟಿಷ್ಟಾದರೂ ಆವಾಹನೆ ಮಾಡಿಕೊಂಡು ಮುಂದಿನ ಹೆಜ್ಜೆಗಳನ್ನು ಇಡಲು ಸಂಕಲ್ಪ ಮಾಡಬೇಕಾದ ಪುಣ್ಯ ದಿನ. ಸ್ಮರಣೆ, ಆರಾಧನೆ ಎಂದರೆ ಅವು ಕೇವಲ ಬಾಹ್ಯ ಪರಿಕರಗಳಿಂದ ಮಾಡುವ ಪ್ರಕ್ರಿಯೆಗಳಲ್ಲ. ಸ್ಮರಣೆ ಎಂಬುದು ನಮ್ಮ ಮನಸ್ಸಿನೊಳಗಿನ ಸ್ಥಾಯೀ ಭಾವವಾಗಬೇಕು ಹಾಗೂ ಅವು ನಮ್ಮ ನಡೆ-ನುಡಿಗಳಲ್ಲಿ ಪ್ರತಿಬಿಂಬಿತವಾಗಬೇಕು.

ಚಾಂದಿನಿ ಒಬ್ಬ ಹೆಣ್ಣು ಮಗಳು. ಕಳೆದ ವರ್ಷ ಮರಿಮಲ್ಲಪ್ಪ ಶಾಲೆಯಲ್ಲಿ ದ್ವಿತೀಯ ಪಿಯುಸಿ ಅಧ್ಯಯನ ಮಾಡುತ್ತಿದ್ದ ಈಕೆ ವಿಜ್ಞಾನದ ಎಲ್ಲ ವಿಷಯಗಳಲ್ಲೂ ಶೇಕಡಾ ೧೦೦ ಅಂಕಗಳನ್ನು ಪಡೆದಿದ್ದಾಳೆ. ತುಂಬಾ ಬಡ ಕುಟುಂಬದಿಂದ ಬಂದ ಇವಳಿಗೆ ಹಾಸನದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಸಿಕ್ಕಿದೆ. ಆದರೆ ಹಾಸನಕ್ಕೆ ಬಸ್ಸಿನಲ್ಲಿ ಹೋಗಲು ಇಷ್ಟು, ರೈಲಿನಲ್ಲಿ ಹೋಗಲು ಇಷ್ಟು ಹಣ ಬೇಕಾಗುತ್ತದೆ ಎಂದು ದರವನ್ನು ಲೆಕ್ಕ ಹಾಕುವ ಪರಿಸ್ಥಿತಿ; ಇನ್ನು ಕನಿಷ್ಠ ಶುಲ್ಕವನ್ನಾದರೂ ತುಂಬಿ ಪ್ರವೇಶ ಪಡೆಯುವ ಕನಸು ದೂರವೇ ಉಳಿದಿತ್ತು. ಅವರಿವರ ಬಳಿ ಬೇಡುವ ಅಭ್ಯಾಸವಿಲ್ಲ; ಸಂಕೋಚ ಪ್ರವೃತ್ತಿ. ಜೊತೆಗೆ, ಬಡತನಕ್ಕೂ ಸ್ವಾಭಿಮಾನಕ್ಕೂ ಅಂಟಿ ಬಂದ ನಂಟು. ಹೀಗಿರುವಾಗ ಒಂದು ಅನಿರೀಕ್ಷಿತ ಮೂಲದಿಂದ, ದೈವದ ಸಹಾಯವೆಂಬಂತೆ, ಮೊದಲನೆ ವರ್ಷದ ಖರ್ಚಿಗೆ ಆಗುವಷ್ಟು ಹಣವೇನೋ ದೊರಕಿತು! ಆಕೆಯ ಸದ್ಯದ ಸಮಸ್ಯೆಯೇನೋ ಬಗೆ ಹರಿಯಿತು. ಆದರೆ ಮುಂದಿನ ದಿನಗಳು? ಇದನ್ನು ಗಮನಿಸಿದ ನಾನು ಈಕೆಗೆ ಏನಾದರೂ ಸಹಾಯ ಮಾಡುವುದರ ಜೊತೆಗೆ ಸಹಾಯ ಸಿಕ್ಕುವ ಮಾರ್ಗಗಳನ್ನು ತೋರಿಸಬಹುದೇ ಎಂದು ಯೋಚಿಸಿದೆ. ನನ್ನ ಮೆಚ್ಚಿನ ವಿದ್ಯಾರ್ಥಿಗಳಲ್ಲಿ ಒಬ್ಬರಾದ ನಂಜನಗೂಡಿನ ಉದ್ಯಮಿ ಎಸ್. ಸುಕುಮಾರ್ ರವರ ನೆನಪಾಯಿತು. ದೂರವಾಣಿಯಲ್ಲಿ ಸಂಪರ್ಕಿಸಿದೆ. ಇದಕ್ಕಿಂತ ಪುಣ್ಯದ ಕೆಲಸ ಮತ್ತಾವುದಿದೆ ಗುರುಗಳೇ, ಈಗಲೇ ಬನ್ನಿ. ಆಕೆಯನ್ನು ಕರೆದುಕೊಂಡು ಬನ್ನಿ ಎಂದರು. ಧ್ವನಿಯಲ್ಲಿ ಅವರ ಹೃದಯವೇ ತುಂಬಿಬಂದಂತಿತ್ತು. ಚಾಂದಿನಿಯನ್ನು ನಂಜನಗೂಡಿಗೆ ಕರೆದೊಯ್ದೆ. ಸುಕುಮಾರ್

ಮತ್ತು ಅವರ ಪತ್ನಿ ಶ್ರೀಮತಿ ವಸುಂಧರಾ ಅವರು, ಈ ವಿದ್ಯಾರ್ಥಿನಿಯನ್ನು ತುಂಬಾ ಪ್ರೀತಿ, ವಿಶ್ವಾಸದಿಂದ ಬರಮಾಡಿಕೊಂಡರು. ಅವಳ ತಲೆ, ಮೈ ಕೈಗಳನ್ನು ಅಕ್ಕರೆಯಿಂದ ನೇವರಿಸಿದರು. ಪ್ರೀತಿಯಿಂದ 'ಮಗಳೇ' ಎಂದರು. ಪ್ರಾಯಶಃ ಅನ್ಯರೊಬ್ಬರಿಂದ ಇಂತಹ ಪ್ರೀತಿಯನ್ನು ನಿರೀಕ್ಷಿಸಿರದ ಚಾಂದಿನಿ ಸಹಜವಾಗಿಯೇ ಮುದುಡಿಕೊಂಡು ಕುಳಿತಿದ್ದಳು. ಉಪಚಾರದ ನಂತರ, "ನೀನು ಏನೂ ಸಂಕೋಚ ಪಡಬೇಡ, ತಾಯಿ. ಮುಂದಿನ ವರ್ಷದಿಂದ ನಿನಗೆ ಎಷ್ಟು ಖರ್ಚು ಬರುತ್ತದೆ ಹೇಳು. ನಾನು ಕೊಡುತ್ತೇನೆ. ಹಣ ಕೇಳಲು ಯಾವ ಸಂಕೋಚವೂ ಬೇಡ. ನಮ್ಮ ಗುರುಗಳು ಹೇಳಿದಮೇಲೆ ಮುಗಿಯಿತು. ಒಳ್ಳೆಯ ಡಾಕ್ಟರಾಗಿ ಸಮಾಜ ಋಣ ತೀರಿಸು. ಅಷ್ಟೇ ನಮ್ಮ ನಿರೀಕ್ಷೆ" ಎಂದು ಹೇಳಿ ಸ್ಥಳದಲ್ಲಿಯೇ ಹತ್ತು ಸಾವಿರ ರೂಪಾಯಿಯನ್ನು ಕೊಟ್ಟರು. ಪ್ರಚಾರಕ್ಕಾಗಿ, ತಮ್ಮ ಸಾಮಾಜಿಕ ಸ್ಥಾನಮಾನಗಳಿಗಾಗಿ ನೀರಿಗಿಂತಲೂ ಕಡೆಯಾಗಿ ಹಣ ಖರ್ಚು ಮಾಡುವ ಅನೇಕರು ಸದ್ವಿನಿಯೋಗವಾಗುವ ಸಂದರ್ಭ ಬಂದಾಗ ದಟ್ಟದರಿದ್ರರಂತೆ ವರ್ತಿಸುವುದನ್ನು ನಾನು ಕಂಡಿದ್ದೇನೆ. ಜಗತ್ತಿನ ಎಲ್ಲಾ ಸಂಪತ್ತನ್ನು ಬಾಚಿಕೊಳ್ಳಲು ಉದ್ದವಾಗುವ ಅವರ ಕೈಗಳು, ಮತ್ತೊಬ್ಬರ ಸಹಾಯಕ್ಕೆ ಒದಗುವ ಸಂದರ್ಭದಲ್ಲಿ ಕುಬ್ಜತೆಯಿಂದ ಸೆಟೆದುಕೊಳ್ಳುತ್ತವೆ. ಮಾತಿನಲ್ಲಿ ಸಕ್ಕರೆಯ ಸಿಹಿ, ಹೃದಯದಲ್ಲಿ ಮಾತ್ರ ಕತ್ತರಿಯ ಹರಿತ! ಅಂತಹವರು ಈ ತೆರನ ಹೃದಯವೈಶಾಲ್ಯವನ್ನು ಮತ್ತೆ ಮತ್ತೆ ಮನನ ಮಾಡಬೇಕು. ನಮ್ಮ ಸಂಪತ್ತಿಗೆ ನಾವು ಧರ್ಮದರ್ಶಿಗಳಾಗಬೇಕು ಎಂದು ಗಾಂಧೀಜಿ ಹೇಳಿದ್ದು ಈ ಹಿನ್ನೆಲೆಯಲ್ಲಿಯೆ. ಶ್ರೀ ಸುಕುಮಾರ್‌ರವರು ನಮ್ಮ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಎನ್ನುವ ಹೆಮ್ಮೆ ನಮ್ಮದು.

ಪರಮಪೂಜ್ಯರ ಜಯಂತಿ ಮಹೋತ್ಸವ ಸಂದರ್ಭಕ್ಕೂ ಈ ಘಟನೆಗೂ ಒಂದು ತೆರನ ಒಳ ಸಂಬಂಧ ಇದೆ ಎನ್ನುವ ಕಾರಣಕ್ಕಾಗಿ ಇದನ್ನು ಇಲ್ಲಿ ವಿಸ್ತರಿಸಬೇಕಾಯಿತು. ಹಿರಿಯ ಜಗದ್ಗುರುಗಳವರ ತನುಮನಗಳು ಅಶಕ್ತರನ್ನು, ಅಸಹಾಯಕರನ್ನು ಕಂಡು ಕರಗಿದ ಕಾರಣಕ್ಕಾಗಿ ನನ್ನಂತಹ ಅನೇಕರು ಬಾಳಿನಲ್ಲಿ ಬೆಳಕನ್ನು ಕಂಡರು. ಇಲ್ಲದಿದ್ದರೆ ಪಶು ಸಮಾನರಾಗಿ ಬದುಕಿ ಮಣ್ಣಿನಲ್ಲಿ ಮಣ್ಣಾಗುತ್ತಿದ್ದರು. ನಮಗೆ ಬೌದ್ಧಿಕ, ಆರ್ಥಿಕ, ಸಾಮಾಜಿಕ ಅಸ್ತಿತ್ವಗಳು ದೊರಕುತಿರುವುದು ಹಿರಿಯ ಜಗದ್ಗುರುಗಳಂತ ತ್ಯಾಗ ಮತ್ತು ಸೇವೆಗಳಿಂದ. ಶ್ರೀಮಠದ ಪ್ರಸಾದದಿಂದ ಪರಿಪುಷ್ಟರಾದ ನಾವು ಜಗದ್ಗುರುಗಳನ್ನು ನಮ್ಮ ತನು ಕರಗುವ ಮೂಲಕ, ಮನ ಕರಗುವ ಮೂಲಕ ಸ್ಮರಣೆ ಮಾಡಿಕೊಳ್ಳಬೇಕು. ಅವರು ಸೂರ್ಯಸದೃಶರಾದವರು. ನಾವು ಕಿರು ಹಣತೆಗಳಾದರೂ ಆಗುವುದು ಬೇಡವೇ?

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ ಒಂದು ಕಡೆಯಾದರೆ ಮತ್ತೊಂದು ಕಡೆ ಪ್ರತಿ ವರ್ಷ ಆಗಸ್ಟ್ ತಿಂಗಳು ಬಂತೆಂದರೆ ನಮ್ಮ ಹೃದಯದಲ್ಲಿ ಭಕ್ತಿ ಗೌರವಗಳ ಸ್ಥಾಯೀ ಭಾವ ಕೋಡಿವರಿಯುತ್ತದೆ. ಎಲ್ಲೆಡೆ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಸಮಾರಂಭವನ್ನು ಆಚರಿಸುವ ಧನ್ಯತಾ ಭಾವ. ಹಾಗೆಯೇ ಪರಮಪೂಜ್ಯರ ಹೆಸರು ಕೇಳಿದರೆ, ನಿತ್ಯಹಸನ್ಮುಖಿಗಳಾದ ಅವರ ಭಾವಚಿತ್ರವನ್ನು ನೋಡಿದರೆ ಸಾಕು, ಅನೇಕರನ್ನು ಆವರಿಸಿರುವ ಹಲವಾರು ದೋಷಗಳು ಕ್ಷಣಮಾತ್ರದಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಸದಾ ಅವುಗಳ ಹಿಡಿತದಲ್ಲಿದ್ದು ಮನೋವಿಕಾರಗಳ ವಿಶೃಂಖಲ ಪ್ರವಾಹದಲ್ಲಿ ಕೊಚ್ಚಿಹೋಗುತ್ತಾ, ಇಹವನ್ನೂ ಅರ್ಥೈಸಿಕೊಳ್ಳಲಾರದೆ, ಪರದ ಪರಿಕಲ್ಪನೆಯನ್ನೂ ಧ್ಯಾನಿಸಲಾರದೆ ಸೃಷ್ಟಿಯ ಅನಂತ ಕ್ಷುದ್ರ ಜೀವಿಗಳ ಪಟ್ಟಿಯಲ್ಲಿ ಸೇರಿಹೋಗುವವರ ಸಂಖ್ಯೆ ಅಗಣಿತ. ದಿನದ ಎಲ್ಲ ಎಚ್ಚರದ ಸಂದರ್ಭಗಳ ಮಾತಿರಲಿ, ಗಾಢನಿದ್ದೆಯ ಸ್ಥಿತಿಯಲ್ಲಿಯೂ ಸ್ವಕೇಂದ್ರಿತ ಸುಖದ ಚಡಪಡಿಕೆಯ ಸ್ಥಿತಿಯಿಂದ ಆಚೆಗೆ ದಾಟಿಸಲಾರದೆ ಕಾಲವಶರಾಗಿ ಹೋಗುವವರ ಚಿತ್ರ ನಿತ್ಯವೂ ಕಾಣುವಂತಹುದೇ. ಹುಟ್ಟು ಮತ್ತು ಸಾವುಗಳು ವ್ಯಕ್ತಿಯ ಆಯ್ಕೆಯ ಕಕ್ಷೆಯನ್ನು ಮೀರಿದವು ನಿಜ. ಆದರೆ ಅವುಗಳ ನಡುವಣ ಬದುಕು ನಡೆಯುವುದು ಬಹುಪಾಲು ನಮ್ಮ ಇಚ್ಛಾನುಸಾರವೆ. ಈ ಇಚ್ಛೆಯೆ ವ್ಯಕ್ತಿಯನ್ನು ಪಶು ಸಮಾನವಾಗಿಯೋ, ಮಾನವಸಮಾನವಾಗಿಯೋ ಮಹಾಮಾನವಸಮಾನವಾಗಿಯೋ ಮಾಡುವ ಮೂಲ ಧಾತು. ಈ ಧಾತು ಮಹತ್ವದ್ದಾಗಿದ್ದರೆ, ವ್ಯಕ್ತಿಯು ಅವಸ್ಥಾತ್ರಯಗಳಲ್ಲಿಯೂ ಉನ್ಮುಖನಾಗಿಯೇ ಇರುತ್ತಾನೆ. ಈ ಶಕ್ತಿ ಕ್ಷೀಣವಾಗಿದ್ದರೆ ಅವನ ಅಂತರ್‌ದೃಷ್ಟಿ ಅಷ್ಟರ ಮಟ್ಟಿಗೆ ಮಸುಕಾಗುತ್ತದೆ. ಕೃಷ್ಣನ ವಿಶ್ವರೂಪವನ್ನು ನೋಡಲು ಬಯಸಿದ ಅರ್ಜುನ, ಅದನ್ನು ಕಂಡಾಗ, ಆ ವಿರಾಟ್ ದೃಶ್ಯವನ್ನು ನೋಡಲಾರದೆ ಕಣ್ಣುಮುಚ್ಚಿಕೊಳ್ಳುತ್ತಾನೆ. ಇದನ್ನು ಒಂದು ರೂಪಕವಾಗಿ ಪರಿಭಾವಿಸಿದರೆ ಅದು ಜೀವನದ ಒಂದು ಅರ್ಥಪೂರ್ಣ ಮಿಮಾಂಸೆಯೇ ಆಗುತ್ತದೆ. 'ವಿಶ್ವರೂಪ' ಎನ್ನುವುದು ಇಡೀ 'ಸೃಷ್ಟಿ'ಯ ಸಂಕೇತ. ಅದು ಕೇವಲ ಬಾಹ್ಯಸೃಷ್ಟಿಯ ಸಂಕೇತ ಮಾತ್ರವಲ್ಲ, ಮಾನವನ ಒಳಲೋಕದ ಊಹಾತೀತ, ಗಮ್ಯಾತೀತ ಸಂಕೀರ್ಣ ಸ್ಥಿತಿಯೂ ಹೌದು. ಬಾಹ್ಯ ಬದುಕು ಒಂದು ತೆರೆನಾದ 'ನಿಕೇತನ' ಸ್ಥಿತಿಯನ್ನು ಪಡೆದರೆ, ಆಂತರಿಕ ಬದುಕು ಎಲ್ಲ ನಾಮರೂಪಗಳನ್ನೂ ಮೀರಿದ 'ಅನಿಕೇತನ' ಸ್ಥಿತಿಯಾಗುತ್ತದೆ. ಇವೆರಡೂ ಒಂದರೊಳಗೊಂದು ಹದವರಿತು ಬೆರೆತಾಗ ನಮ್ಮ ದೃಷ್ಟಿ ಮತ್ತು ಸೃಷ್ಟಿ, ಸೂರ್ಯಕೇಂದ್ರದಿಂದ ಹೊರಟ ಕಿರಣಗಳು ಭೂವ್ಯೋಮಾಕಾಶಗಳನ್ನು ವ್ಯಾಪಿಸುವಂತೆ ನಮ್ಮ ವ್ಯಕ್ತಿತ್ವದ

ಪ್ರಭಾವಲಯವನ್ನು ಅರಳಿಸುತ್ತವೆ. ಅಂತಹವರು ಸ್ವಯಂ ಸ್ಫುಲಿಂಗಗಳಾಗಿ ಈ ಲೋಕವನ್ನು ಶಾಶ್ವತವಾಗಿ ಬೆಳಗುತ್ತಿರುತ್ತಾರೆ.

ಜಗತ್ತಿನ ಅನೇಕ ದಾರ್ಶನಿಕರು ಈ ಗುಂಪಿಗೆ ಸೇರಿದವರು. ಅವರ ಸ್ಮರಣಮಾತ್ರದಿಂದ ನಮ್ಮ ಕ್ಲೈಬ್ಯ ಕ್ಷಯವಾಗುತ್ತದೆ. ನಮ್ಮಲ್ಲಿ ವಿಶೇಷ ಶಕ್ತಿ ಸಂಚಯವಾಗುತ್ತದೆ, ಕ್ರಿಯಾಸಿದ್ಧಿ ಲಭಿಸುತ್ತದೆ.

ಸಂತರು, ದಾರ್ಶನಿಕರು, ಸನ್ಯಾಸಿಗಳೆಂದರೆ ಅವರು ಸಂಸಾರದಿಂದ ದೂರವಾದವರು ಎಂದು ಅನೇಕರು ಭಾವಿಸುತ್ತಾರೆ. ಆದರೆ ಅದು ವಾಸ್ತವವಲ್ಲ. ಅವರ ಸಂಸಾರದ ಪರಿ ಬೇರೆ. ಅವರು ವಿಶ್ವಕುಟುಂಬಿಗಳು. ಅವರದು ಸಾಮಾನ್ಯರಂತೆ ಜಂಜಡದ ಸಂಸಾರವಲ್ಲ.

ಕಾಯವೆಂಬ ವನಿತೆಗೆ
ಆತ್ಮನೆಂಬ ಪುರುಷನು ನೋಡಾ!
ಈ ದೇಹದ ಆತ್ಮನ ಸಂಪರ್ಕದಿಂದ ಹುಟ್ಟಿದ
ಸಕಲ ಕರಣೇಂದ್ರಿಯಂಗಳೇ ಮಕ್ಕಳು ನೋಡಾ
ಇದೇ ಸಂಸಾರವೆಂಬುದನರಿಯದೆ
ನಾನು ಹೊನ್ನು ಹೆಣ್ಣು ಮಣ್ಣು ಬಿಟ್ಟು ವಿರಕ್ತನಾದೆನೆಂಬ
ಅಜ್ಞಾನಿಯ ಪರಿಯ ನೋಡಾ!
ಇದು ವಿರಕ್ತಿಯೆ ಅಲ್ಲ
ದೇಹ ಇಂದ್ರಿಯ ಮನಃ ಪ್ರಾಣಾದಿಗಳ
ಮಹದಲ್ಲಿ ಒಡಗೂಡಿದಾತನೇ ಪರಮ ವಿರಕ್ತನು
ಆತನಿಗೆ ನಮೋ ನಮೋ ಎಂದೆನು ಕಾಣಾ
ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ

(ಶ್ರೀ ತೋಂಟದ ಸಿದ್ಧಲಿಂಗಯತಿ)

ಅವರದು ಅಂತರ್ಲೋಕದ ಸಂಸಾರ. ಅವರಿಗಿರುವ ಕುಟುಂಬ ಮಕ್ಕಳು, ಮರಿಗಳು ಸಾಮಾನ್ಯ ಸಂಸಾರಿಗಿಂತ ಕೋಟಿ ಪಟ್ಟು ಹೆಚ್ಚಿನದು. ತೋಂಟದ ಸಿದ್ಧಲಿಂಗಯತಿಗಳ ಈ ಮೇಲಿನ ವಚನ ಸಂಸಾರದ ಸ್ವರೂಪವನ್ನು ರೂಪಕಾತ್ಮಕವಾಗಿ, ಧ್ವನಿಪೂರ್ಣವಾಗಿ ವಿವರಿಸುತ್ತದೆ. ಲೌಕಿಕ ಸಂಸಾರದಲ್ಲಿ 'ತನ್ನದು' ಎನ್ನುವ ಪ್ರಜ್ಞೆ ಸದಾ ಕಾಡಿದರೆ, ಅಲೌಕಿಕ ಸಂಸಾರದ ತುಂಬೆಲ್ಲಾ 'ಪರರ ಚಿಂತೆಯೇ' ತುಂಬಿರುತ್ತದೆ. ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಇಂತಹ ಹಿರಿಯ ಸಂಸಾರವನ್ನು ಕಟ್ಟಿಕೊಂಡು, ಎಲ್ಲರ ಮೋಹದ ಮನೆಗಳನ್ನು ಮಹಾಮನೆಗಳನ್ನಾಗಿ ಮಾಡಿದವರು. ಆದ್ದರಿಂದಲೇ ಅವರು ದೇವಮಾನವರು ಎನಿಸಿಕೊಂಡರು. ಕೇವಲ ಪ್ರಾತಃಸ್ಮರಣೀಯರು ಮಾತ್ರವಲ್ಲ, ತ್ರಿಕಾಲಗಳಲ್ಲಿಯೂ ಸ್ಮರಣೀಯರು.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಮೌನಕ್ರಾಂತಿಯ ಮಹಾಂತರು

**ಕರ್ನಾಟಕ ರತ್ನ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು**
ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ

ಪ್ರಸಾದ ಜೆಎಸ್‌ಎಸ್ ಮಹಾ ವಿದ್ಯಾಪೀಠದಿಂದ ಪ್ರಕಟವಾಗುತ್ತಿರುವ ದ್ವೈಮಾಸಿಕ ಪತ್ರಿಕೆ. ಸಂಸ್ಥಾಪಕರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಶ್ರೀಗಳವರ ವ್ಯಕ್ತಿತ್ವ ಅನನ್ಯವಾದುದು. ಅನುಪಮವಾದುದು. ಶ್ರೀಗಳವರು ಸಲ್ಲಿಸಿದ ಸಮಾಜೋಧಾರ್ಮಿಕ ಸೇವೆ ಆದರ್ಶವಾದುದು. ಶಿಕ್ಷಣ ಸಾಹಿತ್ಯ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೊಸ ಹೊಸ ದಿಗಂತಗಳನ್ನೇ ಅನಾವರಣ ಗೊಳಿಸಿದರು. ಶ್ರೀಗಳವರದು ಮಾತೃಕರುಳು. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಅವರು ಚಿಂತಿಸಿದ್ದು, ಶ್ರಮಿಸಿದ್ದು, ಸಾಧಿಸಿದ್ದು ಅಪಾರ. ತಮ್ಮ ವಿದ್ಯಾರ್ಥಿನಿಲಯದಲ್ಲಿ ಆಶ್ರಯ ನೀಡಿದ್ದರಿಂದಾಗಿ ವಿದ್ವಾಂಸರು, ಕವಿಗಳು, ಕಲಾವಿದರು, ಸಾಹಿತಿಗಳು, ಪ್ರಾಧ್ಯಾಪಕರು, ಕುಲಪತಿಗಳು, ದಕ್ಷ ಆಡಳಿತಗಾರರು, ಶಾಸಕರುಗಳು ಉದಯಿಸುವಂತಾದರು. ರಾಷ್ಟ್ರಕವಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪನವರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಮಾದಯ್ಯನವರು, ದಕ್ಷ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಎಲ್. ರೇವಣ್ಣ ಸಿದ್ಧಯ್ಯನವರು,

ಶಾಸಕರಾಗಿ ಸೇವೆ ಸಲ್ಲಿಸಿದ ಶ್ರೀ ಹೆಚ್. ಗಂಗಾಧರನ್‌ರವರು, ಕಲಾವಿದ ಶ್ರೀ ಪಿ.ಆರ್. ತಿಪ್ಪೇಸ್ವಾಮಿ, ಜಾನಪದ ತಜ್ಞ ಡಾ. ಜಿ. ಶಂ. ಪರಮಶಿವಯ್ಯ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರೂಪುರೇಷೆಗಳನ್ನು ರೂಪಿಸಿ ಪ್ರಥಮಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶರಣ ಸಾಹಿತ್ಯ ದ್ರಷ್ಟಾರ ಡಾ. ಹೆಚ್. ತಿಪ್ಪೇರುದ್ರಸ್ವಾಮಿಗಳು ಮುಂತಾದವರನ್ನು ಸಮಾಜಕ್ಕೆ ನೀಡಿದ ಶ್ರೀಗಳವರ ಸೇವೆ ಚಿರಸ್ಮರಣೀಯವಾದುದು.

ಶಿಕ್ಷಣ ಸಂಸ್ಥೆಗಳನ್ನು ಸಂಸ್ಥಾಪಿಸುವುದರ ಮೂಲಕ ಸದ್ದುಗದ್ದಲವಿರದ ಮೌನ ಕ್ರಾಂತಿಯನ್ನೇ ಶ್ರೀಗಳು ನಡೆಸಿದ್ದು ಸರ್ವವೇದ್ಯ.

ಹಲವಾರು ಮಠಗಳ ಅಭಿವೃದ್ಧಿಗೆ ಶ್ರಮಿಸುವಲ್ಲಿ ಶ್ರೀಗಳವರ ಉತ್ಸಾಹ ಅನುಕರಣೀಯ. ಮೈಸೂರಿನ ಅರಮನೆಯ ಸಂಪರ್ಕದಿಂದಾಗಿ ಆಡಳಿತದ ಅನುಭವವನ್ನು ಗಳಿಸಿದವರಾಗಿ, ಸಮಾಜಸೇವೆಯನ್ನು ವಿಸ್ತರಿಸುತ್ತ ಬಂದರು. ಪಂಚಗವಿಮಠದ ಶ್ರೀ ಗೌರೀಶಂಕರ ಮಹಾಸ್ವಾಮಿಗಳ ದಿವ್ಯ ವ್ಯಕ್ತಿತ್ವದ ಪ್ರಸಾದವನ್ನು ತಮ್ಮದಾಗಿಸಿಕೊಂಡ ಶ್ರೀಗಳು ಮಠಗಳ ಮಹತ್ವ, ಸ್ವಾಮಿಗಳ ಪ್ರಭಾವವನ್ನು ಅರಿತವರಾಗಿದ್ದರು. ದೂರದೃಷ್ಟಿಯುಳ್ಳ ಶ್ರೀಗಳು ತಮ್ಮ ಉತ್ತರಾಧಿಕಾರಿಗಳನ್ನು ಆರಿಸಿಕೊಳ್ಳುವಲ್ಲಿ ಸಮರ್ಥ ಸಮರ್ಪಕ ನಿರ್ಣಯವನ್ನೇ ತೆಗೆದುಕೊಂಡುದಲ್ಲದೆ, ಸುಯೋಗ್ಯ ತರಬೇತಿಯನ್ನು ಕೊಡುವಲ್ಲಿ ಮಾದರಿಯಾದರು.

ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಶ್ರೀಗಳವರ ಉತ್ತರಾಧಿಕಾರಿಗಳಾಗಿ ಮುನ್ನಡೆದಿರುವಲ್ಲಿ ಶ್ರೀ ರಾಜೇಂದ್ರ ಸ್ವಾಮಿಗಳ ಸಮಾಜೋಧಾರ್ಮಿಕ ಸೇವೆಯ ವಿಸ್ತಾರ ವೈಭವವನ್ನು ಕಾಣಬಹುದಾಗಿದೆ.

ಶ್ರೀಮಠದೊಡನೆ ಜಗದ್ಗುರುಗಳು ಬೆಳೆಸಿಕೊಂಡು ಬಂದಿದ್ದ ಮಧುರ ಬಾಂಧವ್ಯ ಅವಿಸ್ಮರಣೀಯವಾದುದು. ಸಂಸ್ಥೆಯ ಸುಖ ದುಃಖಗಳನ್ನು ತಮ್ಮವೆಂದೇ ಭಾವಿಸಿದ ಪರಮಾಪ್ತರಾಗಿ ಸಹಕರಿಸುತ್ತಿದ್ದರು. ತಾವೊಂದು ಹಿರಿಯ ಸಂಸ್ಥಾನದ ಜಗದ್ಗುರುಗಳಾಗಿದ್ದರೂ ನಮ್ಮೊಂದಿಗೆ ಸಮಾನ ಭಾವಸಿರಿಯನ್ನು ತಮ್ಮದಾಗಿಸಿಕೊಂಡವರಾಗಿದ್ದರು. ತಮ್ಮ ಸಂಸ್ಥೆಯ ಸಭೆ ಸಮಾರಂಭ ಉತ್ಸವ ಧಾರ್ಮಿಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ನಾವು ಭಾಗವಹಿಸುವಂತೆ ಪ್ರೀತಿಯ ಆಮಂತ್ರಣವನ್ನು ನೀಡಿ ತಮ್ಮ ಆದರಾಭಿಮಾನಗಳನ್ನು ವ್ಯಕ್ತಪಡಿಸುತ್ತಿದ್ದುದನ್ನು ಮರೆಯಲಾಗದು. ಆಪ್ತಾಲೋಚನೆಯ ಸಂದರ್ಭಗಳಲ್ಲಿ ಅವರು ನೀಡುತ್ತಿದ್ದ ಸಲಹೆ ಸೂಚನೆಗಳು ಧನಾತ್ಮಕವಾಗಿರುತ್ತಿದ್ದವು.

ಶ್ರೀಗಳವರ ಜಯಂತಿಯ ಶಿವಸಂದರ್ಭದಲ್ಲಿ "ಪ್ರಸಾದದ" ವಿಶೇಷ ಸಂಚಿಕೆಯ ಪ್ರಕಟಣೆ ನಿಜಕ್ಕೂ ಸ್ವಾಗತಾರ್ಹವಾದುದಾಗಿದೆ.

## ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು: ಕೆಲವು ನೆನಪುಗಳು

**ಡಾ. ಡಿ. ವೀರೇಂದ್ರ ಹೆಗ್ಗಡೆಯವರು**
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ

ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರನ್ನು ನಾನು ಮೊದಲು ಭೇಟಿ ಮಾಡಿದ್ದು 1970ರ ಸುಮಾರಿಗೆ. ನಮ್ಮ ಧರ್ಮಸ್ಥಳ ಕ್ಷೇತ್ರಕ್ಕೆ ಮೈಸೂರಿನ ಶ್ರೀ ಎಲ್. ಪದ್ಮನಾಭ ಕಾಡಯ್ಯನವರು ಅನೇಕ ವರ್ಷಗಳಿಂದ ರೇಷ್ಮೆ ಬಟ್ಟೆಗಳನ್ನು ಸರಬರಾಜು ಮಾಡುತ್ತಿದ್ದರು. ಅವರು ಪೂಜ್ಯ ಶ್ರೀಗಳ ಬಗ್ಗೆ, ಮಾತಿನ ಮಧ್ಯೆ, ಗೌರವದ ನುಡಿಗಳನ್ನು ಆಡುತ್ತಿದ್ದರು. ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಪೂಜ್ಯರು ಮಾಡುತ್ತಿದ್ದ ಸೇವೆಯನ್ನು ಪ್ರಶಂಸಿಸುತ್ತಿದ್ದರು. ಹೀಗೆ ಉಂಟಾದ ಕುತೂಹಲದಿಂದ, ನಾನು ಮೈಸೂರಿಗೆ ಬಂದಾಗ ಪೂಜ್ಯರನ್ನು ಭೇಟಿ ಮಾಡುವ ಉತ್ಸಾಹವನ್ನು ತೋರಿಸಿದೆ. ಅರಮನೆ ಮತ್ತು ಗುರುಮನೆಗಳಲ್ಲಿ ವ್ಯವಹಾರ ಸಂಬಂಧವಿದ್ದ ಶ್ರೀ ಕಾಡಯ್ಯನವರು ಪೂಜ್ಯರೊಡನೆ ಸಂದರ್ಶನದ ವ್ಯವಸ್ಥೆ ಮಾಡಿದ್ದರು.

ಅರಮನೆಯ ಬಲಭಾಗದಲ್ಲಿದ್ದ ಶ್ರೀ ಸುತ್ತೂರು ಗುರುಮಠದಲ್ಲಿ ನಮ್ಮ ಪರಸ್ಪರ ಭೇಟಿಯಾಯಿತು. ತೇಜಸ್ವಿಯಾದ ಶಾಂತ ಮತ್ತು ದೈವಿಕ ಕಳೆಯ ಹಸನ್ಮುಖ, ಮೆದುವಾದ ಮಾತು, ಮಠದ ಸಾಂಪ್ರದಾಯಿಕ ರೀತಿ ರಿವಾಜುಗಳನ್ನು ಯಥಾವತ್ತಾಗಿ

ನಿಷ್ಠೆಯಿಂದ ನಡೆಸಿಕೊಂಡು ಹೋಗುವ ಶ್ರದ್ಧೆ, ನಡತೆಯಲ್ಲಿಯೂ ಮಾತಿನಲ್ಲಿಯೂ ಸರಳತೆ. ಈ ಸರಳತೆಯ ಮಧ್ಯೆ, ಭಯ-ಭಕ್ತಿ, ಗೌರವ ಆತ್ಮೀಯತೆಗಳೊಂದಿಗೆ ಓಡಾಡುವ ಸಿಬ್ಬಂದಿ ಮತ್ತು ಭಕ್ತರು ನನ್ನ ಗಮನ ಸೆಳೆದರು. ಸುತ್ತೂರು ಕ್ಷೇತ್ರದ ಭಕ್ತಾದಿಗಳು ನಗರದ ಶ್ರೀಮಂತರಿಂದ ಪಾಮರರವರೆಗೆ. ಅವರೆಲ್ಲರಿಗೂ ಸ್ವಾಮೀಜಿಯವರ ಮೆಲುದನಿಯ ಮಾತು, ಸಾಂತ್ವನ, ಸಮಸ್ಯೆಗಳಿಗೆ ಪರಿಹಾರ.

ಮುಂದೆ ಮೈಸೂರಿಗೆ ಹೋದಾಗಲೆಲ್ಲಾ ಪೂಜ್ಯರ ಭೇಟಿ ಮಾಡುವ ಸಂದರ್ಭ ಬರುತ್ತಿತ್ತು. ಮೂಲಮಠದ ಕರ್ತೃವಿನ ಸಹಸ್ರಾಬ್ದ ಕಾರ್ಯಕ್ರಮದಲ್ಲಿಯೂ ಭಾಗವಹಿಸುವಂತೆ ಆದೇಶವಿತ್ತರು. ಶ್ರೀಮಠದಿಂದ ತಮ್ಮ ಡೋಜ್ ವಾಹನದಲ್ಲೇ ನನ್ನನ್ನು ಕುಳಿತುಕೊಳ್ಳುವಂತೆ ಆದೇಶಿಸಿ, ಆ ಕಾರ್ಯಕ್ರಮಕ್ಕೆ ಜೊತೆಯಲ್ಲಿ ಹೋದೆವು. ಇದು ನನಗೆ ಒಂದು ವಿಶೇಷ ಗೌರವವೆನಿಸಿತು. ಅಂದಿನ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿ ಪೂಜ್ಯರ ಬಗ್ಗೆ ತೋರುತ್ತಿದ್ದ ಗೌರವ ಹಾಗೂ ನಡೆಸಿದ ಸಂಪ್ರದಾಯ ಅನನ್ಯವಾದುದು.

ಸುಮಾರು 1970ನೇ ಇಸವಿ ಇರಬಹುದು. ಮೈಸೂರು ಮಹಾರಾಜರ ಬಳಿಯಿದ್ದ ಡ್ಯಾಮ್ಲರ್ ವಾಹನವನ್ನು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಮಾರಾಟ ಮಾಡುವ ಅಭಿಪ್ರಾಯದಲ್ಲಿದ್ದಾರೆಂದು ತಿಳಿಯಿತು. ಅವರನ್ನು ಸಂಪರ್ಕಿಸುವಷ್ಟು ಪರಿಚಯ ಅಂದು ನನಗೆ ಇರಲಿಲ್ಲ. ಅರಮನೆಯವರಿಗೆ ಗುರುಮಠದ ಬಗ್ಗೆ ಅಪಾರ ಗೌರವವಿದೆಯೆಂದು ಶ್ರೀಗಳನ್ನು ಸಂಪರ್ಕಿಸಿದಾಗ ತಿಳಿಯಿತು. ಮಹಾರಾಜರು ವಾಹನವನ್ನು ವಿಕ್ರಯಿಸುವ ಅಭಿಪ್ರಾಯವಿದ್ದು, ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಖರೀದಿಸುವ ಇಚ್ಛೆ ಇದೆ ಎಂದಾಗ ಈ ವಿಚಾರದಲ್ಲಿ ಹೆಚ್ಚಿನ ಚರ್ಚೆಗೆ ಅವಕಾಶವಿಲ್ಲವೆಂದು ಸ್ವಾಮೀಜಿಯವರು ತಿಳಿಸಿದರು. ಹಾಗೆ ಸಂಗ್ರಹಿಸಿದ ವಾಹನವು ನಮ್ಮ ವಾಹನ ಸಂಗ್ರಹಾಲಯದಲ್ಲಿ ಈಗ ಒಂದು ಅಮೂಲ್ಯವಾದ ವಾಹನವಾಗಿದೆ.

ಮುಂದೆ ಶ್ರೀಗಳಿಗೆ ಕೊಂಚ ಅನಾರೋಗ್ಯವಿದ್ದಾಗ ಅವರ ಭೇಟಿಗೆ ಹೋಗಿದ್ದೆ. ಅಂದು ಪಕ್ಕದಲ್ಲೇ ನನ್ನನ್ನು ಕುಳ್ಳಿರಿಸಿ "ಧರ್ಮಸ್ಥಳದಲ್ಲಿ ಏನೇನು ಸೇವಾ ಕಾರ್ಯಗಳು ನಡೆಯುತ್ತಿವೆ ತಿಳಿಸಿರಿ" ಎಂದು ಹೇಳಿದಾಗ ನಾನು ಚುಟುಕಾಗಿ ಹೇಳುತ್ತಿದ್ದೆ. ಆದರೆ ಅವರು ಅವುಗಳ ಕುರಿತು ಇನ್ನಷ್ಟು ವಿವರ ಕೇಳುತ್ತಿದ್ದರು. ನಾನು ಸಂಕೋಚದಿಂದ ಬಹಳ ಜನ ತಮ್ಮ ನಿರೀಕ್ಷೆಯಲ್ಲಿದ್ದಾರೆ ಎಂದು ಹೇಳಿ ಮಾತು ನಿಲ್ಲಿಸುತ್ತೇನೆ ಎಂದು ಹೇಳಿದಾಗ "ಇಲ್ಲ, ನೀವು ಇನ್ನಷ್ಟು ಹೇಳಬೇಕು" ಎಂದು ಕುತೂಹಲ ತೋರಿಸುತ್ತಿದ್ದುದು ನನ್ನ ಸೌಭಾಗ್ಯವೆಂದು ತಿಳಿಯುತ್ತೇನೆ. ಹಿರಿಯರ ವರದಿಯನ್ನು ಒಪ್ಪಿಸುವಂತೆ ನಾನು ಹೇಳಿಕೊಂಡಾಗ ನನಗೆ ತೃಪ್ತಿಯುಂಟಾಯಿತು.

ಅತ್ಯಂತ ತಾಳ್ಮೆ ಮತ್ತು ಸಹನೆಗೆ ಪೂಜ್ಯರು ಒಂದು ಮೂರ್ತಿರೂಪ. ಯಾವುದೇ ಸಂದರ್ಭದಲ್ಲಿ ತಾಳ್ಮೆ ಕೆಡದ ಅವರ ವರ್ಚಸ್ಸಿನಿಂದಾಗಿ ಕೋಪ ಸಂಘರ್ಷದ ಭಾವನೆಗಳಿಂದ ಬಂದವರು ಶರಣಾಗಿ ಹೋಗಿದ್ದರೆಂಬುದನ್ನು ತಿಳಿದೆ. ಅವರು ಕೊಟ್ಟ ಶ್ರೇಷ್ಠ ಕೊಡುಗೆ—



ಇಂದಿನ ಶ್ರೀಗಳು. ಎಳವೆಯಲ್ಲೇ ಇಂದಿನ ಶ್ರೀಗಳ ವ್ಯಕ್ತಿತ್ವವನ್ನು ರೂಪಿಸಿ, ಅವರಿಗೆ ಶಿಷ್ಯತ್ವವನ್ನು ಪ್ರದಾನ ಮಾಡಿದರು. ಅವರ ನಿರೀಕ್ಷೆ ಹುಸಿಯಾಗದಂತೆ, ಇಂದಿನ ಶ್ರೀಗಳವರು ತಮ್ಮ ಹಿರಿಯರ ಸದ್ಗುಣಗಳನ್ನು ಮೈಗೂಡಿಸಿಕೊಂಡು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ, ವೈದ್ಯಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಗಮನಾರ್ಹವಾದ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಶ್ರೇಷ್ಠ ಗುಣಮಟ್ಟದ ಸಂಸ್ಥೆಗಳನ್ನು ನಿರ್ಮಾಣ ಮಾಡಿ, ಕಾರ್ಯಕ್ಷೇತ್ರವನ್ನು ವಿಸ್ತರಿಸಿ ತ್ರಿವಿಕ್ರಮ ಹೆಜ್ಜೆಯನ್ನು ಇಟ್ಟಿದ್ದಾರೆ.

ಶಾಂತಿ ಮತ್ತು ಅಭಿವೃದ್ಧಿಯ ಮೂರ್ತಿಸ್ವರೂಪದಂತಿದ್ದ ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳವರ ದಿವ್ಯಾತ್ಮಕ್ಕೆ ಗೌರವವನ್ನು ಸಮರ್ಪಿಸುತ್ತಿದ್ದೇನೆ.

□

ಭಕ್ತೆಯಾನಪ್ಪೆನಯ್ಯಾ, ಕರ್ತೃಭೃತ್ಯವ ನಾನರಿಯೆ.
ಮಾಹೇಶ್ವರಿಯಾನಪ್ಪೆನಯ್ಯಾ
ವ್ರತನೇಮಫಲವ ನಾನರಿಯೆ.
ಪ್ರಸಾದಿಯಾನಪ್ಪೆನಯ್ಯಾ
ಅರ್ಪಿತಾನರ್ಪಿತವೆಂಬ ಭೇದವ ನಾನರಿಯೆ.
ಪ್ರಾಣಲಿಂಗಿಯಾನಪ್ಪೆನಯ್ಯಾ
ಅನುಭಾವದ ಗಮನವ ನಾನರಿಯೆ.
ಶರಣೆಯಾನಪ್ಪೆನಯ್ಯಾ
ಶರಣಸತಿ ಲಿಂಗಪತಿ ಎಂಬ ಭಾವನೆ ನಾನರಿಯೆ.
ಐಕ್ಯಳಾನಪ್ಪೆನಯ್ಯಾ, ಬೆರಸಿ ಭೇದವ ನಾನರಿಯೆ.
ಚನ್ನಮಲ್ಲಿಕಾರ್ಜುನಯ್ಯಾ, ಷಟ್‌ಸ್ಥಲದಲ್ಲಿ ನಿಃಸ್ಥಲವಾಗಿಪ್ಪೆನು.

**ಅಕ್ಕಮಹಾದೇವಿ**

# ಸಮಾಜಮುಖಿ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು

**ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು**
ಎಡೆಯೂರು ಶ್ರೀ ಜ. ತೋಂಟದಾರ್ಯ ಸಂಸ್ಥಾನ ಮಠ, ಗದಗ

ಪೂಜನೀಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ನಮ್ಮ ಮೇಲೆ ಪ್ರಭಾವ ಬೀರಿದ, ನಮ್ಮ ಕಾರ್ಯಗಳಿಗೆ ಪ್ರೋತ್ಸಾಹ ನೀಡಿದ ಮಹನೀಯರಲ್ಲೊಬ್ಬರು. ಪರಿಚಯದ ಪ್ರಾರಂಭದ ದಿನಗಳಲ್ಲೇ ತುಂಬ ಆತ್ಮೀಯರೆನಿಸಿಬಿಡುತ್ತಿದ್ದ ಅವರ ಅಂತಃಕರಣ ತುಂಬಿದ ವ್ಯಕ್ತಿತ್ವ ನಮಗೆ ಅರಿವಿಲ್ಲದಂತೆಯೇ ನಮ್ಮನ್ನಾವರಿಸಿಕೊಂಡುಬಿಟ್ಟಿತ್ತು.

ಮೈಸೂರಿಗೆ ನಾವು ಹೋದಾಗಲೆಲ್ಲ ಉಳಿಯುತ್ತಿದ್ದುದು ಸುತ್ತೂರು ಮಠದಲ್ಲಿಯೇ. ಅವರು ಕುಳಿತುಕೊಳ್ಳುವ ಕೋಣೆಯಲ್ಲಿದ್ದ ಸಿದ್ಧಲಿಂಗೇಶ್ವರರ, ಬಸವಣ್ಣನವರ ರೂಪುಚಿತ್ರಗಳನ್ನು ಕಂಡು ಪುಳಕಗೊಂಡಿದ್ದೆವು. ಗದುಗಿನ ಶ್ರೀಮಠದ 'ಲಿಂಗಾಯತ ಅಧ್ಯಯನ ಸಂಸ್ಥೆ'ಯ ಬಗೆಗೆ ಅವರಿಗೆ ತುಂಬ ಪ್ರೀತಿ, ಅಭಿಮಾನ. ನಾವು ಮೈಸೂರಿಗೆ ಹೋದಾಗಲೆಲ್ಲ ಆ ಬಗೆಗೆ ಪ್ರಸ್ತಾಪ ಮಾಡುತ್ತಿದ್ದುದು ನಮಗೆ ತುಂಬ ಖುಷಿ ಕೊಡುತ್ತಿತ್ತು. ಉತ್ತರ ಕರ್ನಾಟಕದ ಬಹುತೇಕ ಸ್ವಾಮಿಗಳು ಮೈಸೂರಿಗೆ ಹೋದಾಗಲೆಲ್ಲ ವಾಸ್ತವ್ಯ ಮಾಡುತ್ತಿದ್ದುದು ಸುತ್ತೂರು ಮಠದಲ್ಲಿಯೇ. ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ



ಸ್ವಾಮಿಗಳಿಗೆ ಕ್ಯಾತನಹಳ್ಳಿ ಸ್ವಾಮಿಗಳವರು ತುಂಬ ಹತ್ತಿರ. ಕ್ಯಾತನಹಳ್ಳಿ ಶ್ರೀಗಳು ಅನೇಕ ಸಂದರ್ಭಗಳಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳವರ ವ್ಯಕ್ತಿತ್ವದ ಔನ್ನತ್ಯದ ಬಗ್ಗೆ ಹೇಳುತ್ತಿದ್ದರು. ಮೈಸೂರಿನ ಗವಿಮಠದ ಪೂಜ್ಯ ಗೌರೀಶಂಕರ ಸ್ವಾಮಿಗಳ ಬಗೆಗೆ ಹೆಚ್ಚಿನ ತಿಳುವಳಿಕೆ ಬಂದುದು ಇಲ್ಲಿಯೆ.

ಅದೇನೋ ಉತ್ತರ ಕರ್ನಾಟಕದ ಮಠಗಳ ಬಗ್ಗೆ, ಮಠಾಧೀಶರ ಬಗ್ಗೆ ಪೂಜ್ಯರಿಗೆ ವಿಶೇಷ ಪ್ರೀತಿ—ಅಭಿಮಾನ. ಧಾರವಾಡದ ಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳ ಬಗ್ಗೆ, ಪೂಜ್ಯ ಶ್ರೀ ಬಂಥನಾಳ ಶಿವಯೋಗಿಗಳ ಬಗ್ಗೆ ಎದೆತುಂಬಿದ ಗೌರವ. ಈ ಭಾಗದ ಸ್ವಾಮಿಗಳು ಹೋದಾಗ ಪ್ರೀತಿ-ಗೌರವದಿಂದ ಕಾಣುತ್ತಿದ್ದರಲ್ಲದೆ ಪೂಜೆಗೆ–ಪ್ರಸಾದಕ್ಕೆ ಎಲ್ಲ ವ್ಯವಸ್ಥೆಯನ್ನು ಮಾಡಿಸುತ್ತಿದ್ದರು. ಪ್ರಸಾದ ಸಮಯದಲ್ಲಿ ಖುದ್ದಾಗಿ ನಿಂತು ಕುಶಲೋಪರಿ ವಿಚಾರಿಸುತ್ತಾ ಉಪಚರಿಸುತ್ತಿದ್ದುದು ತಾಯ್ತನವನ್ನು ನೆನಪಿಸುತ್ತಿತ್ತು. ದೊಡ್ಡವರಿರಲಿ, ಸಣ್ಣವರಿರಲಿ ಎಲ್ಲರಲ್ಲೂ ತೋರುತ್ತಿದ್ದ ಆ ಕಕ್ಕುಲಾತಿ ಮರೆಯದಂಥದ್ದು. ಪೂಜ್ಯರು ಉತ್ತರ ಕರ್ನಾಟಕಕ್ಕೆ ಬಂದಾಗಲೆಲ್ಲ ತಪ್ಪದೇ ಧಾರವಾಡದ ಮುರುಘಾಮಠಕ್ಕೆ, ಹುಬ್ಬಳ್ಳಿಯ ಮೂರುಸಾವಿರ ಮಠಕ್ಕೆ ಭೇಟಿ ನೀಡುತ್ತಿದ್ದರು. ಅಲ್ಲಿಯ ಸಾಧಕರ ಯೋಗಕ್ಷೇಮ ವಿಚಾರಿಸುತ್ತಿದ್ದರು.

ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಒಡೆಯರವರಿಗೆ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಮೇಲೆ ಅನನ್ಯ ಭಕ್ತಿ. ಆ ಕಾರಣಕ್ಕಾಗಿಯೇ ಮೈಸೂರಿನ ಹೃದಯಸ್ಥಾನದಲ್ಲಿರುವ ಆನೆಕರೋಟಿ, ಕುದುರೆ ಕರೋಟಿಗಳನ್ನು ಪೂಜ್ಯರಿಗೆ ಸಾಮಾನ್ಯ ಬೆಲೆಗೆ ಕೊಟ್ಟರು. ಅಲ್ಲದೆ 'ರಾಜಗುರುತಿಲಕ' ಎಂಬ ಗೌರವ ಪ್ರಶಸ್ತಿಯನ್ನು ಅರ್ಪಿಸಿದರು.

ಆ ಭಾಗದಲ್ಲಿ ಶ್ರೀಗಳ ಪ್ರಭಾವ ಎಷ್ಟಿತ್ತೆಂದರೆ ಸಾಮಾನ್ಯ ಜನತೆಯ ಪಾಲಿಗೆ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಇನ್ನೊಬ್ಬ ಮಹಾರಾಜರೇ. ಇವರು ಧಾರ್ಮಿಕ ಮಹಾರಾಜರು!

ನಮ್ಮ ನಾಡಿನ ಖ್ಯಾತ ಅರ್ಥಶಾಸ್ತ್ರಜ್ಞ, ಅಂತರಾಷ್ಟ್ರೀಯ ಖ್ಯಾತಿಯ ವಿದ್ವಾಂಸ ಡಾ. ಡಿ.ಎಂ. ನಂಜುಂಡಪ್ಪ ಪೂಜ್ಯರ ಶಿಷ್ಯರಲ್ಲೊಬ್ಬರು. ಪೂಜ್ಯರ ಮೊದಲ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಡಾ. ನಂಜುಂಡಪ್ಪ ಅವರು ಆಡಿದ ಮಾತು ಶ್ರೀಗಳ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ.

ನಂಜುಂಡಪ್ಪ ಅವರದು ಬಡತನದ ಬಾಲ್ಯ. ಶಾಲೆ ಕಲಿಯಬೇಕೆಂದು ಆಶಿಸಿ ಆಶ್ರಯ ಕೋರಿ, ಡಾವಣಗೇರಿ (ದಾವಣಗೆರೆ) ಭಾಗದಿಂದ ಮೈಸೂರಿಗೆ ಬಂದು ಪೂಜ್ಯ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಲ್ಲಿ ಬಿನ್ನವಿಸಿಕೊಂಡರಂತೆ "ನಾನು ಬಡವ, ವಿದ್ಯೆ ಕಲಿಯಬೇಕೆಂಬ ಅಪಾರ ಅಪೇಕ್ಷೆ ಇದೆ. ಶ್ರೀಮಠದಲ್ಲಿದ್ದುಕೊಂಡು ಓದಬಹುದೇ?" ಎಂದು. ಶ್ರೀಗಳು 'ಆಗಲಿ' ಎಂದು ಒಪ್ಪಿಕೊಂಡರಂತೆ. ಆದರೆ ನಂಜುಂಡಪ್ಪ ತಾವೊಬ್ಬರೇ ಹೋಗಿರಲಿಲ್ಲ. ಜತೆಗೊಬ್ಬ

ಮುಸಲ್ಮಾನ ಹುಡುಗ! "ಬುದ್ಧೀ ಈತ ಮುಸಲ್ಮಾನ, ನಾವಿಬ್ಬರೂ ಸ್ನೇಹಿತರು. ಆತನೂ ತುಂಬ ಕಷ್ಟದಲ್ಲಿದ್ದಾನೆ. ನನ್ನ ಜತೆಗೆ ಈತನಿಗೂ ಇರಲು ಅವಕಾಶವಿದೆಯೇ" ಎಂದು ಸಂಕೋಚದಿಂದಲೇ ಕೇಳಿದಾಗ "ಅದಕ್ಕೇನು? ಆತನೂ ಇರಲಿ" ಎಂದರಂತೆ. ಈ ಘಟನೆ ಹೇಳಿ ಪೂಜ್ಯರ ಮಾನವೀಯ ನಿಲುವನ್ನು ಕೊಂಡಾಡಿದ ನಂಜುಂಡಪ್ಪನವರು ಮತ್ತೆ ಮಾತು ಮುಂದುವರೆಸಿದರು. "ನಾನು ಓದಿ, ಅನೇಕ ಉನ್ನತ ಹುದ್ದೆಗಳಲ್ಲಿದ್ದು ಕಾರ್ಯ ನಿರ್ವಹಿಸಿದೆ. ಸೆಕ್ರೆಟರಿಯೇಟಿನಲ್ಲಿಯೂ ಸರ್ಕಾರದ ಕಾರ್ಯದರ್ಶಿಯಾಗಿ ಕೆಲಸ ಮಾಡಿದೆ. ಆದರೆ ಒಂದೇ ಒಂದು ಸಲ ಕೂಡ ಪೂಜ್ಯರು 'ಇಂಥ ಕೆಲಸ ಮಾಡಿಕೊಡಿ' ಎಂದು ಹೇಳಲಿಲ್ಲ. ಅದು ಅವರ ಘನತೆ; ಉನ್ನತ ಆದರ್ಶ."

ಪೂಜ್ಯರದು ತುಂಬ ದೂರದೃಷ್ಟಿ. ತಮ್ಮ ಉತ್ತರಾಧಿಕಾರಿಗಳಿಗೆ ಸಮಗ್ರ ಕರ್ನಾಟಕದ ಪರಿಚಯವಿರಲಿ ಎಂಬ ಕಾರಣಕ್ಕಾಗಿ ಸದ್ಯದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳನ್ನು ಧಾರವಾಡದಲ್ಲಿ ಓದಲು ಇಟ್ಟರು. ಮುರುಘಾಮಠದಲ್ಲಿದ್ದುಕೊಂಡು ಓದಿದ ದೇಶಿಕೇಂದ್ರ ಶ್ರೀಗಳು ಪೂಜ್ಯರ ಕನಸುಗಳನ್ನೆಲ್ಲ ನನಸು ಮಾಡುವ ಧೀಮಂತರಾಗಿ ಬೆಳೆದಿದ್ದಾರೆ.

ನಮ್ಮ ಜನತೆಯ ಅಜ್ಞಾನ, ಮೂಢನಂಬಿಕೆ, ಬಡತನಕ್ಕೆಲ್ಲ ಅನಕ್ಷರತೆಯೆ ಮೂಲಕಾರಣ ಎಂದು ಗುರುತಿಸಿದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅನೇಕ ಶಿಕ್ಷಣ ಸಂಸ್ಥೆಗಳ ಉದಯಕ್ಕೆ ಕಾರಣರಾದರು. ನಂತರ ಅವರ ಉತ್ತರಾಧಿಕಾರಿಗಳಾದ ಪೂಜ್ಯ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಇಡೀ ದೇಶಕ್ಕೆ ಮಾದರಿಯಾಗುವಂಥ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಸಮಸ್ತ ಕರ್ನಾಟಕಕ್ಕೆ ಹೆಮ್ಮೆ ತಂದರು. ನಾಡ ಗಡಿ ಮೀರಿ, ದೇಶದ ಎಲ್ಲೆಯನ್ನೂ ದಾಟಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಬೆಳೆದುನಿಂತ ಪರಿ, ಯಾರಲ್ಲೂ ಬೆರಗು ಮೂಡಿಸದೇ ಇರದು. ದುಬೈನಲ್ಲಿ, ಮಾರಿಷಸ್ ದ್ವೀಪದಲ್ಲಿ ಕೂಡಾ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ ಎಂದರೆ ಅದರ ಅಗಾಧತೆ ಅರ್ಥವಾದೀತು. ಇತ್ತೀಚೆಗೆ ಅಮೇರಿಕದಲ್ಲೂ ಸಮಾಜಮುಖಿ ಕಾರ್ಯಗಳಿಗಾಗಿ 'ಸ್ಪಿರಿಚ್ಯುಯಲ್ ಮಿಷನ್' ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ ಅದನ್ನು ರೂಪುಗೊಳಿಸುತ್ತಿರುವುದು ನಿಜಕ್ಕೂ ಪ್ರಶಂಸನೀಯ ಸಾಧನೆಯೆ.

ಮಠ ಹೇಗೆ ಕಟ್ಟಬೇಕು, ಮಠದ ಆಡಳಿತ ಹೇಗೆ ನಡೆಸಬೇಕು ಎಂಬುದಕ್ಕೆ ಮೈಸೂರಿನ ಸುತ್ತೂರು ಮಠ ಒಂದು ಮಾದರಿ. ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅದನ್ನೊಂದು ಆಧ್ಯಾತ್ಮಿಕ ಶಾಲೆಯನ್ನಾಗಿ, ಸಾಮಾಜಿಕ ಸ್ವಾಸ್ಥ್ಯ ಕೇಂದ್ರವನ್ನಾಗಿ ರೂಪಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದರು. ಅವರ ಬದುಕು ಎತ್ತರಕ್ಕೆ ಬೆಳೆಯಬೇಕೆನ್ನುವ ಸ್ವಾಮಿಗಳಿಗೊಂದು ಮಾದರಿ, ಒಂದು ಆದರ್ಶ!

# ಯುಗಪ್ರಜ್ಞೆಯ ಸಾಕಾರಮೂರ್ತಿಗಳು

**ಶ್ರೀ ಮ.ನಿ.ಪ್ರ.ಸ್ವ.ಜಗದ್ಗುರು ಡಾ. ಅನ್ನದಾನೀಶ್ವರ ಮಹಾಸ್ವಾಮಿಗಳು**
ಸಂಸ್ಥಾನ ಮಠ, ಮುಂಡರಗಿ, ಗದಗ ಜಿಲ್ಲೆ

ಪರಮಪೂಜ್ಯರನ್ನು ಪ್ರಥಮತಃ ಸಂದರ್ಶಿಸಿದ್ದು ಮಲ್ಲನಮೂಲೆ ವಿರಕ್ತಮಠದಲ್ಲಿ. ಇದೊಂದು ಆಕಸ್ಮಿಕ ಅವಕಾಶ. ವಿರಕ್ತಮಠದ ಶ್ರೀ ಚನ್ನಬಸವಸ್ವಾಮಿಗಳ ಆದರಾಭಿಮಾನಗಳ ಫಲವಾಗಿ, ಬಹುದೂರ ಅಂದರೆ ವಾತಾಪಿ ಬಾದಾಮಿಯ ಶ್ರೀಮದ್ವೀರಶೈವ ಶಿವಯೋಗ ಮಂದಿರದಿಂದ ಹೊಸಪೇಟೆಯ ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳವರೊಡನೆ ಮಲ್ಲನಮೂಲೆ ಮಠಕ್ಕೆ ಆಗಮಿಸಿದೆವು. ಬೆಳಗಿನ ಮಂಗಲಮಯ ವಾತಾವರಣ, ಮಳೆ ಸಾಕಷ್ಟು ಸುರಿದು ಕಾರ್ಯಕ್ರಮಕ್ಕೆ ವ್ಯತ್ಯಯವಾಗಿದ್ದರೂ ಮಠದ ಶ್ರೀಗಳ ಹಾಗೂ ಕಾರ್ಯಕರ್ತರ ಕ್ರಿಯಾಶೀಲತೆಯಿಂದಾಗಿ ಕಾರ್ಯಕ್ರಮ ಸುಗಮವಾಯಿತು.

ಇರುಳೆಲ್ಲ ಪ್ರಯಾಣಿಸಿ ದಣಿವಾಗಿದ್ದರೂ ಪೂಜ್ಯ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಸ್ವಾಮಿಯವರನ್ನು ಕಂಡು ಸಂತಸವಾಗಿತ್ತು. ದರ್ಶನೀಯ ವ್ಯಕ್ತಿಗಳವರು, ಚಿನ್ನದಂಥ ವರ್ಣ, ಸುಂದರ ಮುಖಮಂಡಲ, ರಾಜತೇಜ - ಶಿವಯೋಗ ತೇಜದೊಂದಿಗೆ ಸಂದರ್ಶಿಸಿದವರನ್ನು ಸಂತೃಪ್ತಗೊಳಿಸುತ್ತಿತ್ತು. ಸುತ್ತೂರು ಮಠದ ಹಿಂದಿನ ಮಹಾಸ್ವಾಮಿಗಳವರ

ಮಂತ್ರಶಕ್ತಿಯನ್ನು ಮೈಗೂಡಿಸಿಕೊಂಡ ಪರಮಪೂಜ್ಯರು, ಸಮಾಜಮುಖಿಯಾಗಿ ಕರ್ತವ್ಯದಕ್ಷರಾಗಿದ್ದರು. ಆಂಗ್ಲರ ಆಡಳಿತದಲ್ಲಿ ನಮ್ಮ ಜನ ಅಜ್ಞಾನ, ಬಡತನದಿಂದ ಬಳಲುತ್ತಿರುವುದನ್ನು ಕಂಡು ಮನದಲ್ಲಿ ಮರುಗಿದರು. ಯುಗಪ್ರಜ್ಞೆ ಜಾಗೃತವಾಗಿ ಕಾರ್ಯಪ್ರವೃತ್ತರಾದರು. ಬಡಮಕ್ಕಳ ಕಲ್ಯಾಣ ಬಯಸಿ ಅನ್ನದಾನ-ವಿದ್ಯಾದಾನಕ್ಕೆ ಅಣಿಯಾದರು. ಸಾಮಾನ್ಯವಾಗಿ ಪುಣ್ಯಾತ್ಮರ ಬದುಕು ಪರೋಪಕಾರಕ್ಕಾಗಿಯೇ ರೂಪುಗೊಂಡಿರುವುದು.

ಚಂದನದ ಕಟ್ಟಿಗೆ ತನ್ನನ್ನು ಸವೆಸಿಕೊಂಡು ಸುಗಂಧವನ್ನು ಸೂಸುತ್ತದೆ. ಸುಗಂಧಮಲ್ಲಿಗೆ ತನ್ನ ಪರಿಮಳವನ್ನು ಬೀರಿ ಬಾಡುತ್ತದೆ. ನದಿಗಳು ವನ್ಯಸಂಪತ್ತನ್ನು, ಜೀವರಾಶಿಗಳನ್ನು ಸಂತೃಪ್ತಗೊಳಿಸಿ ಸಾಗರ ಸೇರಿ ತನ್ನತನವನ್ನು ಮರೆಮಾಚುತ್ತವೆ. ಮಹಾತ್ಮರು ಲೋಕದವರಂತೆ ಬಾರದೆ ಪುಣ್ಯಪುರುಷರಾಗಿ ಜನಿಸಿ ಜ್ಞಾನಿಗಳಾಗಿ ಬಾಳುತ್ತಾರೆ. ತಮ್ಮ ಪರಿಸರದಲ್ಲಿ ಬಂದವರನ್ನು ಸಂತೈಸಿ ಜ್ಞಾನಸಂಪತ್ತನ್ನು ಕರುಣಿಸುತ್ತಾರೆ. ಜನತೆಯ ಅಜ್ಞಾನವನ್ನು ನಿವಾರಿಸಿ ಮಾನವೀಯ ಮೌಲ್ಯವನ್ನು ಅರಿಯುವಂತೆ ಮಾಡುವರು. ಸಮಾಜೋಧಾರ್ಮಿಕ ಸೇವೆಯನ್ನು ಕೈಗೊಂಡು ಸಕಲ ಮಾನವ ಜೀವಾತ್ಮರನ್ನು ಮಾನವರನ್ನಾಗಿಸಿ ಮೇಲ್ಮಟ್ಟಕ್ಕೆ ತಲುಪಿಸುತ್ತಾರೆ. ಈ ನಿಟ್ಟಿನಲ್ಲಿ ಸುತ್ತೂರು ಲಿಂ. ಜಗದ್ಗುರುಗಳು ಪ್ರಾರಂಭದಲ್ಲಿ ಸಾಧಾರಣ ರೀತಿಯಲ್ಲಿ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿದರು. ಜೊತೆಜೊತೆಗೆ ಪ್ರಸಾದ ವಿತರಣೆಯೂ ನಡೆಯಿತು.

> ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ
> ಅಡಿಗಶ್ವಮೇಧ ಫಲ ಧರ್ಮಕಾರ್ಯಕ್ಕೆ
> ಮಡಿಯಲೇಬೇಕು ಸರ್ವಜ್ಞ||

ಎನ್ನುವಂತೆ ಪರಮಪೂಜ್ಯರು ಮುಂದಿಟ್ಟ ಅಡಿಯನ್ನು ಹಿಂದಿಡಲಿಲ್ಲ. ಧರ್ಮಕಾರ್ಯವನ್ನು ಧೈರ್ಯದಿಂದ ಮುನ್ನಡೆಸಿದರು. ತಮ್ಮನ್ನೇ ಮುಡುಪಾಗಿಸಿದರು. ಅವರಲ್ಲಿ ಉತ್ಸಾಹವಿತ್ತು, ಸಾಹಸಪ್ರವೃತ್ತಿಯೊಂದಿಗೆ ಧೈರ್ಯ ತುಂಬಿತ್ತು. ಅಪರಿಮಿತ ಬುದ್ಧಿವಂತರು, ಸಾಕಷ್ಟು ಆರ್ಥಿಕ ಶಕ್ತಿಯೂ ಲಭಿಸಿತು. ಪರಾಕ್ರಮಶಾಲಿಗಳಾಗಿ ಧರ್ಮವನ್ನು, ಶಿಕ್ಷಣವನ್ನು ಜನಮನಕ್ಕೆ ಹಂಚಿದರು. ಬಹುಶಃ ಈ ಪುಣ್ಯಾತ್ಮರನ್ನು ಅವಲೋಕಿಸಿಯೇ ಸುಭಾಷಿತಕಾರನು:

> ಉತ್ಸಾಹಃ ಸಾಹಸಂ ಧೈರ್ಯಂ ಬುದ್ಧಿಶಕ್ತೀ ಪರಾಕ್ರಮಃ |
> ಷಡೇತೇ ಯಸ್ಯ ತಿಷ್ಠಂತಿ ತಸ್ಯ ದೇವಃ ಸಹಾಯಕೃತ್ ||

ಉತ್ಸಾಹ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ, ಪರಾಕ್ರಮಗಳೆಂಬ ಆರು ಗುಣಗಳು ಯಾರಲ್ಲಿರುತ್ತವೆಯೋ ಅವರಿಗೆ ಸಾಕ್ಷಾತ್ ಪರಮೇಶ್ವರನು ಸಹಾಯ ಮಾಡುವನಂತೆ. ಹಾಗೆಯೇ ಸುತ್ತೂರು ಶ್ರೀಗಳ ದಕ್ಷತೆಯನ್ನು ಕಂಡ ಮೈಸೂರರಸರು ಅನೇಕ ರೀತಿಯಲ್ಲಿ



ಸಹಾಯ ಮಾಡಿದರು. ಸಂಸ್ಥಾನದ ಅನೇಕ ಇಮಾಂತಿಗಳು ಪೂಜ್ಯರ ಧರ್ಮಕಾರ್ಯಕ್ಕಾಗಿ ಸಮರ್ಪಿತವಾದವು. ಬೃಹದಾಶ್ರಯ ಲಭಿಸಿದಾಗ ಕಾರ್ಯಪ್ರವೃತ್ತರಾಗುವುದು ಹೆಚ್ಚಲ್ಲ. ತೊಂದರೆಯಿರುವಾಗಲೂ ಉತ್ಸಾಹಗಳೂ ಧೈರ್ಯಶೀಲರಾದ ಜಗದ್ಗುರುಗಳು ತಮ್ಮ ಚಿನ್ನದ ಲಿಂಗದ ಕರಡಿಗೆಯನ್ನು ಮಾರಿ ಪ್ರಸಾದ ವ್ಯವಸ್ಥೆ ಮಾಡಿದ್ದು ಸಾಮಾನ್ಯ ಮಾತಲ್ಲ. ಬೆಂಕಿಯ ಮೇಲೆ ಬೆಣ್ಣೆ ಕರಗಿದರೆ, ಮಹಾತ್ಮರ ಮನಸ್ಸು ದುಃಖಿಗಳ ಅಳಲನ್ನು ಕಂಡರೆ ಸಾಕು ತಮ್ಮ ಸರ್ವಸ್ವವನ್ನು ತ್ಯಾಗ ಮಾಡುತ್ತಾರೆ.

ಶ್ರೀ ಶಿವರಾತ್ರಿ ರಾಜೇಂದ್ರರ ಹೃದಯವು ದಯಾಪೂರ್ಣವಾಗಿತ್ತು. "ದಯವೇ ಧರ್ಮದ ಮೂಲ"ವೆಂಬ ಶರಣವಾಣಿ ಅವರಲ್ಲಿ ಮನೆಮಾಡಿತ್ತು. ಮಾತು ಮಂತ್ರವಾಗಿತ್ತು. ಮಂತ್ರವು ಯಥಾರ್ಥವನ್ನೇ ಬಿಂಬಿಸುತ್ತದೆ. ಮನಸ್ಸು ಪರಹಿತ ಕಾರ್ಯದಲ್ಲಿ ನಿರತ ವಾಗಿರುತ್ತಿತ್ತು. ಅಂತೆಯೇ

> ಸದಯಂ ಹೃದಯಂ ಯಸ್ಯ ಭಾಷಿತಂ ಸತ್ಯಭೂಷಿತಮ್ |
> ಕಾಯಃ ಪರಹಿತೇ ಯಸ್ಯ ಕಲಿಸ್ತಸ್ಯ ಕರೋತಿಕಿಮನಃ ||

ಕವಿವಾಣಿ ಮೊಳಗಿದಂತೆ ಪೂಜ್ಯಶ್ರೀಗಳವರು ಕಲಿಕಾಲಕ್ಕೆ ಅಂಜದೆ ಅಳುಕದೆ ಹಲವಾರು ಉತ್ತಮ ಕಾರ್ಯಗಳನ್ನು ನೆರವೇರಿಸಿದರು. ನಿರಂತರವಾಗಿ ಧರ್ಮಕಾರ್ಯಗಳು ನಿರ್ವಿಘ್ನವಾಗಿ ನಡೆಯುವಂತೆ ಧಾರ್ಮಿಕದತ್ತಿ ನಿಧಿಯನ್ನು ಸ್ಥಾಪಿಸಿದರು. ಇದರ ಫಲವಾಗಿಯೇ ಇಂದು ಶರಣ ಸಾಹಿತ್ಯ ಪರಿಷತ್ ಪ್ರತ್ಯೇಕವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ನಡೆದಿದೆ. ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಉತ್ತಮ ಮೌಲಿಕ ಸಾಹಿತ್ಯ ಜನಮನವನ್ನು ತೃಪ್ತಿಗೊಳಿಸುತ್ತಲಿದೆ. ಪೂಜ್ಯರ ಪರಿಶ್ರಮಕ್ಕೆ ಸದಯಹೃದಯಕ್ಕೆ ಸಾರ್ಥಕ ಉತ್ತರಾಧಿಕಾರಿಗಳು ಲಭ್ಯವಾಗಿ ಗುರುಗಳಿಗಿಂತ ಮುನ್ನಡೆ ಸಾಧಿಸುತ್ತಲಿರುವುದು ಹೆಮ್ಮೆಯ ಸಂಗತಿ. ಜಗದ್ಗುರು ರಾಜೇಂದ್ರ ಮಹಾಸ್ವಾಮಿಗಳು ಅನ್ವರ್ಥಕಚೇತನರು. ಅವರನ್ನು ದರ್ಶಿಸಿದ್ದು ಅದೇ ಮೊದಲು, ಅದೇ ಕೊನೆ. ಆದರೂ ಅವರ ಪ್ರಭಾವವಲಯ ಮರೆಯುವಂಥಹದಲ್ಲ. ಸದಾ ಸ್ಮರಣೀಯರು. ಅವರು ನೀಡಿದ ಧಾರ್ಮಿಕ ದತ್ತಿಯಿಂದ ಶ್ರೀಸನ್ನಿಧಿಯ "ಷಟ್‌ಸ್ಥಲ: ಒಂದು ಅಧ್ಯಯನ" ಮಹಾನ್ ಗ್ರಂಥಕ್ಕೆ ಗೌರವ ಪ್ರಶಸ್ತಿ ಹತ್ತು ಸಾವಿರ ನಗದು ಪುರಸ್ಕಾರ ಲಭಿಸಿದ್ದು ಸಂತಸದ ಸಂಗತಿ ಮತ್ತು ಗದಗ ಜಿಲ್ಲೆಯ ಶರಣ ಸಾಹಿತ್ಯದ ಎರಡನೆಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿದ ಆನಂದ ಮರೆಯುವಂಥದಲ್ಲ. ಇಂದಿನ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರು ಗುರುವಿಗೆ ತಕ್ಕ ಶಿಷ್ಯರಾಗಿ ಗುರುಗಳ ಮಣಿಹವನ್ನು ಪೂರೈಸುತ್ತಿರುವರು. ಸುತ್ತೂರು ಸಂಸ್ಥಾನದ ಖ್ಯಾತಿಯನ್ನು ದೇಶದಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ ಪ್ರಸಾರ ಮಾಡುತ್ತಿರುವುದು ಗೌರವದ ಗರಿಯೆನಿಸಿದೆ. ಎಲ್ಲವೂ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಮಹಾಮಣಿಹವೆ !!

## ಸಂಗೀತ, ಸಾಹಿತ್ಯ ಪೋಷಕರು

**ಡಾ. ಪುಟ್ಟರಾಜ ಕವಿ ಗವಾಯಿಗಳವರು**
ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ

ನಮಗೆ ಪೂಜ್ಯ ಶ್ರೀಗಳವರ ಜೊತೆಗೆ ಅತ್ಯಂತ ಆತ್ಮೀಯ ಸಂಬಂಧವಿದ್ದು ಅದರೊಡನೆ ಮೈಸೂರಿನಲ್ಲಿದ್ದಾಗ ಕಳೆದ ಕ್ಷಣಗಳು ಅವಿಸ್ಮರಣೀಯ. ಅದರಲ್ಲಿ ನಾವು ಧರ್ಮ, ಸಂಗೀತ, ಕಲಾಪ್ರಸಾರಕ್ಕಾಗಿ ಹೆಚ್ಚು ಪ್ರಯಾಣ ಮಾಡುವುದನ್ನು ಕಂಡು ಶ್ರೀಗಳು ಹೆಚ್ಚಿಗೆ ಪ್ರಯಾಣ ಮಾಡಬೇಡಿ ತಮ್ಮಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಹಾಗೂ ರಾತ್ರಿ ಪ್ರಯಾಣ ಮಾಡದಿರಲು ಅಪ್ಪಣೆ ಮಾಡುತ್ತಿದ್ದರು. ಸಂಗೀತ, ಸಾಹಿತ್ಯ, ಕಲೆ, ಧರ್ಮ ಇವುಗಳ ಬಗೆಗೆ ಪೂಜ್ಯರು ಸಾಕಷ್ಟು ಪ್ರೋತ್ಸಾಹ (ಉತ್ತೇಜನ) ನೀಡುತ್ತಿದ್ದರು. ಅವರ ಆ ಪ್ರೀತಿಯ ಗೌರವಪೂರ್ಣ ಸಲುಗೆ ಹಾಗೂ ನಮಗೆ ನೀಡುತ್ತಿದ್ದ ಅತ್ಯುತ್ತಮ ಆತಿಥ್ಯ ನಿಜಕ್ಕೂ ಪ್ರಶಂಸನೀಯ, ಸದಾ ಅಭಿನಂದನೀಯ. ಪೂಜ್ಯರ ಮಹಾನ್ ಚೈತನ್ಯಕ್ಕೆ ನಮ್ಮ ಶರಣು ಶರಣಾರ್ಥಿಗಳು. □

## ಮಾತೃಹೃದಯದ ದೈವತಾಸ್ವರೂಪಿ

**ಶ್ರೀ ಕುಮಾರನಿಜಗುಣ ಸ್ವಾಮಿಗಳು**
ಶ್ರೀ ಶಂಭುಲಿಂಗನ ಕ್ಷೇತ್ರ, ಚಿಲಕವಾಡಿ, ಕೊಳ್ಳೇಗಾಲ ತಾ.

1950ರಲ್ಲಿ ನಾನು ಎಸ್.ಎಸ್.ಎಲ್.ಸಿ.ಯನ್ನು ಮುಗಿಸಿದಾಗ ನಮ್ಮ ಕೊಳ್ಳೇಗಾಲ ತಾಲ್ಲೂಕು ಆಗಿನ ಮದ್ರಾಸು ಪ್ರಾಂತ್ಯಕ್ಕೆ ಸೇರಿದ್ದುದರಿಂದ ಅಲ್ಲಿಯೇ ಓದಬೇಕೆಂಬ ಆಶೆ ನನ್ನಲ್ಲಿ ಬೇರೂರಿತ್ತು. ಅದಕ್ಕೆ ನೀರೆರೆದು ಉತ್ತೇಜನ ಕೊಟ್ಟವರು ಅಂದಿನ ನಮ್ಮ ಸಮಾಜದ ಹಿತೈಷಿಗಳೂ ಮುಖಂಡರೂ ಆಗಿದ್ದ ತಿಮ್ಮರಾಜೀಪುರದ ಸಂಮಾನ್ಯ ಶ್ರೀ ಶಿವಮಲ್ಲೇದೇವರವರು. ಅವರ ಪ್ರೋತ್ಸಾಹದಿಂದ ಮದ್ರಾಸ್ ಸೇರಿ ಅಂದಿನ ಇಂಟರ್ಮೀಡಿಯಟ್, ಬಿ.ಎಸ್‌ಸಿ., ಹಾಗೂ ಬಿ.ಎಲ್. ಅನ್ನು ಓದಿ ಮುಗಿಸಿದೆ. ಈ ಮಧ್ಯೆ 1-11-1956 ರಂದು ಕೊಳ್ಳೇಗಾಲವು ಭಾಷಾವಾರು ಪ್ರಾಂತ್ಯರಚನೆಯ ಕಾಯಿದೆಯ ಪ್ರಕಾರ ವಿಶಾಲ ಮೈಸೂರು ಪ್ರಾಂತ್ಯಕ್ಕೆ ಸೇರ್ಪಡೆಯಾಗಿತ್ತು.

ಹೀಗಾಗಿ ನಾನು ವಕೀಲವೃತ್ತಿಯ ತರಬೇತಿಗಾಗಿ ಅಂದಿನ ಮೈಸೂರಿಗೆ ಬರಬೇಕಾಯ್ತು. ಓದುವಾಗ ಅಂದಿನ ಡಿ.ಎಂ.ಕೆ. ಪ್ರಭಾವಕ್ಕೆ ಒಳಗಾಗಿ ನನ್ನಲ್ಲಿ ನಾಸ್ತಿಕತೆ ತಳವೂರಿತ್ತು. 16-6-1957 ರಂದು ಮೈಸೂರಿಗೆ ಬಂದು ಅಂದು ಖ್ಯಾತ ವಕೀಲರಾಗಿದ್ದ ಸಂಮಾನ್ಯ ಶ್ರೀ ಬಿ. ರಾಮರಾಯರ ಕಛೇರಿಗೆ

ತರಬೇತಿಗಾಗಿ ಸೇರಿದ್ದಾಯಿತು. ಊಟ ಹಾಗೂ ವಸತಿಗೆ ಅಂದು ಜೆ.ಎಸ್.ಎಸ್. ವಿದ್ಯಾಪೀಠವು ಲಕ್ಷ್ಮೀಪುರದ ನಂಜುಮಳಿಗೆಯ ಆರ್.ಪಿ. ಮಲ್ಲಪ್ಪನವರ ಕಟ್ಟಡದಲ್ಲಿ "ತಲೆಮೇಲೆ ಭಾರ ಹೊರುವ ಪದ್ಧತಿ"ಯಂತೆ ನಡೆಸುತ್ತಿದ್ದ ಹಾಸ್ಟೆಲ್ಲಿಗೆ ಸೇರಿದೆ. ಅಂದು ಪ್ರಾಚ್ಯವಿದ್ಯಾಸಂಶೋಧನಾ ಸಂಸ್ಥೆಯಲ್ಲಿ ಸಂಶೋಧಕರಾಗಿದ್ದ ಹೊನ್ನೂರಿನ ಶ್ರೀ ಎಚ್.ಪಿ. ಮಲ್ಲೇದೇವರವರ ಪರಿಚಯವಾಯಿತು. ಅವರು ಸಂಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪರಮಭಕ್ತರು. ತುಂಬಾ ಚುರುಕಾಗಿ ಲವಲವಿಕೆಯಿಂದ ಓಡಾಡುತ್ತಿದ್ದ ಮದ್ರಾಸ್ ಪದವೀಧರನಾದ ನನ್ನನ್ನು ಜಗದ್ಗುರುಗಳಿಗೆ ಪರಿಚಯಿಸಬೇಕೆಂದು ಅವರು ನನ್ನನ್ನು ನಯವಾಗಿ ಪ್ರತಿ ಭಾನುವಾರವೂ ಒತ್ತಾಯಿಸುತ್ತಿದ್ದರು. ನನ್ನ ನಾಸ್ತಿಕ ಸ್ವಭಾವ ಅದಕ್ಕೆ ಒಪ್ಪುತ್ತಿರಲಿಲ್ಲ. ಅವರ ಈ ಒತ್ತಾಯ ಸುಮಾರು ಆರು ತಿಂಗಳು ಸಾಗಿತ್ತು. ಕೊನೆಗೆ ಅವರ ಒತ್ತಾಯಕ್ಕೆ ಮಣಿದು, "ನೋಡ್ರಿ, ಬುದ್ಧಿಯವರಿಗೆ ನಾನು ನಮಸ್ಕರಿಸುವುದಿಲ್ಲ, ನೀವು ತಪ್ಪಾಗಿ ಭಾವಿಸಬಾರದು, ಅವರೂ ಸಹ ತಪ್ಪಾಗಿ ತಿಳಿಯಬಾರದು, ಹಾಗಿದ್ದರೆ ಮಾತ್ರ ಬರುತ್ತೇನೆ; ಕೇಳಿ ಬನ್ನಿ" ಎಂದೆ. ಹೋಗಿ, ಜಗದ್ಗುರುಗಳನ್ನು ಕೇಳಿ ಬಂದು, ಹಾಗೆಯೇ ಆಗಲಿ ಬನ್ನಿರೆಂದರು, ಹೋದೆ.

ಮದ್ರಾಸ್ ಪದವೀಧರನೆಂಬ ಗತ್ತು, 24 ವರ್ಷದ ಯೌವನದ ಮತ್ತು ನಾಸ್ತಿಕತೆಯ ಅಮಲಿನ ಬಿತ್ತು, ಈ ಮೂರೂ ಸೇರಿಕೊಂಡು ನಾನೊಂದು ರೀತಿಯಲ್ಲಿ ಅರೆ ಉನ್ಮತ್ತನಾಗಿದ್ದೆ. ಅಂದು ಪೂಜ್ಯ ಜಗದ್ಗುರುಗಳು "ಸಿದ್ದಪ್ಪ ಸ್ಕ್ವೈಯರ್"ನ ಒಂದು ಭೋಗ್ಯದ ಮನೆಯಲ್ಲಿ ವಾಸವಾಗಿದ್ದರು. ಸದರಿ ಎಚ್.ಪಿ. ಮಲ್ಲೇದೇವರೊಡನೆ ಅಲ್ಲಿಗೆ ಹೋದೆ. ಮೊದಲೇ ಹೇಳಿದ್ದಂತೆ, ನಮಸ್ಕರಿಸಲಿಲ್ಲ. ಸುಮ್ಮನೆ ನಿಂತಿದ್ದೆ. "ಏಕೆ ನಿಂತಿದ್ದೀರಿ, ಕುಳಿತುಕೊಳ್ಳಿ" ಎಂದು ಮೊದಲ ಮೃದು ಚಾಟಿಯೇಟಿತ್ತರು; ಕುಳಿತೆ. ತಾವು ಕೇವಲ 40 ಮೈಲಿ ಪಕ್ಕದಲ್ಲಿದ್ದ ಮೈಸೂರನ್ನು ಬಿಟ್ಟು ಒಂದು ಸಣ್ಣ ತರಗತಿಯನ್ನೋದಲು ಅದೇಕೆ ಅಷ್ಟು ದೂರದ ಮದ್ರಾಸಿಗೆ ಹೋದಿರಿ? ಹಾಗೆ, ಹೀಗೆ ಎಂದು ಕೇಳುತ್ತಾ, ತಾವು, ತಾವು ಎಂದು ಸಂಬೋಧಿಸಿ ನನ್ನ ಅಹಂಕಾರಕ್ಕೆ ಮೃದುವಾಗಿಯೇ ಚಾಟಿ ಬೀಸುತ್ತಾ ಹೊರಟರು. ಅವರ ಪ್ರಸನ್ನವದನ, ಮೃದುಮಧುರವಚನ ಹಾಗೂ ಮಾತೃಹೃದಯದ ಕರುಣಾಮೃತಸಿಂಚನ ನನ್ನನ್ನು ಮೂರು ಗಂಟೆಗಳಲ್ಲಿ ಭಕ್ತನಾಗಿ ಪರಿವರ್ತಿಸಿತ್ತು. ಬರುವಾಗ ದೀರ್ಘದಂಡನಮಸ್ಕಾರ ಮಾಡಿ ಹೊರಬಂದೆ. ಇದು ಆ ಪೂಜ್ಯರ ಮಹತ್ವ. ಇಂತು ಅವರ ಕರುಣಾಕಟಾಕ್ಷವು ಎಂತಹ ದುಷ್ಟನನ್ನೂ ಶಿಷ್ಟನನ್ನಾಗಿಸುವ ದುರಹಂಕಾರಿಯನ್ನು ನಿರಂಹಕಾರಿಯನ್ನಾಗಿಸುವ ಪಾವನಸಂಜೀವಿನಿಯಾಗಿತ್ತು. ಅವರ ಮುಗುಳ್ನಗೆಯೊಂದೇ ಬಂದವರ ಸಂಕಟ ಪರಿಹರಿಸುವ ಮಾಂತ್ರಿಕಶಕ್ತಿ ಪಡೆದಿತ್ತು.

ಅಂತೆಯೇ ಇನ್ನೊಮ್ಮೆ ಒರಟಾಗಿ ನಡೆದುಕೊಂಡೆ. ಆದರೂ ಆ ಪುಣ್ಯಾತ್ಮರು ಬೇಸರಿಸಲಿಲ್ಲ. ಅದು ಹೀಗಾಯಿತು ಏನನ್ನೋ ವಿಚಾರಿಸಲಿಕ್ಕೆಂದು ಆಸ್ಥಾನ ವಿದ್ವಾಂಸರಾಗಿದ್ದ ದಿವಂಗತ ಎಂ.ಜಿ. ನಂಜುಂಡಾರಾಧ್ಯರ ಮನೆಗೆ ಹೋದೆ. ಅಲ್ಲಿ ಬಾಡಾಲ ರಾಮಯ್ಯರೆಂಬ



ಆಂಧ್ರಕವಿ ಸಂಮಾನ್ಯ ಆರಾಧ್ಯರೊಡನೆ ಬಸವಣ್ಣನವರ ವಚನಗಳ ಬಗ್ಗೆ ವಿಚಾರವಿನಿಮಯ ನಡೆಸುತ್ತಿದ್ದರು. ಅವರು ಅಣ್ಣನವರ ಸಂಪೂರ್ಣ ವಚನಗಳನ್ನು ತೆಲುಗಿಗೆ ಅನುವಾದಿಸಿದ್ದರು. ಮೇಲ್ಮಟ್ಟದ ಗಮಕಿಗಳು, ಒಂದು ವಚನವನ್ನು ತುಂಬಾ ಸುಶ್ರಾವ್ಯವಾಗಿ ಹಾಡಿದರು. ಅವರ ಹಾಡಿಗೆ ಮೂಕವಿಸ್ಮಿತನಾದೆ. ಅವರು ಎದ್ದು ಅವರ ಮನೆಗೆ ಹೊರಟರು. ನಾನೂ ಸಹ ಅವರ ಹಿಂದುಗಡೆ ಸಾಗಿದೆ. ಆ ಭಾವುಕರು ಮನೆಯ ಗೇಟ್ ಹಾಕಲು ಹಿಂದಕ್ಕೆ ತಿರುಗಿದಾಗ ಮಾತ್ರ ನನ್ನನ್ನು ನೋಡಿದರು. "ನೀವಾರು ? ಏಕೆ ಬಂದಿರಿ ?" ಎಂದರು. ನನ್ನ ಪರಿಚಯ ಹೇಳಿ, ಆರಾಧ್ಯರ ಮನೆಯಲ್ಲಿ ಹಾಡಿದ ವಚನವನ್ನು ಮತ್ತೊಮ್ಮೆ ಹಾಡಲು ಕೇಳಿದೆ. ಮನೆಯೊಳಕ್ಕೆ ಕರೆದು ಕುಳ್ಳಿರಿಸಿ, ತುಂಬಾ ಭಾವ ತುಂಬಿ ಅಲ್ಲಿಗಿಂತಲೂ ಇಲ್ಲಿ ಚೆನ್ನಾಗಿ ಹಾಡಿ ಗದ್ಗದಿತರಾದರು. ಏಕೆ ಉದ್ವಿಗ್ನರಾದಿರೆಂದು ಕೇಳಿದೆ. ಆಗ ಕರ್ನಾಟಕದ ತುಂಬಾ ವೀರಶೈವರಿದ್ದೀರಿ, ಸಾಕಷ್ಟು ಜನ ಬಸವಣ್ಣನವರ ಅನುಯಾಯಿಗಳು, ಬಸವಧರ್ಮವನ್ನು ವಿಶ್ವಧರ್ಮವೆಂದು ಸಾರುತ್ತೀರಿ. ಆದರೆ ಅದು ಕರ್ನಾಟಕ ಬಿಟ್ಟು ಪಕ್ಕದ ರಾಜ್ಯಗಳಿಗೂ ಸಹ ಹೋಗಲಿಲ್ಲ. ನಾನು ವಚನಗಳನ್ನು ತೆಲುಗಿಗೆ ಅನುವಾದಿಸಿ ಆರು ವರ್ಷಗಳಾದುವು. ನಾನೊಬ್ಬ ಬಡ ಟ್ಯೂಟರ್, ಕೇವಲ 250 ರೂ. ಸಂಬಳ ಬರುತ್ತದೆ. ಪ್ರಕಟಿಸಲು ನನಗೆ ಸಾಧ್ಯವಿಲ್ಲದೆ ಹಲವಾರು ಜನರನ್ನು ಕಾಡಿದೆ, ಬೇಡಿದೆ; ಯಾರೂ ಪ್ರಕಟಿಸಲು ಮುಂದೆ ಬರಲಿಲ್ಲ ಎಂದು ತುಂಬಾ ನೊಂದು ನುಡಿದರು. ಚಿಂತಿಸಬೇಡಿ, ನಾನು ಪ್ರಯತ್ನಿಸುತ್ತೇನೆ. ಯಾರೂ ಬಾರದಿದ್ದರೆ ನನ್ನ ಆಸ್ತಿ ಮಾರಿ, ನಿಮ್ಮ ಅನುವಾದವನ್ನು ಪ್ರಕಟಿಸುತ್ತೇನೆಂದೆ. ಆರು ತಿಂಗಳು ಕಾಲಾವಕಾಶ ಕೊಡಿ ಎಂದೆ.

ಆಶ್ವಾಸನೆ ಕೊಟ್ಟು ನೇರ ಪೂಜ್ಯ ಜಗದ್ಗುರುಗಳವರ ನಿವಾಸಕ್ಕೆ ಹೋದೆ. ತಾವು ಧರ್ಮಾಧಿಕಾರಿಗಳು, ಧರ್ಮಪ್ರಸಾರವೇ ತಮ್ಮ ಕಾಯಕವಾಗಬೇಕು. ಅದನ್ನು ಬಿಟ್ಟು ಸರ್ಕಾರ ಮಾಡಬೇಕಾದ ಸಮಾಜಮುಖೀ ಕಾರ್ಯಕ್ರಮವಾದ ಶಾಲೆ-ಕಾಲೇಜುಗಳನ್ನು ಕಟ್ಟುತ್ತಾ ಸಾಗುತ್ತಿದ್ದೀರಿ ಅದರ ಕಡೆ ಗಮನ ಕಡಿಮೆ ಮಾಡಿ, ಈ ಕಡೆ ಗಮನಕೊಟ್ಟು ಈ ಅದ್ಭುತ ವಚನಗಳನ್ನು ಪ್ರಕಟಿಸಿರೆಂದು ಆವೇಶಭರಿತನಾಗಿ ಬಿನ್ನವಿಸಿದೆ. ನನ್ನ ಆವೇಶಕ್ಕೆ ಬೇಸರಿಸದೆ, ಶಮನಕ್ಕಾಗಿ ಎರಡು ತಿಂಗಳು ಕಳೆದು ಬನ್ನಿ, ನೋಡೋಣ ಎಂದರು. ಎರಡು ತಿಂಗಳು ಕಳೆದು ಮತ್ತೆ ಹೋದೆ. ಈಗ ಸಾಧ್ಯವಿಲ್ಲ, ಇನ್ನೂ ಎರಡು ತಿಂಗಳು ಕಳೆದು ಬನ್ನಿ, ಪ್ರಯತ್ನಿಸೋಣ ಎಂದರು. ಮತ್ತೆಯೂ ಹೋದೆ. ಆಗಲೂ ಅದೇ ರೀತಿ ಹೇಳಿದರು. ಆಗ ಉದ್ವೇಗಕ್ಕೊಳಗಾಗಿ "ನೋಡಿ ! ಬುದ್ಧಿ, ಸುಮ್ಮನೆ ಕಾಲ ತಳ್ಳಬೇಡಿ, ನಾನು ಅವರಿಗೆ ಆರು ತಿಂಗಳುಗಳಲ್ಲಿ ಪ್ರಕಟಿಸುವುದಾಗಿ ಭರವಸೆ ನೀಡಿದ್ದೇನೆ; ಆಗುತ್ತದೆ ಅಥವಾ ಇಲ್ಲವೆನ್ನಿ ಎಂದು ಆಗ್ರಹವಾಗಿಯೇ ಕೇಳಿದೆ. ನೋಡ್ರಿ, ನಮ್ಮ ತಾಪತ್ರಯಗಳೇ ಮುಗಿದಿಲ್ಲ, ಆರ್ಥಿಕ ಮುಗ್ಗಟ್ಟಿದೆ. ನೀವು ಆತುರಪಡಿಸಿದರೆ ಈಗ ಸಾಧ್ಯವಿಲ್ಲವೆನ್ನಬೇಕಾಗುತ್ತದೆಂದು ಮುಗುಳ್ನಗುತ್ತಲೇ ಕೋಪಿಸಿಕೊಳ್ಳದೆ ಬೇಸರಿಸದೆ ಉತ್ತರಿಸಿದರು. ಇದು ಅವರ ಕ್ಷಮಾಗುಣದ

ಔನ್ನತ್ಯ. ಅನಂತರ ಯಾರನ್ನೋ ಹಿಡಿದೆ, ಹೇಗೋ ಅದು ಪ್ರಕಟಗೊಂಡಿತು. ಅವರಿಗೆ ಡಿ.ಲಿಟ್. ಪದವಿಯೂ ಸಿಕ್ಕಿ, ಕೇವಲ ಟ್ಯೂಟರ್ ಆಗಿದ್ದ ಅವರು ಒಡನೆಯೇ ಪ್ರಾಧ್ಯಾಪಕರಾಗಿ ನೇಮಕಗೊಂಡು ಸುಖಿಯಾದರು. ಆ ಮಾತು ಬೇರೆ. ಇಷ್ಟೆಲ್ಲಾ ನಾನು ಬರಿದೆ ದುಡುಕಿದರೂ ನನ್ನ ಮೇಲೆ ಅವರ ವಾತ್ಸಲ್ಯ ಕಡಿಮೆಯಾಗಲಿಲ್ಲ. ಅವರ ಕರುಣಾರಸದಲ್ಲಿ ಮಿಂದು ಬೆಳೆಯುತ್ತಲೇ ಬಂದೆ.

ಮುಂದೆ ಪೂಜ್ಯಜಗದ್ಗುರುಗಳವರ ಮೇಲ್ವಿಚಾರಣೆಯಲ್ಲಿ ದುಗ್ಗಹಟ್ಟಿಯ ಸಂಮಾನ್ಯ ಶ್ರೀ ಪಿ. ವೀರಭದ್ರಪ್ಪನವರು ಬಿಳಿಗಿರಿರಂಗನ ಬೆಟ್ಟದಲ್ಲಿ ಜೀರ್ಣವಾಗಿದ್ದ ಗಂಗಾಧರೇಶ್ವರನ ಗುಡಿಯನ್ನು ಜೀರ್ಣೋದ್ಧಾರ ಮಾಡಿ ಅದರ ಕುಂಭಾಭಿಷೇಕಕ್ಕೆ ಪೂಜ್ಯಜಗದ್ಗುರುಗಳನ್ನು ಆಹ್ವಾನಿಸಿದ್ದರು. ಆಗ ತಾನೇ ಛಂದೋಬದ್ಧಕವಿತೆಯನ್ನು ಬರೆಯಲು ಪ್ರಾರಂಭಿಸಿದ್ದ ನಾನು, ಕೆಳಕಂಡ ಪದ್ಯಮಾಲಿಕೆಯನ್ನು ಭಕ್ತಿಪೂರ್ವಕವಾಗಿ ಬರೆದು ಸ್ವಾಗತ ಕೋರಿದೆ. 1-6-1968ರ ಆ ದಿನ ಹೃದಯಾಂತರಾಳದಿಂದ ಆಶೀರ್ವದಿಸಿದರು.

## ಗಂಗಾಧರೇಶ್ವರ ರಕ್ಷಿಸು

ಪಾಡುತಲಿ ಪದ್ಯವನು ಆರತಿಯ ಬೆಳಗಿ
ನೀಡುವೆವು ಸ್ವಾಗತವ ಗುರುವರ್ಯಗೆರಗಿ || ಪ ||

**ಗಂ**ಗಾಧರೇಶ್ವರನ ಅಂಗಣಕೆ ಬಂದ
ಸಂಗಮೇಶನ ತೆರದಿ ಕಂಗೊಳಿಸಿ ನಿಂದ
ರಂಗನಾಥನ ನೆಲೆಗೆ ಹೊಂಗಳೆಯ ತಂದ
ಜಂಗಮಶ್ರೇಷ್ಠರೇ ಸ್ವಾಗತವು ತಮಗೆ || 1 ||

**ಗಾ**ನಮೂರುತಿ ಶಿವನೊಳಗನವರತ ಬೆರೆದ
ಮಾನವರನುದ್ಧರಿಸೆ ಈ ಬುವಿಗೆ ಇಳಿದ
ಜ್ಞಾನನಿಧಿಯೆಂದೆನಿಸಿ ಭವವನ್ನು ಗೆಲಿದ
ದೀನಜನವರಬಂಧು ಸ್ವಾಗತವು ತಮಗೆ || 2 ||

**ಧ**ರ್ಮವನು ಬೋಧಿಸುವ ಕಾಯಕವ ಗೈವ
ಕರ್ಮ ನಿಷ್ಕಾಮವಿರಬೇಕೆಂದು ಪೇಳ್ವ
ಮರ್ಮಭೇದವನರುಹಿ ಶಿವಪಥವ ತೋರ್ವ
ಶರ್ಮಸಾಗರಲೋಲ ಸ್ವಾಗತವು ತಮಗೆ || 3 ||

**ರೇ**ಣುಕರ ಶಿವಮತವ ಜನಕೆ ಪಸರಿಸುವ
ಸ್ಥಾಣುವಿನ ಚಿತ್ರಭೆಯ ಜಗಕೆಲ್ಲ ಬೀರ್ವ



ಮಾಣವರ್ಗುಚಿತಾನ್ನ ಬಿಜ್ಜೆಯನು ಕೊಡುವ
ಏಣಾಂಕಧರರೂಪ ಸ್ವಾಗತವು ತಮಗೆ || 4 ||

**ಶ್ವ**ಪಚಸಾತ್ವಿಕರೆಂಬ ಭೇದವೇನಿರದ
ವಿಪರೀತಭಾವ ತೊಡೆದುಪದೇಶ ಗೈದ
ಉಪಕಾರವೆಸಗುತಲಿ ದೀನರನು ಪೊರೆದ
ಅಪರಿಮಿತಗುಣಸಿಂಧು ಸ್ವಾಗತವು ತಮಗೆ || 5 ||

**ರ**ಜತಾದ್ರಿಯೊಡೆಯನನು ಘನಮನದಿ ನೆಟ್ಟ
ಬಿಜಯಿಸುತ್ತೆಮಗೆಲ್ಲ ಸಂತಸವ ಕೊಟ್ಟ
ನಿಜಪಥವ ತೋರಿಸುವ ಸತ್ಪಥದೊಳಿಟ್ಟ
ಸುಜನಗಣಸುರಧೇನು ಸ್ವಾಗತವು ತಮಗೆ || 6 ||

**ರ**ವಿ ಕಾಣದುದ ಕಾಣ್ಬ ಚಕ್ಷುವಾಂತಿರುವ
ಸವಿಯುತ್ತ ವಚನಗಳ ಮಧುರದಿಂದುಲಿವ
ಬುವಿಜನರ ಮಂಗಳಕೆ ಪಗಲಿರುಳು ದುಡಿವ
ಕವಿಜನರ ಕಲ್ಪತರು ಸ್ವಾಗತವು ತಮಗೆ || 7 ||
**ಕ್ಷಿ**ತಿಯೊಳುತ್ತಮರೆನಿಸುತತಿಶಯದಿ ಮೆರೆವ
ಮತಭೇದವೆಣಿಸದಯೆ ಸರ್ವರೊಂದೆನುವ
ಮತಿಗೆಟ್ಟ ಮಾನವರ ಮಲಿನವನು ಕಳೆವ
ಪತಿತಜನಪಾಲಕರೆ ಸ್ವಾಗತವು ತಮಗೆ || 8 ||

**ಸು**ತ್ತಮುತ್ತಲಜನಕೆ ಸತ್ಪಥವ ತಿಳಿಪ
ಮತ್ತೆ ಶರಣಾದವಗೆ ಸದ್ಗತಿಯ ಸಲಿಪ
ತತ್ತ್ವಳಿಪ ಜಗಕೆಲ್ಲ ಚಿರಶಾಂತಿ ಬಯಪ
ಸುತ್ತೂರುಸದ್ಗುರುವೆ ಸ್ವಾಗತವು ತಮಗೆ || 9 ||

"ಗಂಗಾಧರೇಶ್ವರ ರಕ್ಷಿಸು" ಎಂಬ ಈ ಶೀರ್ಷಿಕೆಯ ಪ್ರತಿಯಕ್ಷರದಿಂದ ಪ್ರಾರಂಭವಾಗುವ ಪ್ರತಿಚರಣದ ಚಿತ್ರಕವಿತೆಯ ಕಂಡು ಸಂತೋಷಗೊಂಡು ಆಶೀರ್ವದಿಸಿದರು. ಪಂಚಮಾತ್ರಾಗಣಗಳ ಹೊಂದಾಣಿಕೆ ತುಂಬಾ ಹದವಾಗಿ ಕೂಡುತ್ತಿವೆ. ಇದರಲ್ಲಿಯೇ ಆಳವಾಗಿ ಮುಳುಗಿ; ಮುಂದೆ ಹೆಸರು ಗಳಿಸುತ್ತೀರಿ ಎಂದು ಹರಸಿದರು. ಅವರ ಆದೇಶದಂತೆ 1968ರಿಂದ ಕನ್ನಡಸಾಹಿತ್ಯದ ತೀವ್ರತರವಾದ ಅಭ್ಯಾಸಕ್ಕೆ ಪ್ರಾರಂಭಿಸಿದೆ. ಕೇವಲ ಎರಡುಮೂರು ವರ್ಷಗಳಲ್ಲಿ ಪಂಚಮಾತ್ರಾಗಣದ ವಾರ್ಧಕಷಟ್ಪದಿಯು ಒಂದು ರೀತಿಯಲ್ಲಿ ಹಿಡಿತಕ್ಕೆ ಬಂತು. 'ಸಂಧಾನಸೇವಾಪುರಾಣ'

ವೆಂಬ ಸಂಸ್ಕೃತದ ಲಘುವಾದ ಶೃಂಗಾರಕಾವ್ಯವನ್ನು "ಪಾರ್ವತೀಪ್ರಣಯಕಲಹಂ" ಎಂದು ವಾರ್ಧಕಕ್ಕೆ ಅನುವಾದಿಸಿದೆ. ಅಂತೆಯೇ ಕಾಳಿದಾಸನ "ಮೇಘದೂತವನ್ನು ಸಹ "ಮೇಘಸಂದೇಶ"ವೆಂದು ವಾರ್ಧಕದಲ್ಲಿ ಅನುವಾದಿಸಿದೆ. ನನ್ನ ಸಾಮರ್ಥ್ಯಕ್ಕಿಂತಲೂ ಆ ಅನುವಾದಕಾರ್ಯಗಳು ಅವರ ಆಶೀರ್ವಾದಬಲವೆಂದೇ ನಂಬಿದ್ದೇನೆ.

ಮುಂದೆ 1971ರಲ್ಲಿ ನಿಜಗುಣಶಿವಯೋಗಿ ಪಾತ್ರವನ್ನು ಮಾಡಿದೆ. ಆ ನಾಟಕದಲ್ಲಿ ಅವರೇ ಅಧ್ಯಕ್ಷತೆ ವಹಿಸಿದ್ದರು. ರಾಜ ಸನ್ಯಾಸಿಯಾದ ತಕ್ಷಣವೇ ಜಗದ್ಗುರುಗಳವರ ಆಶೀರ್ವಾದಕ್ಕೆ ಅಣಿ ಮಾಡಿದ್ದರು. ಅದೇ ವೇಷದಲ್ಲಿ ಬಂದು ಅವರಿಗೆ ಹಾರ ಸಮರ್ಪಿಸಿದೆ. ಅವರ ಆಶೀರ್ವಾದಭಾಷಣದಲ್ಲಿ "ಓ ಬಸವಣ್ಣ ಸನ್ಯಾಸಿಯಾದರು" ಎಂದು ಉದ್ಗಾರವೆತ್ತಿದರು. ಅವರ ಆಶೀರ್ವಾದ ಪ್ರಭಾವದಿಂದ ನನ್ನಲ್ಲಿ ವೈರಾಗ್ಯವಂಕುರಿಸಿ, ಬೆಳೆಬೆಳೆದು 1980ಕ್ಕೆ ಮನೆ ಬಿಟ್ಟು ನಿಜಗುಣರ ಗವಿ ಸೇರಿದೆ. ನನ್ನ ಸನ್ಯಾಸವೂ ಕೂಡ ಅವರ ಆಶೀರ್ವಾದದ ಫಲವೇ.

ಇಷ್ಟೆಲ್ಲಾ ಆದರೂ ನನ್ನ ದುಡುಕು ಹಾಗೂ ಸಿಡುಕುಗಳು ಕಡಿಮೆಯಾಗಲೇ ಇಲ್ಲ. ಇದು ನನ್ನ ದೌರ್ಭಾಗ್ಯ. 1976ರಲ್ಲಿ ಆ ಮಹಾನುಭಾವರಲ್ಲಿ ಮತ್ತೆ ಒರಟಾಗಿ ವರ್ತಿಸಿದೆ. ಅದು ನನ್ನನ್ನು ಇನ್ನೂ ಕೂಡ ಬಾಧಿಸುತ್ತಿದೆ. ನನ್ನ ಒರಟಾದ ಸ್ವಭಾವದಿಂದ ಆ ಮೃದುಸ್ವಭಾವದ ಗುರುಶ್ರೇಷ್ಠರ ಮನಸ್ಸನ್ನು ನೋಯಿಸಿದೆನಲ್ಲಾ ಎಂದು ಈಗಲೂ ಪಶ್ಚಾತ್ತಾಪದ ದಳ್ಳುರಿಯಲ್ಲಿಯೇ ಬೇಯುತ್ತಿದ್ದೇನೆ. ಆ ಮಹಾನುಭಾವರು ನನ್ನ ಭಕ್ತಿಭಾವವನ್ನು ಸಂಘಟನಾಸಾಮರ್ಥ್ಯವನ್ನು ಕಂಡು ನನ್ನನ್ನು ಶಿವರಾತ್ರೀಶ್ವರ ಜಯಂತಿ ಸಮಿತಿಯ ಉಪಾಧ್ಯಕ್ಷನನ್ನಾಗಿ ನೇಮಿಸಿದ್ದರು. ಆ ಸನ್ನಿವೇಶ ಹೀಗೆ ನಡೆಯಿತು.

1976ರಲ್ಲಿ ಪೂಜ್ಯ ಶ್ರೀ ಲಿಂಗಾನಂದಸ್ವಾಮಿಯವರು ನಮ್ಮ ಕೊಳ್ಳೇಗಾಲದಲ್ಲಿ ಅಕ್ಕಮಹಾದೇವಿಯ ಬಗ್ಗೆ ಪ್ರವಚನ ಮಾಡುತ್ತಿದ್ದರು. ಆವಾಗ ಪ್ರವಚನದ ಮಧ್ಯೆ ಸಸ್ಯಾಹಾರಕ್ಕೆ ಹೊಂದಿಕೊಳ್ಳುವ ಯಾರು ಬಂದರೂ ಸರಿಯೇ, ಲಿಂಗದೀಕ್ಷೆ ಕೊಡುತ್ತೇನೆಂದು ಸಾರಿದರು. ನಾನೇ ಆ ಪ್ರವಚನದ ಸಂಚಾಲಕನಾಗಿದ್ದುದರಿಂದ ಪೂಜಾರಿ ಶಿವಣ್ಣನೆಂಬ ಒಬ್ಬ ಒಕ್ಕಲಿಗ ಗೌಡರು ನನ್ನ ಹತ್ತಿರ ಬಂದು ಸ್ವಾಮಿ ! ನಮ್ಮ ಕುಟುಂಬಕ್ಕೆ ಲಿಂಗದೀಕ್ಷೆ ಕೊಡಿಸಿರೆಂದು ಕೇಳಿದರು. ಅವರನ್ನು ನಾನು ಲಿಂಗವಂತರೆಂದೇ ಭಾವಿಸಿದ್ದೆ. ಆಗಲೆಂದು ಪೂಜ್ಯರಲ್ಲಿ ಬಿನ್ನವಿಸಿದೆ. ತುಂಬಾ ಸಂತೋಷ, ಕೊಡೋಣವೆಂದು ಹೇಳಿದರು. ರಾತ್ರಿಯೆಲ್ಲಾ ಅದರ ಪರಿಣಾಮದ ಬಗ್ಗೆ ಚಿಂತಿಸಿದೆ. ಮುಂದೆ ಲಿಂಗವಂತಸಮಾಜ ಆ ಕುಟುಂಬದೊಡನೆ ಬೆರೆಯದೆ ಹೋದಲ್ಲಿ ಅವರ ಪಾಡೇನು ಎನ್ನಿಸಿತು. ಆದುದರಿಂದ ಊರ ಗೌಡರನ್ನು ಕೇಳಿ ಅವರ ಒಪ್ಪಿಗೆಯನ್ನು ಪಡೆಯೋಣವೆನ್ನಿಸಿತು. ಹೋಗಿ ಅವರಿಗೆ ವಿಷಯ ತಿಳಿಸಿದೆ. ಅವರ ಪಕ್ಕದ ಮನೆಯವರೇ ಆದ ಶಿವಣ್ಣನ ಆಚಾರ ವಿಚಾರದ ಬಗ್ಗೆ ಅವರಿಗೆ ತುಂಬಾ ಗೌರವ. 'ಆಗಲಿ ಅದಕ್ಕೇನು ? ನಮಗಿಂತಲೂ ಆತನೇ ಶ್ರೇಷ್ಠ, ಹತ್ತು ಕೈಯ್ಯಲ್ಲಿ ಕೊಡಬಹುದು" ಎಂದರು. ನನಗೆ ತುಂಬಾ ಖುಷಿಯಾಯಿತು. ಆದರೆ ಶಿವಣ್ಣನವರಿಗೆ ವಿರೋಧಿಯಾಗಿದ್ದ ಒಬ್ಬ ಸ್ವಾಮಿಗಳ ಮಾತನ್ನು ಕೇಳಿ, ಮಾರಣೆಗೆ ಆ ಗೌಡರು ಏಕೋ ಬೇಡವೆಂದು ಸ್ವಲ್ಪ ತಕರಾರು ತೆಗೆದರು. ಮೊದಲೇ ಒರಟಾದ ನಾನು ಅವರ ವಿರೋಧವನ್ನು ಲೆಕ್ಕಿಸದೆ, ಆ ಕುಟುಂಬಕ್ಕೆ ಲಿಂಗದೀಕ್ಷೆ ಕೊಡಿಸಿದೆ.



ಲಿಂಗದೀಕ್ಷೆಯಾದ ಮೇಲೆ ಆ ಸ್ವಾಮಿಗಳು ಶ್ರೀಲಿಂಗಾನಂದರಿಗೆ ಲಿಂಗದೀಕ್ಷೆ ಕೊಡಲು ಅಧಿಕಾರವೇನಿದೆ? ಜಗದ್ಗುರುಗಳು ಕೊಟ್ಟರೆ ಇಡೀ ಸಮಾಜವು ಒಪ್ಪುತ್ತದೆಂದು ಉದ್ಗಾರವೆತ್ತಿದರು. ಸಮಾಜದ ದೃಷ್ಟಿಯಿಂದ ಅದು ಸರಿಯೇನೋ ಎನ್ನಿಸಿತು. ಅದಕ್ಕಾಗಿ ಜಗದ್ಗುರುಗಳಲ್ಲಿ ನಡೆದ ವಿಚಾರ ತಿಳಿಸಿ, ಆ ಕುಟುಂಬಕ್ಕೆ ತಾವೇ ಲಿಂಗದೀಕ್ಷೆ ಕೊಡಬೇಕೆಂದು ಬಿನ್ನವಿಸಿದೆ. ಅದಕ್ಕೇನಂತೆ, ಕೊಡೋಣವೆಂದು ಒಪ್ಪಿ, ಒಂದು ನಿಶ್ಚಿತವಾದ ತಾರೀಖನ್ನು ತಿಳಿಸಿದರು. ಆ ತಾರೀಖನ್ನು ಹೇಗೋ ತಿಳಿದ ಆ ಸ್ವಾಮೀಜಿ ಪರಮಪೂಜ್ಯ ಜಗದ್ಗುರುಗಳಿಗೆ ಇಲ್ಲಸಲ್ಲದ ವಿಚಾರ ಹೇಳಿ ದೀಕ್ಷೆಕೊಡಬಾರದೆಂದು ವಿನಂತಿಸಿದರಂತೆ. ಅದಕ್ಕಾಗಿ ಪೂಜ್ಯರು ನನ್ನನ್ನು ಕರೆಸಿಕೊಂಡು; ಬೇರೆ ನೆಪ ಹೇಳಿ, ಆ ತಾರೀಖನ್ನು ಒಂದು ತಿಂಗಳ ಕಾಲ ಮುಂದೂಡಿದರು. ಸರಿ, ಆಗಲೆಂದು ನಾನೂ ಸಹ ಸಮ್ಮತಿಸಿದೆ, ಆದರೆ ಒಂದು ತಿಂಗಳ ನಂತರ ಮತ್ತೆ ಮುಂದೂಡಿದರು. ಹೀಗೆ ಸುಮಾರು ನಾಲ್ಕೈದುಬಾರಿ ಮುಂದೂಡಿ ಮುಂದೂಡಿ ಐದಾರುತಿಂಗಳು ತಳ್ಳಿದರು.

ಅಲ್ಲಿಗೆ ಜಯಂತಿ ಮಹೋತ್ಸವದ ಸಮಯ ಬಂತು. ಪೂರ್ವಭಾವಿ ಸಭೆಯ ನೋಟೀಸ್ ಉಪಾಧ್ಯಕ್ಷನಾಗಿದ್ದ ನನಗೆ ಬಂತು. ಆ ಸ್ಥಾನಕ್ಕೆ ರಾಜೀನಾಮೆ ನೀಡಿದೆ. ಸಿಡಿಮಿಡಿಗೊಂಡು ಅವರ ವಾತ್ಸಲ್ಯ, ಘನತೆ, ಗೌರವ, ಅವರ ಸಮಾಜದ ಕಳಕಳಿ, ಅವರ ವರ್ಚಸ್ಸು, ಎಲ್ಲವನ್ನು ಮರೆಸಿತು ನನ್ನ ಒರಟುತನ. ಸುಮಾರು ನಾಲ್ಕು ಪುಟದ ಪತ್ರವನ್ನು ಕಟುಪದಗಳ ಪ್ರಯೋಗ ಮಾಡಿ (ಆಗಿನ ಪದಪ್ರಯೋಗವನ್ನು ಈಗ ನೆನೆಯಲೂ ಸಹ ನಾಚಿಕೆಯಾಗುತ್ತಿದೆ) ಸಿಕ್ಕಾಬಟ್ಟೆ ಹಂಗಿಸಿ, ನನ್ನ ಕೋಪತಾಪಗಳನ್ನು ಪ್ರದರ್ಶಿಸಿ ಬರೆದೆ. ತುಂಬಾ ನೊಂದುಕೊಂಡರೇ ಹೊರತು, ನನ್ನ ಬಗ್ಗೆ ಕೋಪಿಸಲಿಲ್ಲ. ಅದು ಅವರ ದೊಡ್ಡತನ. ದಿವಂಗತ ಎಚ್. ನಾಗಪ್ಪನವರನ್ನು ಕಳುಹಿಸಿ ನನ್ನನ್ನು ಕರೆದುಕೊಂಡು ಬರುವಂತೆ ತಿಳಿಸಿದರು. ಮುಗ್ಧ ನಾಗಪ್ಪನವರು ಬಂದು ಜಗದ್ಗುರುಗಳು ಬರಹೇಳಿದ್ದಾರೆ ಬನ್ನಿರೆಂದರು. ಅವರಿಗೆ ಸಾಕಷ್ಟು ಛೀಮಾರಿ ಮಾಡಿ ಬರುವುದಿಲ್ಲವೆಂದು ಹಠಮಾಡಿದೆ. ಅವರೂ ಸಹ ನೀವು ಏನೇ ಹೇಳಿದರೂ ಬರಲೇಬೇಕೆಂದು ಹಠ ಹಿಡಿದರು. ಸರಿ ನಡೆಯಿರಿ, ನೋಡೋಣವೆಂದು ಹೊರಟೆ. ಕಾಗದವನ್ನು ಹಿಡಿದೇ ಕುಳಿತಿದ್ದರು. ನನ್ನ ಸಿಟ್ಟಿನ ಉನ್ಮತ್ತಾವಸ್ಥೆಯಲ್ಲಿ ಪೂಜ್ಯರಿಗೆ ನಮಸ್ಕರಿಸಲೂ ಇಲ್ಲ. "ಹೀಗೆ ಬರೆಯುತ್ತಾರೇನು" ಎಂದರು. "ಅದು ಕಡಿಮೆ" ಎಂದೆ. ಮಾತಿಗೆ ತಪ್ಪಬಾರದೆಂದು ಬೋಧಿಸುವ ತಾವೇ ಮಾತಿಗೆ ತಪ್ಪಿದರೆ ಹೇಗೆ ? ಹಾಗೆ ಹೀಗೆ ಎಂದು ಸಿಕ್ಕಾಬಟ್ಟೆ ಪ್ರತಿವಾದಿಸಿದೆ. ನಾನು ಏನೇ ಹೇಳಿದರೂ ಆ ದಿವ್ಯಮೂರ್ತಿ ಸಿಟ್ಟುಗೊಳ್ಳಲಿಲ್ಲ. ನಾನು ಬರೆದಿದ್ದ ಪತ್ರದ ಒಕ್ಕಣೆಗೂ, ನಾನು ಅಂದು

ಆಡಿದ ಮಾತುಗಳಿಗೂ ಅವರು ನನ್ನನ್ನು ಕಂಬಕ್ಕೆ ಕಟ್ಟಿಸಿ ಚಾಟಿಯಿಂದ ಹೊಡೆಸಬಹುದಿತ್ತು. ನನ್ನನ್ನು ಕೇಳುವವರಾರಿದ್ದರು? ಅಂತಿತ್ತು ಅವರಿಗೆ ಶಕ್ತಿ ಸಾಮರ್ಥ್ಯ ! ಆದರೆ ಅವರು ಅಂದು ತೋರಿದ ಕರುಣೆ, ಸಹನೆ ಬಣ್ಣಿಸಲಸಾಧ್ಯ. ಅಷ್ಟೆಲ್ಲಾ ನಾನು ಹಾರಾಡಿದರೂ ಏನೊಂದೂ ಭಾವಿಸದೆ ಕೊಳ್ಳೇಗಾಲಕ್ಕೆ ಬಂದು, ಆ ಕುಟುಂಬಕ್ಕೆ ದೀಕ್ಷೆ ಕೊಡಲು ಒಪ್ಪಿ, ಒಂದು ತಾರೀಖನ್ನು ನಿಗದಿ ಮಾಡಿದರು ; ಬಂದರು, ದೀಕ್ಷೆ ನೀಡಿದರು. ಸುಮಾರು 18-20 ಮಠಾಧ್ಯಕ್ಷರು ಸೇರಿದ್ದರು. ತಾಲ್ಲೂಕಿನ ಹಲವಾರು ಹಳ್ಳಿಗಳ ಮುಖಂಡರುಗಳನ್ನು ಆಹ್ವಾನಿಸಿದ್ದೆ. ತುಂಬಾ ವಿಜೃಂಭಣೆಯಿಂದ ದೀಕ್ಷಾಸಂಸ್ಕಾರ ಸಾಗಿತು. ಸುಮಾರು 1500 ಜನ ಸೇರಿತ್ತು. ಅವರ ಪೂರ್ಣ ಕೃಪೆಯಿಂದ ಆ ಸಂಸಾರ ಉದ್ಧಾರವಾಯಿತು ; ಲಿಂಗವಂತಸಮಾಜದೊಡನೆ ಈಗ ಬೆರೆತುಹೋಗಿ ತುಂಬಾ ಸಂತಸದಿಂದ ಸಾಗುತ್ತಿದೆ. ಇದು ಪೂಜ್ಯರ ಕೃಪಾಶೀರ್ವಾದ ಹಾಗೂ ಒಂದು ರೀತಿಯಲ್ಲಿ ನನ್ನ ಭಾಗ್ಯ. ಅಂದಿನಿಂದ ಅವರು ನನ್ನ ಭಾಗಕ್ಕೆ ಭಗವಂತನೇ ಆದರು.

15-8-1980ರಂದು ನಿಜಗುಣರ ಗವಿಗೆ ಬೆಳಗಿನ ಜಾವ 5 ಗಂಟೆಗೆ ಬಂದೆ. ಅದರ ಹಿಂದಣ ದಿವಸ ಪ್ರಸಾದಗೈಯಲು ಒಂದು "ಪ್ರಷರ್ ಕುಕ್ಕರ್" ತೆಗೆದುಕೊಳ್ಳ ಬೇಕೆಂದು ಮೈಸೂರಿಗೆ ಬಂದೆ. ಆರ್ಗೇಟ್‌ನಲ್ಲಿ ಇಳಿದ ತಕ್ಷಣವೇ, ಏಕೋ ಏನೋ, ಕಾಲು ಮಠದ ಕಡೆ ಎಳೆಯಿತು. ಹೋದೆ; ನಮಸ್ಕರಿಸಿದೆ. "ಏನು ಸಮಾಚಾರ" ಎಂದರು. ಬುದ್ಧಿ! ನಾಳೆ ನಾನು ಗವಿಗೆ ಹೊರಟಿದ್ದೇನೆ, ತಾವು ಸಹಸ್ರ ಸದಸ್ಯ ಮಕ್ಕಳಿಗೆ ಅಶನವಸತಿಯನ್ನಿತ್ತು ಕಾಪಾಡಿದ್ದೀರಿ. ನನ್ನನ್ನೂ ಸಹ ಆಶೀರ್ವದಿಸಿ ಒಂದು "ಪ್ರಷರ್ ಕುಕ್ಕರ್" ತೆಗೆದುಕೊಡಿ ಎಂದೆ. ಎಷ್ಟಾಗುತ್ತದೆ ಎಂದರು ; ಗೊತ್ತಿಲ್ಲವೆಂದೆ. ಮುನ್ನೂರು ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡು ಬನ್ನಿರೆಂದರು. ಹೋಗಿ ಇನ್ನೂರೈವತ್ತಮೂರು ಕೊಟ್ಟು ತೆಗೆದುಕೊಂಡು ಬಂದು ಆ ಪಾತ್ರೆಯನ್ನೂ ಉಳಿದ ಹಣವನ್ನು ಅವರಿಗೆ ಅರ್ಪಿಸಿದೆ. ಅವೆರಡನ್ನೂ ಹಿಂದಕ್ಕೆ ನನಗೆ ಕೊಟ್ಟು ಎರಡು ಬಾಳೆಹಣ್ಣುಗಳನ್ನಿತ್ತು ಸಾಧನೆ ಮಾಡಿ, ಭಗವಂತ ಕರುಣಿಸಲೆಂದು ಆಶೀರ್ವದಿಸಿದರು. ಮತ್ತೆ ಮಾರ್ಕೆಟ್ಟಿಗೆ ಹೋಗಿ ಹಣ್ಣುಗಳನ್ನು ಹಾಕಲು ಉಪಯೋಗಿಸುವ ಒಂದು ಕಬ್ಬಿಣದ "ವೈರ್" ಬುಟ್ಟಿಯೊಂದನ್ನು ಖರೀದಿಸಿ ಅದಕ್ಕೆ ಅವರು ಆಶೀರ್ವದಿಸಿದ್ದ ಹಣ್ಣುಗಳನ್ನು ಹಾಕಿ, ಊರಿಗೆ ಹೋದೆ. ಆ ಬುಟ್ಟಿ ನಮ್ಮ ನಿಜಗುಣಾನುಭವ ಮಂಟಪವು 1994ರಲ್ಲಿ ತೆರೆಯಲ್ಪಡುವ ತನಕ ತುಂಬಾ ತುಂಬಿತ್ತು, ಎಂದೂ ಖಾಲಿಯಾಗಲಿಲ್ಲ. ಅವರ ನಡೆ ಪರುಷ, ನುಡಿ ಪರುಷ, ಹಸ್ತ ಪರುಷ. ಅವರು ಹೇಳಿದ್ದೆಲ್ಲಾ ನಿಜವಾಗುತ್ತಿತ್ತು. ಅವರು ಮುಟ್ಟಿದ್ದೆಲ್ಲಾ ಹೊನ್ನಾಗುತ್ತಿತ್ತು. ಹೀಗೆ ಬಣ್ಣನೆಗೆ ನಿಲುಕದ ದಿವ್ಯಮೂರುತಿ ; ಸಾಕ್ಷಾತ್ ಭಗವಂತನೇ ಅವರು.

1983ಕ್ಕೆ ನಿಜಗುಣಾನುಭವಮಂಟಪ ಕಟ್ಟಲು ಪ್ರಾರಂಭಿಸಿದೆ. ಮಠಕ್ಕೆ ಹೋಗಿ ಅಡಿಪಾಯ ಕಟ್ಟಿಸುತ್ತಿದ್ದೇನೆ ಬುದ್ಧಿ ಎಂದು ವಿನಂತಿಸಿದೆ. 5000 ರೂಪಾಯಿಗಳನ್ನು ಕೊಟ್ಟು



ಸಾಧ್ಯವಾದಷ್ಟು ಬೇಗ ಮುಗಿಯಿಸಿರೆಂದು ಆಶೀರ್ವದಿಸಿದರು. ಬರಿಗೈಯಲ್ಲಿ ಗವಿಗೆ ಬಂದ ನಾನು ಅವರ ಕೃಪಾಶೀರ್ವಾದದಿಂದ ಹೆಚ್ಚಿನ ಆತಂಕವಿಲ್ಲದೆ ನಿರುಪಮಜ್ಞಾನಿ ನಿಜಗುಣರಿಗೆ ಸೂಕ್ತ ಸ್ಮಾರಕವನ್ನು ನಿರ್ಮಿಸಲು ನೆಪವಾದೆ. ನಾನು ಏನೂ ಮಾಡಿದರೂ ಅವರು ನನ್ನ ಬೆನ್ನುಹಿಂದೆ ಆಶೀರ್ವದಿಸುತ್ತಲೇ ಇದ್ದರು. ನನ್ನ ಸರ್ವಶಕ್ತಿಯೂ ಅವರದ್ದೇ. ಅವರ ಕೃಪಾಶೀರ್ವಾದ ನನ್ನ ಮೇಲೆ "ಸಾಸಿವೆ ಮೇಲೆ ಸಾಗರ ಹರಿದಂತೆ" ಎಂದಂತೆ ಹರಿದಿದೆ ; ಈಗಲೂ ಹರಿಯುತ್ತಿದೆ.

ಅವರ ಪೂಜಾವಿಧಾನವನ್ನು ಬಣ್ಣಿಸಲು ಅಸಾಧ್ಯ. ತಮ್ಮ ಇಷ್ಟಲಿಂಗದಲ್ಲಿ ಬೆರೆದು ಹೋಗುತ್ತಿದ್ದರು. ಅವರು ಪಾದಪೂಜೆಗೆ ಕುಳಿತರೆ ಚಿನ್ನದ ಬೊಂಬೆಯಂತೆ ಸ್ವಲ್ಪವೂ ಅಲುಗದೆ ತನ್ಮಯರಾಗುತ್ತಿದ್ದರು. ಆ ದಿವ್ಯಪೂಜೆಯನ್ನು ನೋಡಿ ತದೇಕಚಿತ್ತದಿಂದ ಆನಂದಿಸಿದವನು ನಾನು. ಅದಕ್ಕೆ ಮಾರುಹೋಗಿ 1983ರಿಂದ ಅವರು ಐಕ್ಯವಾಗುವವರೆಗೆ ಸುಮಾರು 50-60 ಬಾರಿ ಅವರೊಡನೆ ಪೂಜೆಯಲ್ಲಿ ಪಾಲ್ಗೊಂಡಿದ್ದೇನೆ. ಅದಕ್ಕಾಗಿಯೇ ರಾತ್ರಿಗೆ ಬಂದು ತಂಗಿ, ಬೆಳಿಗ್ಗೆ ನಾಲ್ಕೂವರೆ ಯಿಂದ ಏಳೂವರೆಯ ವರೆಗೆ ಮಾಡುತ್ತಿದ್ದ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದೆ. ಅದು ನನ್ನ ಸೌಭಾಗ್ಯ. ಆ ತನ್ಮಯತೆ, ಲಿಂಗನಿಷ್ಠೆಯನ್ನು ನಾನೆಲ್ಲಿಯೂ ಕಾಣಲಿಲ್ಲ. ಕೊನೆಯದಾಗಿ ಅವರ ಪಾದಪೂಜೆಯ ಭಾಗ್ಯ ನನಗೆ ದೊರೆತದ್ದು ರಾಮಾಪುರದ ಮಠದಲ್ಲಿ. ಬಹುಶಃ ಅದು 30-11-1986ರಂದು ಎಂಬ ನೆನಪು. ಅಂದು ಅವರು ಸಾಕ್ಷಾತ್ಪರಶಿವನಂತೆಯೇ ಕಂಡರು. ಚಿನ್ನದ ಬೊಂಬೆಯಂತೆ ಕುಳಿತಿದ್ದರು. ಆ ತಾದಾತ್ಮ್ಯ ಅವರಲ್ಲಿ ಒಡಮೂಡಿತ್ತು. ನನಗಾದ ಆನಂದ ಅಷ್ಟಿಷ್ಟಲ್ಲ.

ಇದಕ್ಕೆ ಮೊದಲು ಮೂರ್‍ನಾಲ್ಕು ತಿಂಗಳ ಹಿಂದೆ ಅಮೇರಿಕಾ ಇಂಗ್ಲೆಂಡ್ ದೇಶಗಳಿಗೆ ಭೇಟಿಯಿತ್ತು ಮೈಸೂರಿಗೆ ವಾಪಸ್ಸಾದರು. ಅಂದು ನಡೆದ ಅವರ ಮೆರವಣಿಗೆ "ನ ಭೂತೋ ನ ಭವಿಷ್ಯತಿ" ಎನ್ನುವಂತಿತ್ತು. ಮೈಸೂರು ಜಿಲ್ಲೆಯ ಭಕ್ತರ ಸಂಭ್ರಮ ಅಂದು ಹೇಳತೀರದು. ಗುರುಗಳು ಕಾಲ್ನಡಿಗೆಯಲ್ಲಿಯೇ ದಯಮಾಡಿದರು. ಆ ಬೃಹತ್ಸಭೆಯಲ್ಲಿ ಅವರಿಗೆ ಕೆಳಕಂಡಂತೆ ಸ್ವಾಗತಮಾಲಿಕೆ ಹಾಡಿದೆ :

ಸ್ವಾಗತವು ಹೃತ್ಪೂರ್ಣಸ್ವಾಗತವು ಗುರುವರಗೆ
ಯೋಗಮಾರ್ಗವನರುಹಿ ಜಯಭೇರಿ ಹೊಡೆದವಗೆ || ಪ ||

ಅಮೆರಿಕೆಯ ವಿಜ್ಞಾನಪರಿಣತಬೃಹತ್ಸಭೆಗೆ
ಸುಮಬಾಣನಂ ಜಯಿಪ ಪರಿಣತಿಯ ಕಲಿಸಿದಗೆ
ವಿಮಲಲಿಂಗಾರ್ಚನೆಯ ಸತ್ಫಲವ ತಿಳುಪಿದಗೆ
ಕ್ರಮಮುಕ್ತಿಪಡೆವಂಥ ಮಾರ್ಗ ಬೋಧಿಸಿದವಗೆ || 1 ||

ನ್ಯೂಯಾರ್ಕ್‌ಮಹಾನಗರದೈಸಿರಿಯ ಸಭ್ಯರಿಗೆ
ಮಾಯೆಯನು ಸಲೆಮೆಟ್ಟಿ ನಿಲ್ವ ಪರಿ ಪೇಳಿದಗೆ
ಕಾಯಭಾವವನಳಿವ ಸದುಪಾಯವರುಹಿದಗೆ
ಕಾಯಕದ ಮಹತಿಯನು ಕೂರ್ಮೆಯಿಂದೊರೆದವಗೆ || 2 ||

ಎಸೆವ ಲಾಸೇಂಜಲ್ಸ್ನ ಸುಖಭೋಗಮರ್ತ್ಯರಿಗೆ
ದೆಸೆಗೆಡಿಸುವರಿಕುಳವ ಗೆಲ್ವ ತೆರನರುಪಿದಗೆ
ವ್ಯಸನವೇಳನು ಕಳೆವ ಹೊಸಹಾದಿ ತೋರಿದಗೆ
ಬಸವಧರ್ಮವನರುಹಿ ಅಸಮಯಶ ಗಳಿಸಿದಗೆ || 3 ||

ಭೂರಿವಾಷಿಂಗ್ಟನಿನ ಭೂಧನದಸಂತತಿಗೆ
ಧಾರುಣಿಯ ಸೊಗಕಾಗಿ ಹೋರಾಡಿರೆಂದವಗೆ
ಭಾರತದ ನಿಜರಾಯಭಾರತ್ವ ವಹಿಸಿದಗೆ
ವೀರಶೈವದ ಮಹತಿ ಮೆರೆಯಿಸಿದ ಮಹಿಮನಿಗೆ || 4 ||

ಕುಜನಮಾರ್ಗದಿ ಗಮಿಸಿ ಅಳಿಯುತಿಹ ಈ ಬುವಿಗೆ
ನಿಜಧರ್ಮವುಳಿದನ್ಯಮಾರ್ಗವಿಲ್ಲೆಂದವಗೆ
ಸುಜನಮಾರ್ಗವ ತಿಳುಪಿ ಲಂಡನಿನ ಲೋಗರಿಗೆ
ವಿಜಯದುಂದುಭಿ ಮೊಳಗಿ ಬಿಜಯಿಸಿದ ಗುರುವರಗೆ || 5 ||

ಎಂದು ಮನದುಂಬಿ ಹಾಡಿ ಮೈಪುಳುಕವಾಂತೆ. ಅಂತೆಯೇ ಅವರು ಐಕ್ಯವಾದಂದು ಸುತ್ತೂರಿನಲ್ಲಿಯೂ ಇಡೀ ರಾತ್ರಿ ಹಾಡಿ ನನ್ನ ದುಃಖವನ್ನು ಭಾವಪೂರ್ಣವಾಗಿ ಹರಿಸಿದೆ. ಅಂದು ಅವರು ಐಕ್ಯರಾಗಿಲ್ಲ ; ನನ್ನ ಮುಂದೆ ಕೇಳುತ್ತಾ ಕುಳಿತಿದ್ದಾರೆಂದೇ ಭಾವಿಸಿ ಭಾವಪೂರ್ಣವಾಗಿ ಬಾಷ್ಪಾಂಜಲಿ ಸಲ್ಲಿಸಿ ಕೃತಾರ್ಥನಾದೆ.

ಐಕ್ಯರಾದ ಮೇಲೆ ಒಂದು ದಿವಸ ಅಂದರೆ 22-3-1988 ರಂದು ಅವರ ಶಿವಯೋಗಸಮಾಧಿ ಬಳಿ ಹೋದೆ. ಭಾವೋನ್ಮತ್ತನಾದೆ. ಅವರನ್ನೇ ಸಮಾಧಿ ಮೇಲೆ ಕಂಡಂತಾಯಿತು. ಆ ದಿವ್ಯದರ್ಶನವನ್ನು ಕೆಳಕಂಡಂತೆ ಬರೆದೆ :

ರತ್ನಕಾಂತಿಯೊಳೆಸೆವ ರಾಜೇಂದ್ರನಂ ಕಂಡೆ
ಸುತ್ತೂರು ಶಿವಯೋಗಮಂಟಪದಿ ನಾ ಕಂಡೆ || ಪ ||

ಜ್ಯೋತಿರೂಪನ ಕಂಡೆ ಖ್ಯಾತನಾಮನ ಕಂಡೆ
ಮಾತುಮನಸಾದಿಗಳ ಮೀರಿನಿಂತನ ಕಂಡೆ ||ಅ.ಪ.||



ಗಗನದೆತ್ತರ ಬೆಳೆದ ಜ್ಞಾನಮೂರುತಿ ಕಂಡೆ
ಸುಗುಣವೇ ಮೈವೆತ್ತ ಸುಂದರಾಂಗನ ಕಂಡೆ
ಮಗುಮನದ ಮುನಿಮತಿಯ ಮಂತ್ರಮುಗ್ಧನ ಕಂಡೆ
ನಗೆ ಬೀರುತಿಹ ರಾಜಗುರುತಿಲಕನಂ ಕಂಡೆ || 1 ||

ಹೊನ್ನಮೈ ಮಾಣಿಕ್ಯದೀಪ್ತಿತೇಜನ ಕಂಡೆ
ಕಣ್ಣುಗಳ ಕೋರೈಪ ಕಾವಿಯುಟ್ಟನ ಕಂಡೆ
ಬಣ್ಣನೆಗೆ ನಿಲುಕದಿಹ ಭವ್ಯಮೂರುತಿ ಕಂಡೆ
ಚೆನ್ನಶಿವಯೋಗದೊಳಗೋಲಾಡುವವನ ಕಂಡೆ || 2 ||

ಅಂಗಸರ್ವಸ್ವವೂ ಲಿಂಗವಾದನ ಕಂಡೆ
ಲಿಂಗವೇ ತಾನಾದ ಮಂಗಳಾಂಗನ ಕಂಡೆ
ತುಂಗಕೀರ್ತಿಯ ಧವಳಶಿಖರವೇರ್ದನ ಕಂಡೆ
ಮಂಗಳವನೆಲ್ಲರ್ಗೆ ನೀಡಿ ನಗುವನ ಕಂಡೆ || 3 ||

ತನುಮೋಹವನ್ನಳಿದ ತ್ಯಾಗಮೂರುತಿ ಕಂಡೆ
ವನಿತೆವಿತ್ತವನುಳಿದ ವೀರವಿರತನ ಕಂಡೆ
ವಿನಯವಾರಿಧಿಯಾದ ವಿಶ್ವಮಾನ್ಯನ ಕಂಡೆ
ಜನಮನದ ಪೀಠದಲಿ ಮೂರ್ತಗೊಂಡನ ಕಂಡೆ || 4 ||

ಭವಮರಣಗಳ ಗೆಲಿದ ಬಹುಬಲ್ಲಿದನ ಕಂಡೆ
ಬುವಿಗಿಳಿದ ಶಿವನೀತನೆಂಬ ನಿಜವನು ಕಂಡೆ
ಶಿವರಾತ್ರಿಗುರುಚರಣದಡಿ ನಿಂದವನ ಕಂಡೆ
ಶಿವರಾತ್ರಿದೇಶಿಕೇಂದ್ರರನಿತ್ತುದನು ಕಂಡೆ || 5 ||

ಈ ನಾಡು ಕಂಡ ದಿವ್ಯಚೇತನರು ಆ ಮಹಾಂತರು. ನಾಡಿನುದ್ಧಾರಕ್ಕಾಗಿಯೇ ಅವತರಿಸಿದ ಕಾರಣಿಕಪುರುಷರು. ಆ ಪೂತೆ ಮರಮ್ಮಣ್ಣಿಯವರ ಪುಣ್ಯಗರ್ಭದಿಂದ ಈ ಬುವಿಗಿಳಿದ ಭಾಗ್ಯಜ್ಯೋತಿಯವರು. ಸುತ್ತೂರು ಶ್ರೀಮಠವನ್ನು ಭದ್ರವಾಗಿ ಪುನರುದ್ಧರಿಸಲು ಪಣತೊಟ್ಟ ಮಂತ್ರಮಹರ್ಷಿಗಳು ಕರುಣಿಸಿದ ಕಾರುಣ್ಯಶಿಶುವಾಗಿದ್ದ ಅವರು ಈ ನಾಡು ಕಂಡ ಅಪೂರ್ವಮಹಿಮಾನ್ವಿತರು ; ಮಾತೃಹೃದಯದ ದೈವತಾಸ್ವರೂಪರು.

□

# ನಮ್ಮ ಅಂತರಂಗದ ಮಾರ್ಗದರ್ಶಿಗಳು

**ಶ್ರೀ ಶ್ರೀ ಚೆನ್ನಬಸವ ಸ್ವಾಮಿಗಳು**
ಶ್ರೀ ಕಂಬಳೀಶ್ವರ ಮಠ, ಸುಕ್ಷೇತ್ರ ಮಲ್ಲನಮೂಲೆ
ಬಸವನಪುರ, ನಂಜನಗೂಡು ತಾ.

ಸುತ್ತೂರು ಶ್ರೀಮಠ ಅನ್ನದಾಸೋಹ ಮತ್ತು ಜ್ಞಾನ ದಾಸೋಹಕ್ಕೆ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದ ಆರಂಭದ ದಿನಗಳು. ಮೈಸೂರಿನ ಇಂದಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಹಾಸ್ಟೆಲ್, ಶ್ರೀಮಠದ ದಾಸೋಹದ ಕೇಂದ್ರಸ್ಥಾನ. ಮತ್ತು 1951ನೇ ಇಸವಿ. ನಾನು ವಿದ್ಯಾಭ್ಯಾಸಕ್ಕಾಗಿ ಅಲ್ಲಿ ಆಶ್ರಯ ಪಡೆದಿದ್ದೆ. ಪರಮ ಪೂಜ್ಯ ಜಗದ್ಗುರುಗಳವರು ತಮ್ಮ ವಿದ್ಯಾಭ್ಯಾಸದ ಜೊತೆಗೆ ಹಾಸ್ಟೆಲಿನ ಉಸ್ತುವಾರಿಯನ್ನೂ ವಹಿಸಿಕೊಂಡಿದ್ದರು. ಸುತ್ತೂರು ಮಂತ್ರಮಹರ್ಷಿಗಳ ಕಾರ್ಯಕ್ಷೇತ್ರವಾಗಿದ್ದರೆ, ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕಾರ್ಯಕ್ಷೇತ್ರ ಹೆಚ್ಚಾಗಿ ಮೈಸೂರು ನಗರವಾಗಿತ್ತು. ಪೂಜ್ಯರು ಸದಾ ಹಸನ್ಮುಖಿಗಳು, ಮೃದುಭಾಷಿಗಳು. ಅವರಿಗೆ ಕೋಪ ಬರುತ್ತಿದ್ದುದು ಯಾರಾದರೂ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಂಡಾಗ ಮಾತ್ರ. ಆ ಕೋಪವೂ ಬಹಳ ಹೊತ್ತು ಇರುತ್ತಿರಲಿಲ್ಲ. ವಿದ್ಯಾರ್ಥಿನಿಲಯದ ನಿರ್ವಹಣೆಗೆ ಅವರು ಅಂದು ಬಹಳ ಕಷ್ಟಪಡುತ್ತಿದ್ದರು. ನಮಗೆ ಆಗ ಅಷ್ಟು ಅರ್ಥವಾಗುತ್ತಿರಲಿಲ್ಲ.



ಆದರೆ ಅವರಿವರು ನಮ್ಮ ಮುಂದೆ ಮಾತನಾಡಿಕೊಳ್ಳುತ್ತಿದ್ದುದು ನಮಗೆ ಅಷ್ಟಿಷ್ಟು ತಿಳಿಯುತ್ತಿತ್ತು. ಕೆಲವರು ಆಗಾಗ ಅಂಗಡಿ ಬಾಕಿ ಕೇಳಿಕೊಂಡು ಬರುತ್ತಿದ್ದರು. ಒಮ್ಮೊಮ್ಮೆ ಅವರು ಬೇಸರ ಮಾಡಿಕೊಂಡು ಹಿಂತಿರುಗುತ್ತಿದ್ದುದೂ ಉಂಟು. ಆದರೆ ನಮಗೆ ಇವಾವುವೂ ಹೆಚ್ಚು ತಿಳಿಯುತ್ತಿರಲಿಲ್ಲ. ನಮ್ಮ ಶ್ರೀಮಠದ ಹಿರಿಯ ಗುರುಗಳ ಬಗ್ಗೆ ಶ್ರೀ ರಾಜೇಂದ್ರ ಸ್ವಾಮಿಗಳಿಗೆ ಅತೀವ ಪ್ರೀತಿ. ಅಷ್ಟೇ ಪ್ರೀತಿಯನ್ನು ನನ್ನ ಮೇಲೆಯೂ ತೋರಿಸುತ್ತಿದ್ದರು.

ಅವರು ಮೈಸೂರಿನಲ್ಲಿ ಇದ್ದಾಗ ಮಾತ್ರ ತಪ್ಪದೆ ವಿದ್ಯಾರ್ಥಿಗಳ ಊಟದ ಪಂಕ್ತಿಗೆ ಬರುತ್ತಿದ್ದರು. ಎಲ್ಲರೂ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದನ್ನು ಗಮನಿಸುತ್ತ ಕುಳಿತಿರುತ್ತಿದ್ದರು. ಅನಂತರ ಪಂಕ್ತಿ ಪ್ರಾರಂಭವಾದಾಗ ತಮ್ಮ ಕೊಠಡಿಯಿಂದ ಮತ್ತೊಮ್ಮೆ ಬರುತ್ತಿದ್ದರು. ಜೊತೆಯಲ್ಲಿ ಕ್ಯಾತನಹಳ್ಳಿ ಶ್ರೀಗಳು ಇರುತ್ತಿದ್ದರು. ಆ ಸಂದರ್ಭದಲ್ಲಿ ಪೂಜ್ಯರು ತಮ್ಮ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡಿರುತ್ತಿದ್ದರು. ಯಾಕೆ ಹೀಗೆ ಎಂದು ನನಗೆ ತಕ್ಷಣ ತಿಳಿಯಲಿಲ್ಲ. ಅನಂತರ ನಿಧಾನವಾಗಿ ಅರ್ಥವಾಯಿತು. ಪ್ರತಿಯೊಬ್ಬರ ಬಳಿಯೂ ಬಂದು ಅವರು ಶರ್ಟಿನ ಒಳಗೆ ಕೈ ಹಾಕಿ ಪರೀಕ್ಷಿಸುತ್ತಿದ್ದರು; ಇಲ್ಲವೇ ಶರ್ಟನ್ನು ಮೇಲಕ್ಕೆ ಎತ್ತುವಂತೆ ಸೂಚಿಸುತ್ತಿದ್ದರು. ಅವರು ಇಷ್ಟಲಿಂಗವನ್ನು ಹಾಕಿಕೊಂಡಿದ್ದರೆ ಬದುಕಿಕೊಂಡರು. ಇಲ್ಲದಿದ್ದರೆ ಹಿಂದಕ್ಕೆ ಕಟ್ಟಿಕೊಂಡಿದ್ದ ಕೈ ಮುಂದಕ್ಕೆ ಬರುತ್ತಿತ್ತು. ಬೆತ್ತದ ಏಟು ತಪ್ಪಿದ್ದಲ್ಲ. ತ್ರಿಪುಂಡ್ರಧಾರಣೆಯ ಬಗ್ಗೆ ಇಷ್ಟಲಿಂಗದ ಬಗ್ಗೆ ಪೂಜ್ಯರು ತುಂಬಾ ಕಟ್ಟುನಿಟ್ಟು. ಹೀಗೆ ಎಲ್ಲರ ತಪಾಸಣೆಯೂ ನಡೆದ ನಂತರ ಪ್ರಸಾದ ಸ್ವೀಕರಿಸಬೇಕಾಗುತ್ತಿತ್ತು. ಅನಂತರ ಸಮಯ ಸಿಕ್ಕಿದಾಗಲೆಲ್ಲ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ವೀರಶೈವ ಧರ್ಮ ಸಂಸ್ಕೃತಿಯ ಬಗ್ಗೆ ಬೋಧನೆ ಮಾಡುತ್ತಿದ್ದರು. ಪೂಜ್ಯರು ಹೊಸ ಸಯ್ಯಾಜಿರಾವ್ ರಸ್ತೆಯಲ್ಲಿರುವ 'ನಿರಂಜನ ನಿಲಯ' ಎನ್ನುವಲ್ಲಿ ಹೆಚ್ಚು ವಾಸಿಸುತ್ತಿದ್ದರು. ನನ್ನನ್ನು ಆಗಾಗ ಅಲ್ಲಿಗೆ ಕರೆಸಿಕೊಂಡು ನಮ್ಮ ಹಿರಿಯ ಗುರುಗಳ ಬಗ್ಗೆ ಕೇಳುತ್ತಿದ್ದುದರ ಜೊತೆಗೆ ನನ್ನ ವಿದ್ಯಾಭ್ಯಾಸದ ಕುಂದುಕೊರತೆಗಳ ಬಗ್ಗೆಯೂ ವಿಚಾರಿಸಿಕೊಳ್ಳುತ್ತಿದ್ದರು. ನಂಡನಗೂಡಿನ ಸುತ್ತಮುತ್ತ ಧಾನ್ಯದ ಭಿಕ್ಷೆಗೆ ಹೊರಡುವಾಗಲೆಲ್ಲಾ ಪೂಜ್ಯರು ಮಲ್ಲನಮೂಲೆಯ ಕಂಬಳೀಶ್ವರ ಮಠದಲ್ಲಿ ಪೂಜಾನುಷ್ಠಾನಗಳನ್ನು ಮುಗಿಸಿಕೊಂಡೇ ಹೊರಡುತ್ತಿದ್ದುದು. ನಮಗೆ ಈಗಲೂ ಕಣ್ಣಿನಲ್ಲಿ ಅಚ್ಚೊತ್ತಿದಂತೆ ಇದೆ. ಆ ದಿನಗಳಲ್ಲಿ ಸುತ್ತೂರಿಗೆ ನಂಜನಗೂಡು ಮಾರ್ಗವಾಗಿಯೇ ಹೋಗಬೇಕಾಗಿತ್ತು. ಬೇರೆಯ ಮಾರ್ಗವಿರಲಿಲ್ಲ. ಹಾಗೆ ಹೋಗುವಾಗೆಲ್ಲಾ ಹೆದ್ದಾರಿಯಲ್ಲೇ ಇರುವ ಕಂಬಳೀಶ್ವರ ಮಠದ ಮುಂದೆ ನಿಂತು ಒಮ್ಮೆ ಮಠವನ್ನು ಅವಲೋಕಿಸಿಯೇ ಮುಂದಕ್ಕೆ ಹೋಗುತ್ತಿದ್ದರು. ಹಿರಿಯ ಗುರುಗಳು ಗದ್ದಿಗೆಯಲ್ಲಿ ಇದ್ದರೆ ಅವರನ್ನು ಭೇಡಿ ಮಾಡಿ ಮುನ್ನಡೆಯುತ್ತಿದ್ದರು.

1986ನೇ ಇಸವಿಯಲ್ಲಿ ನಮ್ಮ ಗುರುಗಳ ಗದ್ದುಗೆಯ ಮೇಲೆ ಗೋಪುರವನ್ನು ನಿರ್ಮಿಸಿ ಕಳಸ ಪ್ರತಿಷ್ಠಾಪನೆಯನ್ನು ಮಾಡಲಾಯಿತು. ಅದೊಂದು ಅದ್ಧೂರಿಯಾದ ಸಮಾರಂಭ.

ಆದ್ಯಂತವಾಗಿ ಆ ಸಮಾರಂಭಕ್ಕೆ ಮಾರ್ಗದರ್ಶನ ಮಾಡಿದವರು ಶ್ರೀ ರಾಜೇಂದ್ರ ಸ್ವಾಮಿಗಳು. ಸಮಾರಂಭಕ್ಕೆ ಪೂರ್ವದ ಒಂದು ತಿಂಗಳು ನಿತ್ಯವೂ ಸಂಜೆ ಗದ್ದುಗೆಯ ಬಳಿ ಆಗಮಿಸಿ ಸಲಹೆ ಸೂಚನೆಗಳನ್ನು ಕೊಟ್ಟ ರೀತಿಯನ್ನು ನಾವು ಎಂದಿಗೂ ಮರೆಯುವಂತಿಲ್ಲ. ಅಂದಿನ ಸಮಾರಂಭಕ್ಕೆ ನಾಡಿನ ಹಿರಿಯ ಸ್ವಾಮಿಗಳು ಮತ್ತು ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರು ಆಗಮಿಸಲು ಕಾರಣರಾದವರು ಪರಮಪೂಜ್ಯ ಶ್ರೀ ಶ್ರೀಗಳವರು. ಪೂಜ್ಯರಿಂದ ಅನೇಕ ರೀತಿಯ ಮಾರ್ಗದರ್ಶನಗಳನ್ನು ಪಡೆದಿರುವುದು ನಮ್ಮ ಪುಣ್ಯವೆಂದೇ ಭಾವಿಸಿದ್ದೇವೆ. ಮೈಸೂರಿನಲ್ಲಿ ನಡೆಯುತ್ತಿದ್ದ ಜಯಂತಿ ಉತ್ಸವಗಳಲ್ಲಿ ಅನ್ನದಾಸೋಹದ ಜವಾಬ್ದಾರಿಯನ್ನು ನನಗೆ ವಹಿಸುತ್ತಿದ್ದರು. ಅವರಲ್ಲಿ ಅದಾವ ಶಕ್ತಿ ಅಡಗಿತ್ತೋ ಏನೋ, ಎಂತಹ ಒರಟು ಮನುಷ್ಯನೂ ಅವರ ಮುಂದೆ ನಿಂತ ತಕ್ಷಣ ಮೃದುವಾಗಿಬಿಡುತ್ತಿದ್ದ. ಸಮಸ್ಯೆಯ ಬೆಟ್ಟವೇ ನಮ್ಮ ಮೇಲೆ ಇದ್ದರೂ, ಅವರ ದೃಷ್ಟಿಮಾತ್ರದಿಂದ ಅದು ಹಗುರವಾಗಿಬಿಡುತ್ತಿತ್ತು. ಅವರ ಭೌತಿಕ ಕಾಯ ಇಂದು ನಮ್ಮ ಮುಂದೆ ಇಲ್ಲದಿದ್ದರೂ, ಅವರ ದಿವ್ಯ ಚೇತನ ನಮಗೆ ಇಂದೂ ಮಾರ್ಗದರ್ಶಕವಾಗಿದೆ ಎನ್ನುವುದು ನಮ್ಮ ಯಾವತ್ತೂ ನಂಬುಗೆಯಾಗಿದೆ.

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ, ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ, ನೀನು ಆಕಾರವಾಗಿರ್ದಲ್ಲಿ
ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ, ನೀನೆನ್ನ ಭವವ ಕೊಂದೆಹೆನೆಂದು
ಜಂಗಮಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ,
ಕೂಡಲಸಂಗಮದೇವಾ.

**ಬಸವಣ್ಣ**

# ಉಪಮಾತೀತರು ಶ್ರೀ ರಾಜೇಂದ್ರರು

**ಶ್ರೀ ನಿ.ಪ್ರ.ಸ್ವ. ಮಹಂತ ಸ್ವಾಮಿಗಳು**
ಅಧ್ಯಕ್ಷರು, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ
ದೇವನೂರು, ನಂಜನಗೂಡು ತಾ.

ಪ್ರಸ್ತುತದಲ್ಲಿ 'ಕಾಯಕವೇ ಕೈಲಾಸ'ವೆಂಬ ಲಾಂಛನದಡಿ ರಾಜ್ಯ, ರಾಷ್ಟ್ರ ಹಾಗು ವಿದೇಶಗಳಲ್ಲಿ ತನ್ನ ಲೋಕಕಲ್ಯಾಣ ಕಾಯಕವನ್ನು ಕೈಗೊಂಡಿರುವ ಜೆಎಸ್‌ಎಸ್ ಸಂಸ್ಥೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದೂರದೃಷ್ಟಿ ಮತ್ತು ಮಹಾ ಮಾನವತಾವಾದಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಇದೇ ಆಗಸ್ಟ್ ತಿಂಗಳಿನಲ್ಲಿ ಇಂತಹ ಮಹಾತ್ಮರ ಜಯಂತಿ ನಡೆಯುತ್ತಿರುವುದು ನಿಜಕ್ಕೂ ಪುಣ್ಯದ ಕೆಲಸ. ಇಂತಹ ಪೂಜ್ಯರ ಜಯಂತಿಗಳನ್ನು ಆಚರಿಸುವುದರ ಮೂಲಕ ದಿವ್ಯಚೇತನರ ದಿವ್ಯಾಮೃತಗಳನ್ನು ಸವಿಯಲು, ಪೂಜ್ಯರನ್ನು ನೆನಪಿಸಿಕೊಂಡು ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಸಲು ಸಾಧ್ಯವಾಗುತ್ತದೆ ಎಂಬುದು ನಮ್ಮ ನಂಬುಗೆ.

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳು ನಮ್ಮೊಡನೆ ಇದ್ದಿದ್ದರೆ ಈಗ ಅವರಿಗೆ 94 ವಸಂತ ಗಳಾಗಿರುತ್ತಿದ್ದವು. ಆದರೆ ಅವರು ತೊಟ್ಟು ಕಳಚಿ ಲಿಂಗವಾಗಿ, ಸಮಾಜಕ್ಕೆ ಮಾದರಿಯಾಗತಕ್ಕ ಚಿಂತನೆಗಳನ್ನು, ಕಾಯಕವನ್ನು,

ಸೇವೆಗಳನ್ನು ಬಿಟ್ಟು ಹೋಗಿದ್ದಾರೆ.

ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರನ್ನು ನಾವು ಚಿಕ್ಕಂದಿನಿಂದಲೇ ಬಲ್ಲೆವು ಎಂದು ಹೇಳಲು ಮತ್ತೂ ಸಂತಸವಾಗುತ್ತದೆ. ನಮ್ಮ ವಿದ್ಯಾಭ್ಯಾಸ ಸುತ್ತೂರಿನಲ್ಲಿ ನಡೆಯುತ್ತಿದ್ದಾಗ ಪೂಜ್ಯರ ದಿವ್ಯದರ್ಶನವಾಗುತ್ತಿತ್ತು. ಅವರದು ಮಾತೃಹೃದಯ. ವಿದ್ಯಾರ್ಥಿಗಳ ಹಸಿವನ್ನು ತಣಿಸಲು ಅವರು ಊರೂರಿಗೆ ಹೋಗಿ ಭತ್ತ, ರಾಗಿ ಇತ್ಯಾದಿ ಧಾನ್ಯಗಳನ್ನು ಭಿಕ್ಷೆ ಎತ್ತಿಕೊಂಡು ಬಂದು ಸಲಹುತ್ತಿದ್ದರು. ಇದಲ್ಲವೇ ಪೂಜೆ!

ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರನ್ನು ಅಂದಿನ ದಿನಗಳಲ್ಲಿ ಮುಖತಃ ಮಾತನಾಡಿಸಲು ಅಂಜಿದವರಲ್ಲ. ಕಾರಣ ಅವರು ನಮ್ಮಂತಹ ಕಿರಿಯರೊಂದಿಗೆ ಸಾಮಿಪ್ಯ, ಮಾತುಕತೆ ಮತ್ತು ಚಿಂತನೆಗಳನ್ನು ಹಂಚಿಕೊಳ್ಳುತ್ತಿದ್ದದ್ದು ಇವುಗಳು ನಮ್ಮ ಮೇಲೆ ಪ್ರಭಾವಿಸಿದ್ದು ಸತ್ಯಸ್ಯ ಸತ್ಯವಾಗಿವೆ.

ಮುಂದೆ ನಾವು ದೇವನೂರು ಮಹಾತ್ಮ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಹಿರಿಯ ಗುರುಗಳ ಆಶೀರ್ವಾದ, ಶ್ರೀಮಠದ ಭಕ್ತರ ಅಪೇಕ್ಷೆಯ ಮೇರೆಗೆ ಶ್ರೀಮಠದ ಅಧ್ಯಕ್ಷರಾದಾಗ, ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ತುಂಬು ಸಂತಸ ವ್ಯಕ್ತಪಡಿಸಿದರು. ನಮಗೆ ಸದಾ ಮಾರ್ಗದರ್ಶನ ಮಾಡುತ್ತಾ ಅನೇಕ ತೆರನ ಮಾರ್ಗದರ್ಶನ ನೀಡಿದರು.

ಶ್ರೀ ದೇವನೂರು ಮಠಕ್ಕೂ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರಿಗೂ ಅವಿನಾಭಾವ ಸಂಬಂಧ. ಶ್ರೀಮಠದ ಆರಾಧನಾ ಕಾರ್ಯಕ್ರಮಗಳಿಗೆ ಮೊದಲ ಬಿನ್ನಹ ನಡೆಯುತ್ತಿದ್ದುದೇ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರಿಗೆ. ಪೂಜ್ಯರು ಅದನ್ನು ಸ್ವೀಕರಿಸಿ ಮಹಾತ್ಮ ಶ್ರೀ ಗುರುಮಲ್ಲೇಶ್ವರರ ಆರಾಧನಾ ಮಹೋತ್ಸವಗಳಲ್ಲಿ ಭಾಗವಹಿಸಿ ಭಕ್ತರಿಗೆ ದರ್ಶನಾಶೀರ್ವಾದಗಳನ್ನು ದಯಪಾಲಿಸುತ್ತಾ ಬಂದ ಘನಮಹಿಮರು.

ಪೂಜ್ಯರು ತುಂಬು ಸರಳ ಜಂಗಮಮೂರ್ತಿಗಳು. ಅವರ ನಡೆ-ನುಡಿಗಳಲ್ಲಿ ಶಿವಪರವಾದ ಚಿಂತನೆಯೇ ಮನೆಮಾಡಿತ್ತು. ಅವರು ದೇವನೂರಿನ ಕಾರ್ಯಕ್ರಮಗಳಲ್ಲಿ ದಯಮಾಡಿಸಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ಅನುಗ್ರಹಿಸುತ್ತಿದ್ದರೆ, ಇಡೀ ಶರಣ ಸಂಸ್ಕೃತಿಯೇ ಅನಾವರಣಗೊಳ್ಳುತ್ತಿತ್ತು. ಇಡೀ ಭಕ್ತತಿಂತಣಿ ತನ್ಮಯರಾಗಿ ಶ್ರೀಗಳವರ ನುಡಿಗಳನ್ನು ಜಗಜ್ಯೋತಿ ಬಸವಣ್ಣನವರ ನುಡಿಗಳನ್ನು ಆಲಿಸುವಂತೆ ಆಲಿಸುತ್ತಿದ್ದದ್ದು ಈಗಲೂ ನಮ್ಮ ಸ್ಮರಣೆಗೆ ಬಂದೇ ಬರುತ್ತದೆ. ಅವರು ಅಂಥ ಪರಮ ಶ್ರೇಷ್ಠ ಜ್ಞಾನಮೂರ್ತಿಗಳು.

ಒಂದು ಸನ್ಮಠ ಮಾಡುವ ಲೋಕಕಲ್ಯಾಣ ಕಾಯಕಗಳು ಹೇಗಿರಬೇಕೆಂದು ತೋರಿಸಿಕೊಟ್ಟ ಸದ್ಗುರುಗಳು ಅವರು. ಸುತ್ತೂರಿನ ಜಾತ್ರಾ ಮಹೋತ್ಸವಕ್ಕೆ ನಮಗೆ ತಪ್ಪದೆ ಆಹ್ವಾನ ಕಳುಹಿಸಿ ಬರಮಾಡಿಕೊಳ್ಳುತ್ತಿದ್ದರು. ಅಲ್ಲಿ ಎಲ್ಲಾ ಶ್ರೀಮಠದ ಗುರುಗಳೆಲ್ಲರೂ ಸೇರಿ ತತ್ವ, ಚಿಂತನೆಗಳನ್ನು ಪರಸ್ಪರ ಸಮಾಲೋಚಿಸಲು ಈ ಸಂದರ್ಭ ಒದಗಿ ಬರುತ್ತಿತ್ತು.



ದೇವನೂರು ಶ್ರೀ ಕ್ಷೇತ್ರಕ್ಕೆ ಶ್ರೀ ರಾಜೇಂದ್ರ ಗುರುಗಳು ದಯಮಾಡಿದಾಗ ಎಲ್ಲಿಲ್ಲದ ಭಕ್ತಿಭಾವ ಆವರಿಸುತ್ತಿತ್ತು. ಶ್ರೀಮಠಕ್ಕೆ ಬಂದ ಕೂಡಲೇ ಪೂಜ್ಯರು ಶ್ರೀ ಗುರುಮಲ್ಲೇಶ್ವರರ ಗದ್ದುಗೆಗೆ ಆಗಮಿಸಿ ಶರಣು ಸಮರ್ಪಿಸಿ 'ಇದು ಶಾಂತಿಯ ತಾಣ'ವೆಂದು ಬಣ್ಣಿಸಿ ಮುಂದಿನ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಡುತ್ತಿದ್ದರು. ಶ್ರೀಗಳವರು ದೇವನೂರಿಗೆ ಬಂದಾಗ ತಪ್ಪದೇ ಕೊಟ್ಟಿಗೆಗೆ ಮತ್ತು ಪಾಕಶಾಲೆಗೆ ಭೇಟಿ ನೀಡುತ್ತಿದ್ದರು. ಭಕ್ತರಿಗೆ ತಯಾರಾಗುತ್ತಿದ್ದ ಪ್ರಸಾದವನ್ನು ನೋಡಿ, ಪ್ರಸಾದವನ್ನು ಸ್ವೀಕರಿಸುವ ಭಕ್ತರೆಡೆಗೂ ತಮ್ಮ ಪಾದ ಬೆಳೆಸುತ್ತಾ, ಭಕ್ತರು ಪ್ರಸಾದ ಸ್ವೀಕರಿಸುವಾಗ ಆ ಆನಂದವನ್ನು ನೋಡಿ ಸಂತೋಷಪಡುತ್ತಿದ್ದರು.

ಮಾನವತೆಯ ಮೇರುವಾಗಿದ್ದ ಪೂಜ್ಯರು ಪ್ರಾರಂಭದ ಹಂತದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ತಮ್ಮ ತನು ಮನ ಧನ ಸಹಿತ ಧಾರೆಯೆರೆದವರು. ಹಳೇ ಮೈಸೂರು ಭಾಗದಲ್ಲಿ ವಿದ್ಯಾರ್ಥಿಗಳಿಗೆ ಅನ್ನದಾನ ಮಾಡಿ ಉದ್ಧಾರಗೊಳಿಸಿದ ಪೂಜ್ಯರು ಕಲ್ಪವೃಕ್ಷ, ಕಾಮಧೇನು. ಇಂದು ಅನೇಕ ಬಡ ಕುಟುಂಬಗಳು ಸಮಾಜದಲ್ಲಿ ಏಳ್ಗೆಯಾಗಿವೆ ಎಂದರೆ ಅದಕ್ಕೆ ಶ್ರೀ ರಾಜೇಂದ್ರರ ಅಂದಿನ ಸಮಾಜ ಕಲ್ಯಾಣ ಕೆಲಸಗಳೇ ಆಗಿವೆ.

ಒಂದು ದೀಪ ಮತ್ತೊಂದು ದೀಪವನ್ನು ಬೆಳಗುವಂತೆ ಶ್ರೀ ರಾಜೇಂದ್ರರು ಸ್ಥಾಪಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠ ಇಂದು 300ಕ್ಕೂ ಹೆಚ್ಚು ಸಂಸ್ಥೆಗಳನ್ನು ತೆರೆದು ಈ ನಾಡಿನ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಅಗತ್ಯತೆಗಳನ್ನು ಪೂರೈಸಿ ಮಾದರಿ ಸಂಸ್ಥೆಯಾಗಿರುವುದು ಹೆಮ್ಮೆಯ ವಿಚಾರವಾಗಿದೆ. ಇಂತಹ ಸಮಾಜೋ-ಧಾರ್ಮಿಕ ಕ್ರಾಂತಿಗೆ ಕಾರಣಪುರುಷರಾದ ಮಹಾತ್ಮರನ್ನು ನೆನೆಯುವುದು ಪುಣ್ಯದ ಕಾರ್ಯ.

ಜಂಗಮರನ್ನು ಕಂಡರೆ ಅವರಿಗೆ ಅಪಾರ ಪ್ರೀತಿ ಗೌರವಭಾವ. ಹಿರಿಯರು ಕಿರಿಯರೆನ್ನದೆ ಎಲ್ಲರನ್ನೂ ಸಮಾಜದ ಒಳಿತಿನೆಡೆಗೆ ಕರೆದೊಯ್ದ ಆಧುನಿಕ ಬಸವಣ್ಣನೇ ಅವರು. ಅವರು ಚಿಂತನೆಯ ಮೇರುವಾಗಿದ್ದಾಗ್ಯೂ ಚಿಕ್ಕ ಮಕ್ಕಳಂತೆ, ಮುಗ್ಧ ಹೃದಯವನ್ನಿಟ್ಟುಕೊಂಡು ನಮ್ಮೆಲ್ಲರಿಗೂ ಅಚ್ಚರಿ ತಂದವರು.

ಶ್ರೀ ರಾಜೇಂದ್ರರು ಎಂದಕೂಡಲೆ ನಮ್ಮ ಕಣ್ಮುಂದೆ ನಿಲ್ಲುವುದು ನಗುಮೊಗದ ಕಾಂತಿ; ಎಲ್ಲರ ನೋವನ್ನು ಇಲ್ಲವಾಗಿಸುವ ಆ ನಿಷ್ಕಲ್ಮಶ ಪ್ರೀತಿ ತುಂಬಿದ ಹೃದಯ; ಎರಡು ಕಿವಿಗಳನ್ನು ಮುಚ್ಚಿ, ತಲೆಯಾವರಿಸಿರುವ ಆ ಖಾವಿ; ನಿಂತರೆ ಗಂಭೀರವಾಗಿ ಶಿವಪಥವನ್ನು ತೋರಿಸುವ ವಾಗ್ಝರಿ. ಎಲ್ಲರನ್ನೂ 'ಇವ ನಮ್ಮವ ಇವ ನಮ್ಮವ'ನೆಂದು ಕೃಪೆ ತೋರುವ ಜಂಗಮ ಜ್ಯೋತಿಗಳು.

ಮಠಗಳು ಕೇವಲ ಧರ್ಮವನ್ನು ಬಿತ್ತರಿಸುತ್ತಲೇ, ಅದನ್ನು ಒಳಗೊಂಡಂತೆ ಸಾಂಸ್ಕೃತಿಕವಾಗಿ ಕೊಡುಗೆ ನೀಡಲು ಮುಂದಾಗಬೇಕೆಂದು ಒಂದು ಸತ್ಪಥವನ್ನು ಹಾಕಿ ಹೋದವರು

ಶ್ರೀ ರಾಜೇಂದ್ರ ಮಹಾಸ್ವಾಮಿಗಳು. ಅವರು ಸರ್ವರನ್ನೂ ಸಮಾನವಾಗಿ ಕಂಡ ದಯಾಳುಗಳು. ನಮ್ಮ ಶ್ರೀಮಠಕ್ಕೆ ಭೇಟಿ ನೀಡಿದಾಗಲೆಲ್ಲಾ 'ತಾವೂ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ' ಎಂದು ಹೇಳಿ ನಮಗೆ ಮಾರ್ಗದರ್ಶನ ಮಾಡಲು ನಾವು ಹತ್ತು ಪ್ರೌಢಶಾಲೆಗಳನ್ನು, ಒಂದು ಪಾಲಿಟೆಕ್ನಿಕ್ ಕಾಲೇಜನ್ನು ತೆರೆದೆವು. ಶ್ರೀಗಳವರು ಹೋದೆಡೆಯೆಲ್ಲಾ ಮಾರ್ಗದರ್ಶನ ಮಾಡಿ ಭಕ್ತರಿಗೆ, ಸಮಾಜಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನ ಒದಗಿಸಲು ಮುಂದಾಗುತ್ತಿದ್ದರು. ಹೀಗೆ ಮಾರ್ಗದರ್ಶನ, ಅನುಗ್ರಹ ಮಾಡುವ ಮಹಾಗುರುಗಳು ತುಂಬಾ ಅಪರೂಪ.

ಅಲ್ಲಮಪ್ರಭುಗಳು ತಮ್ಮದೊಂದು ವಚನದಲ್ಲಿ "ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಬಾರದು, ಓಗರವನರ್ಪಿಸಬಹುದಲ್ಲದೆ ಪ್ರಸಾದವನರ್ಪಿಸಬಾರದು. ಗುಹೇಶ್ವರಾ ನಿಮ್ಮ ಶರಣರು ಹಿಂದ ನೋಡಿ ಮುಂದನರ್ಪಿಸುವರು" ಎಂಬಂತೆ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ವಿಚಾರವಾಗಿ ಸಾಗರದಲ್ಲಿನ ಒಂದು ಹನಿಯಷ್ಟು ಅನುಭವಗಳನ್ನು ಪದಗಳಲ್ಲಿ ಅರ್ಪಿಸುವ ಕೆಲಸ ಮಾಡಿದ್ದೇವೆ. ಕೆಲವೊಮ್ಮೆ ಇಲ್ಲಿನ ಅನುಭವಗಳು ಹಿಂದೆ ಮುಂದಾದಂತೆ ತೋರಿದರೆ ಅದು ಪೂಜ್ಯರ ಬಗೆಗಿನ ನಮ್ಮ ಪ್ರೀತಿಯ ದ್ಯೋತಕ.

ಪೂಜ್ಯ ಡಾ. ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಸತ್ಯರು, ನಿತ್ಯರು. ಇಂತಹ ಸತ್ಯರು ನಡೆದ ನಡೆಯೇ ಕ್ಷೇತ್ರ, ನುಡಿಯೇ ತೀರ್ಥ. ಇಂಥ ಪವಿತ್ರಾತ್ಮರ ಸಂಗವೇ ಶ್ರೇಷ್ಠ. ಅಂಥ ಪರಮಪೂಜ್ಯರ ದಿವ್ಯ ಚೇತನಕ್ಕೆ ನಮಿಸುತ್ತಾ ಈ ಲೇಖನಕ್ಕೆ ಮಂಗಳ ಹಾಡುತ್ತೇವೆ. □

ಒಂದೆ ಹೂ, ಒಂದೆ ಅಗ್ಘವಣಿ, ಒಂದೆ ಓಗರ, ಒಂದೆ ಪ್ರಸಾದ;
ಒಂದೆ ಮನ, ಒಂದೆ ಲಿಂಗ !
ನಂದಾದೀವಿಗೆ ಕುಂದದ ಬೆಳಗು ಸ್ವತಂತ್ರ ಪೂಜೆ ಒಂದೆ !
ಅನಾಹತವೆರಡಾಗಿ ಬಜಬಮುಖರಾಗಿ
ಕೆಟ್ಟುಹೋದರು ಗುಹೇಶ್ವರಾ.

**ಅಲ್ಲಮಪ್ರಭು**

# ಮಮತೆಯ ಕಲ್ಪವೃಕ್ಷ... ಚಿಂತನೆಯ ಕಾಮಧೇನು

**ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು**
ಶ್ರೀ ದೇಗುಲಮಠಾಧ್ಯಕ್ಷರು, ಕನಕಪುರ, ರಾಮನಗರ ಜಿಲ್ಲೆ

ಪ್ರಪಂಚದ ಇತಿಹಾಸದ ಹಿನ್ನೆಲೆಯಲ್ಲಿ ಕ್ರಿಯಾಶೀಲವಾಗಿ ಚಿಂತಿಸಿ ಮಂಥನಗೈದರೆ 'ಭರತಖಂಡ' ವಿಶ್ವ ವಂದನಾರ್ಹವಾದುದು. ದಯೆ, ಕರುಣೆ, ಅಂತಃಕರಣ, ಸನ್ಮಾರ್ಗ ಚಿಂತನೆ, ಪರರ ಕ್ಷೇಮ, ಸಮಾಜಸೇವೆ, ಧರ್ಮ, ನ್ಯಾಯ, ನೀತಿ, ನಿರಹಂಕಾರ, ನಿರ್ಬಲ ರಕ್ಷಣೆ ಹಾಗೂ ಒಳಿತು ಎಂದು ದೊರೆಯುವ ಪ್ರಪಂಚದ ಅನೇಕವೆಲ್ಲದ್ದಕ್ಕೂ ನಮ್ಮ ಭರತಖಂಡವೇ ಮೂಲವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಇಂತಹ ನೆಲೆಯಲ್ಲಿ ಭಾರತದ ವಿಶ್ವಖ್ಯಾತಿಗೆ ಒತ್ತುಕೊಟ್ಟಂತೆ ಕೆಲಸ ನಿರ್ವಹಿಸಿ ಅನೇಕ ಧರ್ಮಗಳ ಸಾರಸತ್ವವನ್ನು 'ದಯೆ' ಎಂಬ ಎರಡಕ್ಷರದಲ್ಲಿ ಹುದುಗಿಸಿ 'ದಯೆಯೇ ಧರ್ಮದ ಮೂಲವಯ್ಯಾ' ಎಂದು ಎಲ್ಲಾ ಧರ್ಮಗಳ ಸಾರವನ್ನು ಕೇಂದ್ರೀಕರಿಸಿ ನಿಂತ ಕನ್ನಡನಾಡು ಪುಟ್ಟ ಪ್ರಪಂಚದಂತಿರುವ ಭಾರತದಲ್ಲಿ ಒಂದು ಪುಟ್ಟ ಭಾರತವಾಗಿ ಹೊರಹೊಮ್ಮಿತ್ತು. ಇಂತಹ ಸರ್ವಗುಣಸಂಪನ್ನತೆಗೆ ಬೆನ್ನೆಲುಬಾಗಿ ನಿಂತವುಗಳೇ ಮಠಗಳು–ಮಂದಿರಗಳು, ದೇವಾಲಯಗಳು, ಸಾಧು-ಸಂತರುಗಳು

ಹಾಗೂ ಸಮಾಜಮುಖಿ ಸೇವಾತತ್ಪರರು.

ಈ ನಿಟ್ಟಿನಲ್ಲಿ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಮಠಗಳಲ್ಲಿ ಶ್ರೀಮತ್ಸುತ್ತೂರು ವೀರಸಿಂಹಾಸನಮಠವೂ ಒಂದು. ಮೈಸೂರು ಜಿಲ್ಲೆಯ ಕಪಿಲಾನದಿ ದಂಡೆಯ ಪ್ರಶಾಂತ ಪರಿಸರದಲ್ಲಿ ನೆಲೆಗೊಂಡು ಸದಾ ಶಾಂತಿಮಂತ್ರದೊಂದಿಗೆ ಸಮಾಜದ ಸರ್ವತೋಮುಖ ಪ್ರಗತಿಗೆ ಚಿಂತಿಸುತ್ತಾ ಇಂದು ವಿಶ್ವಖ್ಯಾತಿಯ ಪುಷ್ಪಮಾಲೆಯಲ್ಲಿ ಕೇಂದ್ರಬಿಂದುವಿನಂತೆ ದಾಪುಗಾಲು ಹಾಕುತ್ತಿರುವ ಸುಪ್ರಸಿದ್ಧ 'ವೀರಸಿಂಹಾಸನ ಮಠ'.

ಶ್ರೀಮಠದ ಗುರುಪರಂಪರೆಯ ಪೀಠವನ್ನು ಅಲಂಕರಿಸಿದ ಗುರುವರೇಣ್ಯರೂ, ಸದಾ ಹಸನ್ಮುಖಿಗಳಾಗಿ ಶಿವಲೀಲಾಮೃತದೊಂದಿಗೆ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ಸರ್ವತೋಮುಖ ಅಭಿವೃದ್ಧಿಗೆ ಕಾಳಜಿಯಿತ್ತು, ಬಡವ-ಬಲ್ಲಿಗನೆಂಬ ಭೇದವೆಣಿಸದೆ ಎಲ್ಲರಿಗೂ, ಎಲ್ಲಾ ಕಾಲದಲ್ಲಿಯೂ ಒಳಿತನ್ನೇ ಬಯಸಿದವರು. ಆದಿ ಶ್ರೀ ಶಿವರಾತ್ರೀಶ್ವರ ಭಗವತ್ಪಾದರಿಂದ ಇಂದಿಗೂ ಸರ್ವವಿಧಿತವಾದುದೆಂದೇ ನಾವು ಭಾವಿಸಬೇಕು.

ಈ ಹಿನ್ನೆಲೆಯಲ್ಲಿ ಶ್ರೀಮತ್ಸುತ್ತೂರು ವೀರಸಿಂಹಾಸನದಲ್ಲಿ ಧರ್ಮದ ಪ್ರತಿರೂಪದಂತೆ ವಿರಾಜಮಾನರಾಗಿ ಅಲಂಕರಿಸಿದ ಇಪ್ಪತ್ಮೂರನೇ ಗುರುವರ್ಯರೇ ಶ್ರೀಮತ್ಸುತ್ತೂರು ವೀರಸಿಂಹಾಸನಾಧೀಶ್ವರ ಪರಮಪೂಜನೀಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಅನೇಕ ವರ್ಷಗಳಿಂದ ಸುಪ್ತವಾಗಿ – ಅಗೋಚರವಾಗಿ ಬೆಳೆದುನಿಂತ ಕಲ್ಪವೃಕ್ಷ ಒಂದೇಬಾರಿಗೆ ಜನರ ಆಶೋತ್ತರಗಳನ್ನು ಈಡೇರಿಸುವಂತೆ ಕಾಣಿಸಿಕೊಂಡು ಸಾವಿರಾರು ಭಕ್ತರ ಅಭೀಪ್ಸೆಯ ಆಗರವಾದರು? ಅಂದಿನ ಸ್ಥಿತಿಯಲ್ಲಿ ಧರ್ಮಕಾರ್ಯವೊಂದನ್ನೇ ನಿರ್ವಹಿಸದೆ ಶಿಕ್ಷಣ-ದಾಸೋಹಕ್ಕೆ ಹೆಚ್ಚಿನ ಒತ್ತುಕೊಟ್ಟು ಈ ನಾಡಿನ ಬಡತನ ನಿರ್ಮೂಲನಕ್ಕೆ ಶಿಕ್ಷಣವೇ ಮೂಲಮಂತ್ರವೆಂದು ಭಾವಿಸಿ ಶಿಕ್ಷಣ ಕೇಂದ್ರಗಳು, ಜೊತೆಯಲ್ಲಿ ದಾಸೋಹವನ್ನು ಪ್ರಾರಂಭಿಸಿದ "ಮಹಾನ್ ತೇಜೋಮೂರ್ತಿಗಳು".

ಇಂತಹ ತೇಜೋಮೂರ್ತಿಗಳವರ ಒಡನಾಟದಲ್ಲಿ ಕಂಡು – ಉಂಡ ವಿಚಾರಗಳು ನಮ್ಮ ಹೃದಯದ ಅಂತರಾಳದಲ್ಲಿವೆ. ಈ ಒಂದು ಸುಸಂದರ್ಭದಲ್ಲಿ ಅವುಗಳನ್ನು ಸ್ಮರಿಸಿಕೊಳ್ಳುವಂತಾಗಿದೆ.

### ಮಮತೆಯ ಕಲ್ಪವೃಕ್ಷ

ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ನಾವು ವಿದ್ಯಾರ್ಥಿದೆಸೆಯಿಂದಲೇ ಬಹಳ ಹತ್ತಿರದಿಂದ ಕಂಡವರು. ಅದರಲ್ಲಿಯೂ ಮೊದಲನೇ ಬಾರಿಗೆ ಅವರ ದರ್ಶನಾಭಿಲಾಶೆಯಾಗಿ ಬಂದದ್ದು ಶಾರದವಿಲಾಸ ಕಾಲೇಜ್‌ನಲ್ಲಿ ಪ್ರಥಮ ಪಿ.ಯು.ಗೆ ಸೇರಿದಾಗ. ಪ್ರೌಢ ಶಿಕ್ಷಣವನ್ನು ಚಾಮರಾಜನಗರ ತಾಲ್ಲೂಕು ಮರಿಯಾಲ ಮಠದಲ್ಲಿದ್ದುಕೊಂಡೇ ಚಾಮರಾಜನಗರ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಬಂದರೂ ವಸತಿ ಮತ್ತು ಊಟದ ವ್ಯವಸ್ಥೆ ನಮ್ಮನ್ನು ಕಾಡುತ್ತಿತ್ತು. ಈ ಒಂದು ಸಂದರ್ಭದಲ್ಲಿ ಮರಿಯಾಲ ಮಠದ ಪೂಜ್ಯಶ್ರೀ ಸದಾಶಿವಸ್ವಾಮಿಗಳವರು ನೀಡಿದ ಶಿಫಾರಸ್ಸು ಪತ್ರವನ್ನು ಪಡೆದು ಮೈಸೂರಿಗೆ ಬಂದು ದರ್ಶನ ಪಡೆದು ಪೂಜ್ಯ ಜಗದ್ಗುರುಗಳವರಿಗೆ ನಮಸ್ಕರಿಸಿ ಶಿಫಾರಸ್ಸು ಪತ್ರವನ್ನು ಅವರ ಕೈಗಿತ್ತಾಗ ಏನೊಂದನ್ನೂ ವಿಚಾರಿಸದೆ ಅದೇ ಪತ್ರದ ಮೇಲೆ 'ಈತನಿಗೆ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸುವುದು' ಎಂದು ಬರೆದು ಚೆನ್ನಾಗಿ ಓದು ಮಗು ಎಂದು ಹರಸಿ ಮೇನೇಜರ್ ಗುರುಮೂರ್ತಿಯವರನ್ನು ಕಾಣು ಎಂದು ಕಳುಹಿಸಿದ ಸಂದರ್ಭ ಇಂದಿಗೂ ಕಣ್ಮುಂದೆ ಸುಳಿದಂತಾಗುತ್ತದೆ. ಆ ಒಂದು ಸಮಯದಲ್ಲಿ ನಮ್ಮ ಮನಸ್ಸಿನ ಭಾವನೆಗಳು ಗರಿಬಿಚ್ಚಿ ಅಬ್ಬಾ! ಎಂಥ ಉದಾರತೆ! ಎಂಥ ನಿರ್ಮಲ ಮನಸ್ಸು! ಎಂಥ ಮುಗ್ಧತೆ, ಅಂದು ಪ್ರಾರಂಭವಾದ ಪೂಜ್ಯರ ಒಡನಾಟ ಇಂದಿಗೂ ನಮ್ಮ ಹೃದಯವನ್ನು ಹಗುರವನ್ನಾಗಿಸುತ್ತದೆ.



### ಚಿಂತನೆಯ ಕಾಮಧೇನು

ಇದೊಂದು ಆಂತರಿಕ ನೋವಿನ ಸಂದರ್ಭ. ಮೊದಲಬಾರಿಗೆ ಜಗದ್ಗುರುಗಳವರನ್ನು ದರ್ಶಿಸಿದಾಗ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸಿ ಕಷ್ಟಪಟ್ಟು ಓದು ಎಂದು ಹರಸಿ ಕಳುಹಿಸಿದರೂ ಆಂಗ್ಲಮಾಧ್ಯಮವಾದ ಪಿ.ಯು.ಸಿ. (ಪಿಸಿಎಂಬಿ) ಕಷ್ಟಪಟ್ಟು ಅಭ್ಯಾಸ ಮಾಡಿದರೂ ಅನುತ್ತೀರ್ಣನಾಗುವಂತಾಯಿತು. ಆದರೆ ಮತ್ತೆ ವ್ಯಾಸಂಗವನ್ನು ಮುಂದುವರಿಸುವ ಆಸೆ ಕಮರದೆ ಮತ್ತೊಮ್ಮೆ ಪೂಜ್ಯ ಶ್ರೀ ಸದಾಶಿವಮಹಾಸ್ವಾಮಿಗಳನ್ನು ಮೊರೆಹೊಕ್ಕುವಂತಾಯಿತು. ಪೂಜ್ಯ ಶ್ರೀ ಸದಾಶಿವಮಹಾಸ್ವಾಮಿಗಳು ಮತ್ತೊಂದು ಶಿಫಾರಸ್ಸು ಪತ್ರವನ್ನು ಕೈಗಿತ್ತು 'ಕ್ಯಾತನಹಳ್ಳಿ ಶ್ರೀಗಳವರು ಹತ್ತಿರವಿರುವಾಗ ಈ ಪತ್ರ ಕೊಡಬೇಡ ಏಕೆಂದರೆ ನೀನು ಫೇಲಾಗಿದ್ದಿಯಾ ಅವರೇನಾದರೂ ಜಗದ್ಗುರುಗಳ ಎದುರಿಗೆ ಫೇಲಾದವರಿಗೆ ಸೀಟು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಜಗದ್ಗುರುಗಳು ಆಗುವುದಿಲ್ಲ ಎನ್ನಬಹುದು. ಆದ್ದರಿಂದ ಒಬ್ಬರೆ ಇರುವಾಗ ಕೊಡು' ಎಂದು ಕಿವಿಮಾತು ಹೇಳಿ ಕಳುಹಿಸಿಕೊಟ್ಟರು. ಆದರೆ ಈ ದಿನ ತಾಳ್ಮೆಗೆ ಬೆಲೆ ಕಟ್ಟುವ ದಿನವಾಯಿತು. ಶ್ರೀ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಒಬ್ಬರೇ ಇರುವಂತಾದದ್ದು ನಾವು ಕಾದ ಒಂದೂವರೆದಿನದ ನಂತರ. ಏಕೆಂದರೆ ಕ್ಯಾತನಹಳ್ಳಿ ಶ್ರೀಗಳವರು ಜಗದ್ಗುರುಗಳವರನ್ನು ಬಿಟ್ಟು ಕದಲಲೇ ಇಲ್ಲ. ಯಾವುದೋ ಒಂದು ಕಾರಣಕ್ಕಾಗಿ ಕ್ಯಾತನಹಳ್ಳಿ ಶ್ರೀಗಳು ಒಳಗೆ ಹೋದಾಗ ಅದೇ ಸಂದರ್ಭ ಸುಸಂದರ್ಭವಾಗಿ ಕಂಡು ನೇರವಾಗಿ ಒಳಗೆ ಹೋಗಿ ಶ್ರೀಗಳವರಿಗೆ ನಮಸ್ಕರಿಸಿ ಪತ್ರವನ್ನು ಕೈಗಿತ್ತು ಮೌನಿಯಾದೆ. ಜಗದ್ಗುರುಗಳವರು ಕತ್ತೆತ್ತಿಯೂ ನೋಡದೆ ಅನುತ್ತೀರ್ಣವಾಗಿರುವ ಬಗ್ಗೆ ವಿಚಾರಿಸದೆ ಮೌನದಿಂದಲೇ ಈತನಿಗೆ ಪರೀಕ್ಷೆ ಮುಗಿಯುವವರೆಗೂ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸುವುದು ಎಂದು ಬರೆದು ಚೆನ್ನಾಗಿ ಓದೋ, ಎಂದೂ ಹೇಳಿ ಮೇನೇಜರ್ ಗುರುಮೂರ್ತಿಯನ್ನು ಕಾಣು ಎಂದರು.

ಶ್ರೀಗಳವರನ್ನು ಕಾಣುವವರೆಗೂ, ಕಂಡಮೇಲೆ ನನ್ನ ಬಗ್ಗೆ ಇರುವ ಅಭಿಪ್ರಾಯಗಳ ಬಗ್ಗೆ ನಮ್ಮ ಹೃದಯದ ಅಂತರಾಳದಲ್ಲಿ ಇದ್ದುದೇ ಬೇರೆ, ಆದರೆ ಸನ್ನಿಧಿಯಲ್ಲಿ ನಡೆದದ್ದೇ ಬೇರೆ. ಏಕೆಂದರೆ ಗ್ರಾಮೀಣ ಪ್ರದೇಶದ ಮಕ್ಕಳ ಅದರಲ್ಲಿಯೂ ಆಂಗ್ಲಮಾಧ್ಯಮದ ಶಿಕ್ಷಣ ಕಬ್ಬಿಣದ ಕಡಲೆ ಎಂಬುದು ಶ್ರೀಗಳವರಿಗೆ ಮನವರಿಕೆಯಾಗಿತ್ತು.

ಇಂತಹ ಹತ್ತು-ಹಲವು ಸಂದರ್ಭಗಳು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿವೆ. ನೆನಪು ಗರಿಬಿಚ್ಚಿದರೆ ಬರೆಯಲು ಸಮಯವೇ ಇಲ್ಲದಾಗುತ್ತದೆ. ಅಂತಹ ದಿವ್ಯ ತೇಜೋಮೂರ್ತಿಯ ಒಡನಾಟದಲ್ಲಿ ನಾವೂ ಹಾಸುಹೊಕ್ಕಾಗಿದ್ದೇವೆ ಎಂಬ ಆಹ್ಲಾದಕರ ಸಂಗತಿ ನಮಗೆ ಹರ್ಷ ತಂದಿದೆ. ಅಂತೆಯೇ ಇಂದಿನ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕೂಡ ನಮ್ಮ ಮೇಲೆ ಕರುಣೆ ಇಟ್ಟು ಆಶ್ರಯದಾತರಾಗಿ ಮಾರ್ಗದರ್ಶಕರಾಗಿದ್ದಾರೆ.

**||ಶಿವಂ ಭೂಯಾತ್||**

□

ಆಸೆಯೆಂಬ ಪಾಶದಲ್ಲಿ ಭವಬಂಧನನಾಗಿರ್ದೆನಯ್ಯಾ ;
ಸಕೃತು ನಿಮ್ಮ ನೆನೆಯಲು ಎನಗೆ ತೆಱಹಿಲ್ಲವಯ್ಯಾ !
ಕರುಣಾಕರ, ಅಭಯಕರ, ವರದ ನೀ ಕರುಣಿಸಯ್ಯಾ ;
ಸಂಸಾರಬಂಧನವನು ಮಾಣಿಸಿ ಎನಗೆ ಕೃಪೆ ಮಾಡಿ
ನಿಮ್ಮ ಶ್ರೀಪಾದಪದ್ಮದಲ್ಲಿ ಭ್ರಮರನಾಗಿರಿಸು
ಭಕ್ತಜನಮನೋವಲ್ಲಭ ಕೂಡಲಸಂಗಮದೇವಾ.

**ಬಸವಣ್ಣ**

# ಶ್ರೀಗಳವರ ಸನ್ನಿಧಿಯಲ್ಲಿ ಕಳೆದ ರಸಗಳಿಗೆಗಳು

**ವಿದ್ವಾನ್ ಶ್ರೀ ಸಿದ್ಧಮಲ್ಲಸ್ವಾಮಿಗಳು**
ಅಧ್ಯಕ್ಷರು, ಶ್ರೀ ನಿಲಕಂಠಸ್ವಾಮಿ ಮಠ ಹಾಗೂ ಅಗರದ ಕಲ್ಲುಮಠ
ಹರಿಶ್ಚಂದ್ರ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು

ಭಾರತ ದೇಶ ಅನೇಕ ಸಾಧುಸಂತರ, ಮುನಿಗಳ, ಜ್ಞಾನಿಗಳ ನೆಲೆವೀಡು. ಸಹಸ್ರಾರು ಮಹಾತ್ಮರು ಈ ಭೂಮಿಯಲ್ಲಿ ಅವತಾರವೆತ್ತಿ ಈ ದೇಶವನ್ನು ಪವಿತ್ರಗೊಳಿಸಿದ್ದಾರೆ. ಭಾರತ ತನುಜಾತೆಯಾದ ಈ ಕರ್ನಾಟಕ ಭೂಮಿಯಲ್ಲಿಯೂ ಸಹ ಅನೇಕ ಶರಣರೂ, ದಾಸರೂ, ಮಹಾತ್ಮರು ಕಾಲಕಾಲಕ್ಕೆ ಜನಿಸಿ ಒಂದು ಉನ್ನತ ಪರಂಪರೆಯ ಸಾಂಸ್ಕೃತಿಕ ಹಾದಿಯನ್ನು ನಮಗೆ ನಿರ್ಮಿಸಿ ಹೋಗಿದ್ದಾರೆ.

ಇಪ್ಪತ್ತನೆಯ ಶತಮಾನವು ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದಂತೆಯೇ ಒಂದು ಪರ್ವಕಾಲ. ಕರ್ನಾಟಕ ರಾಜ್ಯವು ಆರ್ಥಿಕವಾಗಿ, ವೈಜ್ಞಾನಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಉನ್ನತಿಯನ್ನು ಸಾಧಿಸಿದ ಕಾಲವದು. ಈ ಉನ್ನತಿಗೆ ಅನೇಕರ ಶ್ರಮಸಾಧನೆ ಕಾರಣವಾಗಿದೆ.

ಮುಖ್ಯವಾಗಿ ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ಕರ್ನಾಟಕದ ವೀರಶೈವ ಮಠಗಳ ಪಾತ್ರ

ಹಿರಿದು. ಅದರಲ್ಲಿಯೂ ದಕ್ಷಿಣ ಕರ್ನಾಟಕದ ಪ್ರಮುಖ ಮಠಗಳಲ್ಲಿ ಒಂದಾದ ಶ್ರೀ ಸುತ್ತೂರು ಜಗದ್ಗುರು ವೀರಸಿಂಹಾಸನ ಮಠದ ಪಾತ್ರ ಬಹು ಮುಖ್ಯವಾದುದಾಗಿದೆ. ಇದಕ್ಕೆ ಕಾರಣಪುರುಷರು ಶ್ರೀ ಪೀಠದ ಇಪ್ಪತ್ತಮೂರನೇ ಜಗದ್ಗುರುಗಳಾದ ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಪೂಜ್ಯರನ್ನು ಅತಿ ಹತ್ತಿರದಿಂದ ಅರಿಯುವ ಹಾಗೂ ಹಲವಾರು ವರ್ಷಗಳ ಕಾಲ ಅವರ ಸಾನ್ನಿಧ್ಯವನ್ನು ಅನುಭವಿಸುವ ಭಾಗ್ಯ ನನ್ನದಾಗಿತ್ತು. ಪೂಜ್ಯರ ಸಂಪರ್ಕ ನನಗೆ ಪ್ರಥಮಬಾರಿಗೆ ಆದದ್ದು ನಾನು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ. ಶಾಲೆಯ ವಾರ್ಷಿಕೋತ್ಸವದಲ್ಲಿ ನಾನು ಮತ್ತು ಹೊಸಮಠದ ಶ್ರೀ ಚಿದಾನಂದಸ್ವಾಮಿಗಳು "ಮಧ್ಯಮ ವ್ಯಾಯೋಗ" ಸಂಸ್ಕೃತ ನಾಟಕದಲ್ಲಿ ಪಾತ್ರ ವಹಿಸಿದ್ದೆವು. ಈ ನಾಟಕವನ್ನು ಮೆಚ್ಚಿದ ಪೂಜ್ಯರು ಆ ನಾಟಕವನ್ನು ಎರಡನೇ ಬಾರಿಗೆ ಪೇಜಾವರ ಶ್ರೀಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಿದರು. ಅದೇ ನಾನು ಪೂಜ್ಯ ಜಗದ್ಗುರುಗಳನ್ನು ಕಂಡ ಸಂದರ್ಭ.

ನಂತರದ ವರ್ಷಗಳಲ್ಲಿ ಪೂಜ್ಯರನ್ನು ಹತ್ತು ಹಲವು ವಿಧಗಳಲ್ಲಿ ಕಾಣುವ ಭಾಗ್ಯ ನನ್ನದಾಗಿತ್ತು. ನಮ್ಮ ಮಠವೂ ಆಗಿನ ಸುತ್ತೂರು ಮಠ (ಈಗಿನ ಜೆಎಸ್‌ಎಸ್ ಮಹಾವಿದ್ಯಾ ಪೀಠವಿರುವ ಸ್ಥಳ) ವು ಹತ್ತಿರ ಇದ್ದುದರಿಂದ ಪೂಜ್ಯರ ದರ್ಶನ ಪದೇ ಪದೇ ದೊರಕುತ್ತಿತ್ತು. ಪ್ರತಿ ದಿನ ಪೂಜ್ಯ ರಾಜೇಂದ್ರ ಶ್ರೀಗಳು ಸಂಜೆ ವಾಯುವಿಹಾರಕ್ಕೆ ತೆರಳುತ್ತಿದ್ದರು. ಅವರ ಜೊತೆಗೆ ವಾಯುವಿಹಾರಕ್ಕೆ ನಾನು, ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳು, ಶ್ರೀ ಕುಂದೂರು ಮಠದ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು, ಆಗಾಗ ಶ್ರೀಮಠಕ್ಕೆ ಬರುತ್ತಿದ್ದ ಪಡಗೂರು ಅಡವಿ ಮಠದ ಶ್ರೀ ಶಿವಕುಮಾರಸ್ವಾಮಿಗಳು ಸಹ ತೆರಳುತ್ತಿದ್ದೆವು. ಪ್ರತಿದಿನವೂ ಒಂದಲ್ಲ ಒಂದು ಧಾರ್ಮಿಕ, ವೈಚಾರಿಕವಾದ, ವಿಶಿಷ್ಟವಾದ ವಿಚಾರಗಳು ಚರ್ಚಿತವಾಗುತ್ತಿದ್ದವು.

ನಾನು ಆಗತಾನೆ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೆ. ಪೂಜ್ಯ ಜಗದ್ಗುರುಗಳು ನನಗೆ ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ಪಾಠ ಮಾಡುವಂತೆ ಸೂಚಿಸಿದರು. ಅಲ್ಲಿ ಕೆಲವು ವರ್ಷಗಳ ಕಾಲ ನಾನು ಆ ಕಾರ್ಯವನ್ನು ನಿರ್ವಹಿಸಿದೆ. ಮುಂದೆ ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ವೇದಾಂತ ವಿಭಾಗದಲ್ಲಿ ಸಹಪ್ರಾಧ್ಯಾಪಕರ ಹುದ್ದೆಗೆ ಸಂದರ್ಶನಕ್ಕಾಗಿ ಕರೆ ಬಂದಾಗ, ಪೂಜ್ಯರಿಗೆ ಈ ಬಗ್ಗೆ ನಾನು ಅರಿಕೆ ಮಾಡಿಕೊಂಡಾಗ, ಆ ಹುದ್ದೆಯು ನನಗೆ ದೊರೆಯುವಲ್ಲಿಯೂ ಸಹ ಪರಮಪೂಜ್ಯರ ನೆರವನ್ನು ನಾನು ಜೀವನಪರ್ಯಂತ ಸ್ಮರಿಸುತ್ತೇನೆ.

ನನಗೆ ಕೆಲಸವು ದೊರಕಿದ ಆದೇಶ ಪತ್ರವು ಬಂದ ಸಮಯದಲ್ಲಿ, ನಾನು ಪೂಜ್ಯ ರಾಜೇಂದ್ರ ಶ್ರೀಗಳವರ ಜೊತೆಯಲ್ಲಿ ಉಡುಪಿಯಲ್ಲಿ ವಿಶ್ವ ಹಿಂದೂ ಪರಿಷತ್‌ನವರು



ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ತೆರಳಿದ್ದೆ. ಅಲ್ಲದೆ ಮೈಸೂರು ಜಿಲ್ಲಾ ವೀರಶೈವ ಮಠಾಧಿಪತಿಗಳನ್ನು ಸಹ ಜೊತೆಯಲ್ಲಿ ಕರೆದುಕೊಂಡು ಮುಲ್ಕಿಯಲ್ಲಿ ನಮ್ಮೆಲ್ಲರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿ ಪೂಜ್ಯರು ಮಣಿಪಾಲ್‌ಗೆ ಹೊರಟರು. ಅಷ್ಟರಲ್ಲಿ ನನ್ನನ್ನು ಕೇಳಿಕೊಂಡು ಪೊಲೀಸಿನವರು ಹುಡುಕುತ್ತಿದ್ದರು. ವಿಷಯವಿಷ್ಟೆ: ನನಗೆ ಕೆಲಸಕ್ಕೆ ಆದೇಶ ಬಂದಿರುವುದರಿಂದ ತಕ್ಷಣ ಮೈಸೂರಿಗೆ ಹಿಂತಿರುಗುವಂತೆ ತಿಳಿಸಲು ಶ್ರೀ ಸುತ್ತೂರು ಮಠದ ಶಿವರಾಮು ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದ್ದರಿಂದ ಅವರು ಕಾರ್ಯಪ್ರವೃತ್ತರಾಗಿ ನನ್ನನ್ನು ಹುಡುಕಿ ವಿಷಯ ತಿಳಿಸಿದರು. ನನಗೂ ಗಾಬರಿಯಾಗಿತ್ತು. ವಿಷಯ ತಿಳಿದು ಸಮಾಧಾನದ ನಿಟ್ಟುಸಿರುಬಿಟ್ಟೆ. ಅಷ್ಟರಲ್ಲಿ ಪೂಜ್ಯ ಜಗದ್ಗುರುಗಳು ವಿಷಯ ತಿಳಿದು ಅರ್ಧ ದಾರಿಯಿಂದ ಪುನಃ ಹಿಂದಿರುಗಿ ನನ್ನನ್ನು ಮಣಿಪಾಲಕ್ಕೆ ಕರೆದುಕೊಂಡು ಹೋದರು. ಅಷ್ಟರಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಬಂದು ಪೂಜ್ಯರನ್ನು ಕಂಡು ರಾತ್ರಿಯಲ್ಲಿ ವಾಹನದಲ್ಲಿ ಕಳುಹಿಸುವುದು ಬೇಡ, ಬೆಳಗಿನ ಜಾವ ನಾನು ಪೊಲೀಸ್ ಜೀಪ್ ಕಳುಹಿಸಿ ಉಡುಪಿಯಲ್ಲಿ ಬಸ್‌ನಲ್ಲಿ ಕಳುಹಿಸುವ ವ್ಯವಸ್ಥೆ ಮಾಡುತ್ತೇನೆ, ಬೆಳಗಿನ ಜಾವ ಸಿದ್ಧವಾಗಿರಬೇಕೆಂದು ತಿಳಿಸಿ ಹೋದರು. ಅದರಂತೆ ನಾನು ಸಿದ್ಧವಾಗಿರಬೇಕೆಂದು ಪೂಜ್ಯರು ನನಗೆ ತಿಳಿಸಿದರು. ಎಂತಹ ಉನ್ನತ ಸ್ಥಾನದಲ್ಲಿದ್ದರೂ ಯಾರಿಗಾದರೂ ಸಹಾಯ ಮಾಡುತ್ತಿದ್ದ ಅವರ ಕರುಣಾದೃಷ್ಟಿ ಅವರ ಅನನ್ಯ ಗುಣವಾಗಿತ್ತು.

ಅಂತರಂಗ-ಬಹಿರಂಗ ಒಂದಾಗಿದ್ದ ಸ್ಫಟಿಕಸದೃಶವಾದ ವ್ಯಕ್ತಿತ್ವ ಪೂಜ್ಯ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರದ್ದಾಗಿತ್ತು. ಅವರ ಮಂದಹಾಸವೆಂಬ ಸೂಜಿಗಲ್ಲಿನಿಂದ ಆಕರ್ಷಿತರಾಗದವರೇ ಇಲ್ಲವೆನ್ನಬಹುದು. ಪೂಜ್ಯರ ವಾತ್ಸಲ್ಯ ವಲಯಕ್ಕೆ ಒಮ್ಮೆ ಬಂದವರು ಎಂದಿಗೂ ಅಲ್ಲಿಂದ ಹೊರಹೋಗಲು ಇಚ್ಛಿಸುತ್ತಿರಲಿಲ್ಲ.

ಪೂಜ್ಯರು ಹಾಸ್ಯಪ್ರಿಯರು. ಅವರ ಹಾಸ್ಯಪ್ರಿಯತೆಯ ಕೆಲವು ಅನುಭವಗಳು ನನಗೆ ಆಗಿವೆ. ಒಮ್ಮೆ ಮಳೆಗಾಲದ ಸಮಯದಲ್ಲಿ ಪೂಜ್ಯರು ನನ್ನನ್ನು ಹಾಗೂ ಕುಂದೂರು ಶ್ರೀಗಳನ್ನು ಕೇಳಿದರು: "ಈ ಚಳಿಯ ವಾತಾವರಣದಲ್ಲಿ ಏನನ್ನು ತಿನ್ನಲು ನಿಮಗೆ ಇಷ್ಟ?" ನಾನು ಸಹಜವಾಗಿ "ಕಾಫಿಯ ಜೊತೆಗೆ ವಡೆ ಇದ್ದರೆ ಚೆನ್ನಾಗಿರುತ್ತದೆ" ಎಂದೆ. ಇದಾದ ಕೆಲವು ತಿಂಗಳ ನಂತರ ಒಮ್ಮೆ ಪ್ರವಾಸದಲ್ಲಿ ಕೊಳ್ಳೇಗಾಲ ತಾಲ್ಲೂಕು ರಾಮಾಪುರಕ್ಕೆ ಶ್ರೀಗಳವರ ಜೊತೆ ಹೋಗಿದ್ದಾಗ ರಾಮಾಪುರದ ಮಠದಲ್ಲಿ ನಾನು ಎಂದೋ ಹೇಳಿದ್ದ ಮಾತನ್ನು ನೆನಪಿಟ್ಟುಕೊಂಡಿದ್ದ ಪೂಜ್ಯರು ನನಗೆ ತಿಳಿಯದಂತೆಯೇ ವಡೆಯನ್ನು ಮಾಡಲು ಹೇಳಿ ಪ್ರಸಾದದ ಸಮಯದಲ್ಲಿ ಬೇರಾವ ಪದಾರ್ಥಗಳನ್ನು ಬಡಿಸದೆ ಕೇವಲ ವಡೆಗಳನ್ನೇ ನನಗೆ ಬಡಿಸಲು ವ್ಯವಸ್ಥೆ ಮಾಡಿದ್ದರು!

ಇನ್ನೊಂದು ಸಂದರ್ಭದಲ್ಲಿ ಮೈಸೂರಿನಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಉದ್ಘಾಟನೆಯ ಸಮಯ. ಪೂಜ್ಯರು ಒಂದು ಕೊಠಡಿಯತ್ತ ಕೈತೋರಿ... "ಸ್ವಾಮಿಗಳೆ...! ರೂಮಿನಲ್ಲಿ ಏನಿದೆ ನೋಡಿಬನ್ನಿ" ಎಂದರು. ಪೂಜ್ಯರು ಹೇಳಿದರೆಂದು ಆತುರವಾಗಿ ಬಾಗಿಲು

ತೆರೆದು ಒಳಹೋಗಿ, ದಿಗಿಲುಪಟ್ಟೆ. ಏಕೆಂದರೆ ಅದು ಶವಗಳನ್ನು ಇಟ್ಟಿದ್ದ ಸ್ಥಳವಾಗಿತ್ತು.

ಮತ್ತೊಮ್ಮೆ ಮೈಸೂರಿನಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ಉದ್ಘಾಟನೆಯ ಸಂದರ್ಭದಲ್ಲಿ ಪೂಜ್ಯರು ನನಗೆ ತಮಾಷೆಯಾಗಿ "ಸ್ವಾಮಿಗಳೆ ...! ಆಸ್ಪತ್ರೆಯೇನೋ ಉದ್ಘಾಟನೆಯಾಯಿತು, ಆದರೆ ರೋಗಿಗಳೇ ಇಲ್ಲವೇ?" ಎಂದರು. ಅನಂತರ ಪೂಜ್ಯರು ವೈದ್ಯರಿಗೆ ಹೇಳಿ ನನ್ನ ದೇಹದ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿದರು. ಹೀಗಾಗಿ ಜೆಎಸ್‌ಎಸ್ ಆಸ್ಪತ್ರೆಯ ಪ್ರಥಮ ರೋಗಿ ನಾನಾದೆ!

ಗಂಭೀರ ಗುಣಸಾಂದ್ರತೆಯ ಮೊತ್ತವಾಗಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸದಾ ಶಿವಪರ ತುಡಿತ-ದುಡಿತಗಳಲ್ಲೇ ನಿಮಗ್ನರಾಗಿರುತ್ತಿದ್ದರು. ಅವರಿಗೆ ಬಿಡುವಿತ್ತು ಎನ್ನುವುದಕ್ಕೆ ಅರ್ಥವೇ ಇರಲಿಲ್ಲ. ನಮ್ಮಂತಹ ಕೆಲವರು ಆತ್ಮೀಯರು ಒತ್ತಟ್ಟಿಗೆ ದೊರೆತಾಗ ಮಾತ್ರ ಇಂತಹ ಹಾಸ್ಯಪ್ರವೃತ್ತಿಯನ್ನು ಪ್ರದರ್ಶಿಸುತ್ತಿದ್ದರು. ಅದರಲ್ಲೂ ಒಂದು ಬಗೆಯ ಗಾಂಭೀರ್ಯದ ಹೊದಿಕೆ ಇರುತ್ತಿತ್ತು. ಅವರು ಅಂತಹ ಹಾಸ್ಯ ಸನ್ನಿವೇಶಗಳನ್ನು ಸೃಷ್ಟಿಸಿ ಆಡುತ್ತಿದ್ದ ಕೆಲವೇ ಮಾತುಗಳು ನಮಗೆ ಮತ್ತಷ್ಟು ಸವಿಯನ್ನುಣಿಸುತ್ತಿದ್ದವು.

ಪೂಜ್ಯರು ನಡೆಸುತ್ತಿದ್ದ ಗುರುಕುಲಕ್ಕೆ ಕೆಲವು ಕಾಲ ನನ್ನನ್ನು ಸಾಧಕರನ್ನು ನೋಡಿಕೊಳ್ಳಲು ಸಹ ನೇಮಿಸಿದ್ದರು.

ಪೂಜ್ಯರು ವಿದೇಶದಿಂದ ಮರಳಿದಾಗ ಅವರಿಗೆ ಮೈಸೂರಿನ ಜನತೆಯು ಭವ್ಯ ಸ್ವಾಗತ ಸಮಾರಂಭವೊಂದನ್ನು ಏರ್ಪಡಿಸಿತ್ತು. ಬೆಳ್ಳಿ ಪಲ್ಲಕ್ಕಿಯಲ್ಲಿ ಶ್ರೀಗಳನ್ನು ಕರೆತರಲು ಪ್ರಯತ್ನಿಸಲಾಯಿತು. ಆದರೆ ಅದಕ್ಕೆ ಶ್ರೀಗಳು ಒಪ್ಪಿಗೆ ಕೊಡಲಿಲ್ಲ, ನಯವಾಗಿ ತಿರಸ್ಕರಿಸಿದರು. ಅನಾರೋಗ್ಯವಿದ್ದರೂ ಸಹ ಪೂಜ್ಯರು ಮೈಸೂರಿನ ಟೋಲ್‌ಗೇಟ್‌ನಿಂದ ಸಮಾರಂಭವು ಜರುಗಿದ ಜಗನ್ಮೋಹನ ಅರಮನೆಯವರೆಗೆ ಎಲ್ಲಾ ಸಮಾಜದ ಭಕ್ತರ ಗೌರವ ಸ್ವೀಕರಿಸುತ್ತಾ ನಡೆದೇ ಬಂದರು. ಆ ಸಮಾರಂಭದಲ್ಲಿ ಬಿನ್ನವತ್ತಳೆಯನ್ನು ಓದುವ ಸೌಭಾಗ್ಯ ನನ್ನದಾಗಿತ್ತು.

ಹೀಗೆ ಸುಮಾರು ಮೂರು-ನಾಲ್ಕು ದಶಕಗಳವರೆಗೆ ನನಗೆ ದೊರಕಿದ ಪರಮಪೂಜ್ಯರ ಸಂಸರ್ಗ ಬಹುಶಃ ನನ್ನ ಜನ್ಮಜನ್ಮಾಂತರದ ಪುಣ್ಯಫಲ ಎಂಬುದು ನನ್ನ ನಂಬುಗೆ.

(ಸಂದರ್ಶನ: ಜೀಮಾರಹಳ್ಳಿ ಗುರುಸಿದ್ದಪ್ಪ)

# ಅವರ ನಡೆ ಪರುಷ, ನುಡಿ ಪರುಷ, ನೋಟ ಪರುಷ...

**ಶ್ರೀ ಗುರುಶಾಂತ ಸ್ವಾಮಿಗಳು**
ಅಧ್ಯಕ್ಷರು, ಶ್ರೀ ತೋಂಟದಾರ್ಯ ವಿದ್ಯಾಸಂಸ್ಥೆ
ಕುದೇರು ಮಠ, ಬಸವೇಶ್ವರ ರಸ್ತೆ, ಮೈಸೂರು

ಪ್ರಸ್ತುತ ಐವತ್ತಮೂರು ವಯೋಮಾನದ ಮಧ್ಯವಯಸ್ಸಿನ ನಾವು, ಪರಮಪೂಜ್ಯ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಪ್ರಪ್ರಥಮವಾಗಿ ಕಣ್ಣಾರೆ ಕಂಡದ್ದು 1983ರಲ್ಲಿ ನಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ. ಅವರು ಲಿಂಗೈಕ್ಯರಾಗುವುದಕ್ಕೆ ಮೂರು ವರ್ಷಗಳ ಮುಂಚೆಗಿನ ಒಂದು ಸಂದರ್ಭದಲ್ಲಿ ನಾವೀಗ ನೆಲೆಯೂರಿರುವ ಕುದೇರು ಮಠದಲ್ಲಿ. ಆಗ ನಾವಿಲ್ಲಿ ಕಂತೆಭಿಕ್ಷೆ ಕಾಯಕದಲ್ಲಿ ತೊಡಗಿದ್ದವರಾಗಿದ್ದೆವು. ಅದಾಗಲೆ ಅವರು ತಮ್ಮ ಜೀವಿತಾವಧಿಯ ಅರವತ್ತು ನಾಲ್ಕು ಸಂವತ್ಸರಗಳನ್ನು ಸಮಾಜ ಶಿವನ ಸೇವೆಗೆ ಮೀಸಲಿರಿಸಿ ಸಾರ್ಥಕವಾಗಿ ಸಮರ್ಪಿಸಿ ಸವೆಯಿಸಿ ನಾಡಿನ ಲಕ್ಷೋಪಲಕ್ಷ ಜನರ ಮನದಾಳದಲ್ಲಿ ನೆಲೆಸಿದ್ದವರಾಗಿದ್ದರು. ನಮ್ಮಂತಹ ಅದೆಷ್ಟೋ ಕಿರಿಯ ಸಮಕಾಲೀನ ಭಾವೀ ಮಠಾಧಿಪತಿಗಳಾಗುವವರಿಗೆ ಬಹು ಆದರ್ಶವಾದವರೆನಿಸಿದ್ದರು. ತಮ್ಮ ಸಾತ್ವಿಕ ಗುಣವಿಶೇಷಗಳಿಂದ, ಶಿವಪರ ಕ್ರಿಯಾಶೀಲ ಸನ್ನಡೆಗಳಿಂದ, ಅಪಾರ ಸಾಧನೆ, ಸಿದ್ಧಿಗಳಿಂದ ಬಹು ಎತ್ತರ ಬಿತ್ತರದ ಗೌರಿಶಂಕರ ಶಿಖರ ಸದೃಶದ ವ್ಯಕ್ತಿತ್ವದವರಾಗಿದ್ದರು.

ನಾವಾದರೋ ನೆಲದಲ್ಲಿ ತೆವಳುವ ಬಸವನಹುಳುವಿನಂತಿದ್ದೆವು. ಹೇಳಿ ಕೇಳುವುದರ ಮೂಲಕವಷ್ಟೆ ಅವರ ಬಗ್ಗೆ ಇಷ್ಟೆಲ್ಲ ತಿಳಿದವರಾಗಿದ್ದ ನಾವು ಆ ಮಹಿಮಾಪುರುಷರ ಬಗ್ಗೆ ಮನಸ್ಸಿನಲ್ಲೆ ಭಕ್ತಿಗೌರವ ಸಮರ್ಪಿಸುತ್ತ ಸ್ಮರಿಸುವುದರಲ್ಲೆ ತೃಪ್ತರಾಗಿರುತ್ತಿದ್ದೆವು. ಈ ಇಪ್ಪತ್ತೈದು ವಯೋಮಾನದವರೆವಿಗೆ ನಾವೆಂದೂ ಅವರನ್ನು ಕಣ್ಣಾರೆ ಕಾಣುವಂತಾಗುತ್ತೇವೆ ಎಂದು ಅಂದುಕೊಂಡವರಾಗಿರಲಿಲ್ಲ. ಆದರೆ ಅವರನ್ನೊಮ್ಮೆಯಾದರೂ ನೋಡಬೇಕೆನ್ನುವ ಬಯಕೆ ಮಾತ್ರ ನಮ್ಮಲ್ಲಿದ್ದಿತ್ತು. ಅಂದಿನ ನಮ್ಮ ಪರಿಸ್ಥಿತಿ ಈ ಸಂಬಂಧದ ಈ ಬಯಕೆಯನ್ನು ಗುರುಕೃಪೆ ಕಾಲಧರ್ಮಕ್ಕೆ ಒಪ್ಪಿಸಿದ್ದಿತು.

"ಹರ ಮುನಿವ ಕಾಲಕ್ಕೆ ಗುರು ಕಾಯ್ವನ್... ಎಂತಹ ಮಾತು!!" ಗುರುಕೃಪೆ ಎನ್ನುವುದೊಂದಿದ್ದರೆ ನಮಗೆ ನಾವು ಕನಸು ಮನಸ್ಸುಗಳಲ್ಲೂ ಕಾಣಲಾಗದುದೆಲ್ಲವೂ ತಂತಾನೆ ಧಕ್ಕಿಬಿಡುತ್ತವೆ. ಅಸಾಧ್ಯವಾದುದೆಲ್ಲವೂ ಸಾಧ್ಯವಾಗಿಬಿಡುತ್ತದೆ.

ನಾವು ಬಯಸದ, ಬಯಸಿದ ಅದೆಷ್ಟೋ ಇಷ್ಟಾರ್ಥಗಳು ನಮಗೆ ಶ್ರೀ ಗುರುಕೃಪೆಯಿಂದಲೆ ನೆರವೇರಿರುವುದರಿಂದ ನಾವೀ ಮಾತುಗಳನ್ನು ಇಷ್ಟೊಂದು ಖಚಿತವಾಗಿ ಹೇಳುತ್ತಿದ್ದೇವೆ. ಅಂತೆಯೇ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ನಾವು ಕಾಣುವಂತಾದುದು ಶ್ರೀ ಗುರುಕೃಪೆಯಿಂದಲೇ ಎನ್ನುವುದನ್ನೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಾಗಾಗಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಶ್ರೀ ಗುರುಕೃಪೆಯಿಂದಲೇ ಹೇಗೆ ಕಾಣುವಂತಾದೆವು? ಕಂಡ ಮೇಲೆ ನಮಗಾಗಿರುವ ಅನುಭವಗಳೇನು? ಎಂಬುದನ್ನು ಒಟ್ಟೊಟ್ಟಿಗೆ ಸರಿ ಬೆರೆಸಿ ಬಿತ್ತರಿಸುತ್ತಿದ್ದೇವೆ.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಬೆಟ್ಟದಮಾದನಹಳ್ಳಿ ನಮ್ಮ ಜನ್ಮಸ್ಥಳ. ನಮ್ಮದು ಜಂಗಮ ಮನೆತನ. ಆಸ್ತಿ, ಅಂತಸ್ತು ಅನ್ನುವುದೇನೂ ಇಲ್ಲದಿದ್ದ ನಮ್ಮ ಮನೆತನದವರಿಗೆ ದೇವನೂರು ಶ್ರೀ ಗುರುಮಲ್ಲೇಶ್ವರರೇ ಸರ್ವಸ್ವವಾಗಿದ್ದರು. ನಮ್ಮ ಸುತ್ತಲ ಕೆಲವು ಗ್ರಾಮದ ಭಕ್ತರ ಬಿನ್ನಹ ಬಿಡುಗಡೆ ತೀರಿಸಿಕೊಡುತ್ತಿದ್ದ ನಮ್ಮ ತಂದೆಯವರಿಗೆ ಅವರು ಕೊಡುತ್ತಿದ್ದ ದಕ್ಷಿಣೆ, ಪಡಿಪದಾರ್ಥ ಇತ್ಯಾದಿಗಳಿಂದಲೇ ನಮ್ಮ ಜೀವನ ಸಾಗುತ್ತಿತ್ತು. ನಮ್ಮೂರಿನಲ್ಲಿದ್ದ ಪ್ರಾಥಮಿಕ ಶಾಲೆಯಲ್ಲಿ ಮೂರನೆಯ ತರಗತಿವರೆವಿಗೆ ಮಾತ್ರ ವ್ಯಾಸಂಗ ಮಾಡಿದ್ದ ನಾವು ಮೈಮೇಲೊಂದು ಕಾವಿತುಂಡು ಹೊದ್ದುಕೊಂಡು ನಮ್ಮ ತಂದೆಯವರೊಡನೆ ಬಿನ್ನಹ ಬಿಡುಗಡೆ ಕಾರ್ಯಕ್ರಮಗಳಿಗೆ ಹೋಗುವುದರಲ್ಲೇ ಹೆಚ್ಚು ಆನಂದಪಡುತ್ತಿದ್ದೆವು. ಅದನ್ನು ಬಿಟ್ಟರೆ ನಮ್ಮ ಮನೆಯವರು ಹೇಳುತ್ತಿದ್ದ ಕೆಲಸಕಾರ್ಯಗಳನ್ನು ಮಾಡಿಕೊಂಡು ಕಾಲ ಹಾಕುತ್ತಿದ್ದವರಾಗಿದ್ದೆವು. ಹೀಗಿದ್ದ ನಮ್ಮನ್ನು ನಮ್ಮ ಹದಿನೈದನೆಯ ವಯಸ್ಸಿನಲ್ಲಿ ನಮ್ಮ ತಂದೆಯವರು ನಮ್ಮದೇ ತಾಲ್ಲೂಕಿಗೆ ಸೇರಿದ ಮಾದಾಪಟ್ಟಣ ಗ್ರಾಮದಲ್ಲಿರುವ ವಿರಕ್ತ ಮಠಕ್ಕೆ ಸೇರಿಸಿದ್ದರು. ಇಲ್ಲಿ ಪೂಜಾಮರಿಯಾಗಿ ಗುರುಗಳ ಸೇವೆ, ಗದ್ದುಗೆ ಪೂಜೆ, ದನಕರ ಮೇಯಿಸುವುದು ಇತ್ಯಾದಿಯಾಗಿ ಮಠಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳನ್ನು ಮಾಡುತ್ತ



ನಾಲ್ಕೈದು ವರ್ಷ ಕಳೆದಿದ್ದೆವು.

1979 ರಲ್ಲಿ ನಮ್ಮ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಮೈಸೂರಿನ ಬಸವೇಶ್ವರ ರಸ್ತೆಯಲ್ಲಿರುವ ಕುದೇರು ಮಠಕ್ಕೆ ಬಂದು ನಾಲ್ಕು ವರ್ಷಗಳ ಕಾಲ ಕಂತೆಭಿಕ್ಷೆ ಕಾಯಕದಲ್ಲಿ ನಿರತರಾಗಿದ್ದೆವು. ಅಂದು ಇಲ್ಲಿನ ಮಠಾಧಿಪತಿಗಳಾಗಿದ್ದ ಪರಮಪೂಜ್ಯ ಶ್ರೀ ಗುರುಲಿಂಗ ಸ್ವಾಮಿಗಳವರು ಅವರ ಗುರುಗಳಾಗಿದ್ದ ಪೂಜ್ಯ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳವರ ಹೆಸರಲ್ಲಿ ತೆರೆದಿರುವ 'ಶ್ರೀ ತೋಂಟದಾರ್ಯ ವಿದ್ಯಾಸಂಸ್ಥೆ'ಯ ಹಳೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವನ್ನು 1983 ರಲ್ಲಿ ಹಮ್ಮಿಕೊಂಡು ಅದ್ದೂರಿಯಾಗಿ ಆಚರಿಸಿದ್ದರು. ಈ ಕಾರ್ಯಕ್ರಮಕ್ಕೆ ಸಿದ್ಧಗಂಗಾ ಶ್ರೀಕ್ಷೇತ್ರದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಕನಕಪುರದ ದೇಗುಲ ಮಠದ ಹಿರಿಯ ಶ್ರೀಗಳು, ಇವರುಗಳಲ್ಲದೆ ನಾಡಿನ ವಿವಿಧ ಮಠದ ಸ್ವಾಮಿಗಳವರು ಆಗಮಿಸಿದ್ದರು. ಈ ಸಭೆಯ ಸಾನ್ನಿಧ್ಯವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ವಹಿಸಿದ್ದರು. ಇದೇ ಈ ಸಂದರ್ಭದಲ್ಲೇ ನಾವು ಈ ಹಿಂದೆ ತಿಳಿಸಿರುವಂತೆ ಪ್ರಪ್ರಥಮ ಬಾರಿಗೆ ಅವರನ್ನು ಕಣ್ಣಾರೆ ಕಾಣುವಂತಾಗಿದ್ದುದು. ಇದುವರೆವಿಗೆ ಅವರ ಘನೌನ್ನತ್ಯ ವ್ಯಕ್ತಿತ್ವದಲ್ಲಿದ್ದ ಗುಣವಿಶೇಷತೆಗಳನ್ನು ಮಾತ್ರ ಕೇಳಿ ಮಾರುಹೋಗಿದ್ದ ನಾವು ಆ ಸಾತ್ವಿಕ ಗುಣವಿಶೇಷತೆಯ ಮೊತ್ತವನ್ನೆಲ್ಲ ತನ್ನೊಳಗಿರಿಸಿಕೊಂಡು ಪರಿಪೋಷಿಸಿ ರಕ್ಷಿಸಿದ್ದ ಅವರ ಹೊರ ದೇಹದ ಮೈಮಾಟ ಅವರ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರಗುಂಟುಮಾಡುವಂತಿದ್ದುದನ್ನು ಕಂಡು ತುಂಬಾ ಬೆರಗಾಗಿದ್ದೆವು. ಅಂದು "ಸುತ್ತೂರು ಮೂರ್ತಿ, ಬಹು ಸುಂದರವಾದ ಮೂರ್ತಿ" ಎಂದು ನಮ್ಮ ಕಡೆಯ ಜನರು ಹೇಳುತ್ತಿದ್ದುದನ್ನು ನಮ್ಮ ಕಣ್ಮನಗಳು ಸ್ವತಃ ಕಂಡುಂಡು 'ಹೌದು-ಹೌದು' ಎಂದಿದ್ದವು. ಬಹು ತೇಜಃಪುಂಜವಾದ ಅವರ ಹೊರ ರೂಪ, ಸೌಂದರ್ಯ ನೋಟಕರಿಗೆ ಅವರ ಅಂತರಂಗದ ಸತ್ವ, ಶಕ್ತಿ, ಸಾಮರ್ಥ್ಯ ಎಂತಹ ಮಹತ್ವದ್ದಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಆಹ್ವಾನ ನೀಡುವಂತಿತ್ತು.

ಹೀಗೆ ನಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ನಾವು ಪ್ರಪ್ರಥಮ ಬಾರಿಗೆ ಅವರನ್ನು ಬರೇ ನೋಡುವುದರಿಂದಷ್ಟರಿಂದಲೇ ತೃಪ್ತಿಪಟ್ಟುಕೊಂಡವರಾಗಿದ್ದೆವು.

**ಮತ್ತೆ ಮೂರು ಸಲ ನೋಡಿದ್ದು**

ಅದೇ 1983 ರಲ್ಲಿ ನಮ್ಮ ನಿಕಟಪೂರ್ವ ಗುರುವರ್ಯರಾಗಿದ್ದ ಪರಮಪೂಜ್ಯ ಶ್ರೀ ಗುರುಲಿಂಗಸ್ವಾಮಿಗಳವರು ನಮ್ಮನ್ನು ಯಳಂದೂರು ತಾಲ್ಲೂಕಿನ ಕೆಸ್ತೂರು ಮಠದ ಜವಾಬ್ದಾರಿಯನ್ನು ನಿಭಾಯಿಸುವ ಸ್ವಾಮಿಯಾಗಿರುವಂತೆ ನಮ್ಮನ್ನು ಅರಸಿ ಹರಸಿ ಕಳುಹಿಸಿಕೊಟ್ಟಿದ್ದರು. ಇಲ್ಲಿನ ಪಟ್ಟದ ಮಠಾಧ್ಯಕ್ಷರಾಗಿದ್ದ ಶ್ರೀ ಸಿದ್ಧರಾಮಸ್ವಾಮಿಗಳವರಿಂದ ನಮಗೆ ಆಶ್ರಮೋಪದೇಶವಾಗಿ ನಾವಿಲ್ಲಿ ಏಳೆಂಟು ವರ್ಷಗಳ ಕಾಲ ಇದ್ದೆವು. ಇಲ್ಲಿದ್ದಾಗಲೇ

1986 ನೆಯ ಇಸವಿಯೊಂದರಲ್ಲೇ ಅವರು ಲಿಂಗೈಕ್ಯರಾಗುವ ಮುಂಚೆ ಮೂರು ತಿಂಗಳ ಹಿಂದಿನ ಅವಧಿಯಲ್ಲಿ ನಾವು ಮತ್ತೆ ಮತ್ತೆ ಮೂರು ಬಾರಿ ಬೇರೆ ಬೇರೆ ಊರುಗಳಲ್ಲಿ ಅವರನ್ನು ಬಹು ಹತ್ತಿರದಿಂದ ಗಂಟೆಗಟ್ಟಲೆ ಇದ್ದು ನೋಡುವ ಸುಯೋಗ ಒದಗಿತ್ತು.

ಇದೇ ಯಳಂದೂರು ತಾಲ್ಲೂಕು ಗೌಡಹಳ್ಳಿಯ ಸಿದ್ಧಮಲ್ಲೇದೇವರು ಎಂಬ ಸದ್ಭಕ್ತರು ಲಿಂಗೈಕ್ಯರಾಗಿದ್ದ ಪ್ರಯುಕ್ತ ಅವರ ಮನೆಯಲ್ಲಿ 23.1.1986 ರಲ್ಲಿ ಶಿವಗಣಾರಾಧನಾ ಮಹೋತ್ಸವವನ್ನು ಏರ್ಪಡಿಸಲಾಗಿತ್ತು. ಈ ನಿಮಿತ್ತ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಪಾದಪೂಜೆ ಕಾರ್ಯಕ್ರಮ ನಿಗದಿಯಾಗಿತ್ತು. ಇಲ್ಲಿನ ಪಾದಪೂಜಾ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಯಿಸಿಕೊಡುವ ಹಿನ್ನೆಲೆಯಲ್ಲಿ ಈ ಮನೆಯ ಸದ್ಭಕ್ತರು ನಮ್ಮ ಮಾರ್ಗದರ್ಶನ, ಸಹಕಾರಗಳು ಅಗತ್ಯವೆಂದು ಬಿನ್ನವಿಸಿಕೊಂಡಿದ್ದರಿಂದ ನಾವು ಖುದ್ದು ಹಾಜರಿದ್ದು ನಮ್ಮ ಶಿಷ್ಯಸಮೂಹದ ಕೆಲವರ ಸಹಾಯದಿಂದ ಸುಂದರವಾಗಿ ಪೂಜಾಮಂಟಪ ಕಟ್ಟಿಸಿ ಸ್ವತಃ ನಾವೇ ಶ್ರೀಗಳವರ ಪಾದಪೂಜೆಯನ್ನು ಸಾಂಗವಾಗಿ ನೆರವೇರಿಸಿಕೊಟ್ಟಿದ್ದೆವು. ಅವರ ಪಾದಪೂಜೆಯೆಂದರೆ ಗಂಟೆಗಟ್ಟಲೆ ನಡೆಯುತ್ತಿದ್ದಿತು. ಇಲ್ಲಿ ಅವರ ಪಾದಪೂಜೆಯಲ್ಲಿ ಭಾಗಿಯಾಗಿದ್ದ ನಾವು ಬಹು ಆನಂದಪಟ್ಟಿದ್ದೆವು.

ಟಿ.ನರಸೀಪುರ ತಾಲ್ಲೂಕು ಬಿಲಿಗೆರೆಹುಂಡಿ ಗ್ರಾಮದ ಮಹದೇವಪ್ಪ ಎಂಬುವವರು ನಾವು ಕಂಡ ಮಹಾನ್ ಗುರುಭಕ್ತರಲ್ಲೊಬ್ಬರು. ಪರಮಪೂಜ್ಯ ಜಗದ್ಗುರು ಮಹಾಸ್ವಾಮಿಗಳವರ ಪಾದಪೂಜಾ ಕಾರ್ಯಕ್ರಮವನ್ನು 21.3.1986 ರಲ್ಲಿ ತಮ್ಮ ಸ್ವಗೃಹದಲ್ಲಿ ಹಮ್ಮಿಕೊಂಡಿದ್ದ ಅವರು ಅದನ್ನು ಅದ್ದೂರಿಯಾಗಿ ನೆರವೇರಿಸಬೇಕೆಂದು ನಿರ್ಧರಿಸಿ, ಅದರ ಸಂಪೂರ್ಣ ಹೊಣೆಗಾರಿಕೆಯನ್ನು ನಮ್ಮ ಮೇಲೆ ಹಾಕಿ ಸೂಕ್ತ ಮಾರ್ಗದರ್ಶನ ನೀಡುವಂತೆ ನಮ್ಮಲ್ಲಿ ವಿನಂತಿಸಿ ಬಿನ್ನಹ ಹಾಕಿದ್ದರು. ದೇವನೂರು ಮಠದ ಸಂಪರ್ಕದಲ್ಲಿರುವವರೆಲ್ಲ ಗುರು ಪಾದಪೂಜೆಯೇ ಮೊದಲ್ಗೊಂಡು ವೀರಶೈವ ಸಂಪ್ರದಾಯದ ಎಲ್ಲ ಬಗೆಯ ಪೂಜಾ ಕಾರ್ಯಕ್ರಮಗಳನ್ನು ಅದ್ಭುತವಾಗಿ ನೆರವೇರಿಸುತ್ತಾರೆ ಎನ್ನುವುದು ಜನಜನಿತ ಸಂಗತಿಯಾಗಿದೆ. ವಿಶೇಷವಾಗಿ ಪಾದಪೂಜೆಗೆ ಬೇಕಾದ ವ್ಯವಸ್ಥೆಯನ್ನು ಅಣಿಗೊಳಿಸುವುದರಲ್ಲಿ, ಪಾದಪೂಜೆಗೆ ಕೂರುವ ಮಂಟಪದ ಅಲಂಕಾರವನ್ನು ಮಾಡುವುದರಲ್ಲಿ ಈ ಮಠದ ಭಕ್ತಸಂತತಿಯವರು ಎತ್ತಿದ ಕೈ. ಆ ಹೊತ್ತಂತೂ ಆ ಸದ್ಭಕ್ತರು ಬರೇ ಕೆಂದಾವರೆ ಹೂವಿನಲ್ಲೇ (ಪ್ರಧಾನವಾಗಿ) ಮಂಟಪವನ್ನು ಶೃಂಗರಿಸಬೇಕೆಂದು ಅವನ್ನು ಯಥೇಚ್ಛವಾಗಿ ತಂದವರಾಗಿದ್ದು ಇನ್ನಿತರ ಅಗತ್ಯ ಸಹಾಯಕ ಪರಿಕರಗಳನ್ನೂ ಒದಗಿಸಿಕೊಟ್ಟಿದ್ದರು. ಅವರೆಲ್ಲರ ನಿರೀಕ್ಷೆಯಂತೆ ಪಾದಪಾಜಾ ಕಾರ್ಯಕ್ರಮ ಬಹು ಅದ್ದೂರಿಯಾಗಿ ನೆರವೇರಿತ್ತು. ಪೂಜ್ಯಪಾದರು ಬಹು ಸಂಪ್ರೀತರಾಗಿದ್ದರು. ಪಾದಪೂಜೆ ಮಾಡಿದ್ದ ನಾವೂ ಸಂತೃಪ್ತರಾಗಿದ್ದೆವು. ಆದರೆ ಪಾದಪೂಜಾ ವ್ಯವಸ್ಥೆಯ ಬಗೆಗಿನ ವಿವರಗಳನ್ನೆಲ್ಲ ನಮ್ಮಿಂದ ಕೇಳಿ ತಿಳಿದು ಶ್ರೀಗಳವರಿಗೆ ನಿವೇದಿಸಿದ್ದರು. ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳವರು, ಶ್ರೀಗಳವರು ಇನ್ನೂ ಧ್ಯಾನಸ್ಥ ಸ್ಥಿತಿಯಲ್ಲೇ ಇದ್ದವರಂತೆ



ಕಂಡುಬಂದಿದ್ದರು. ಈ ಕಾರ್ಯಕ್ರಮಕ್ಕೆ ಇಂದಿನ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರೂ ಆಗಮಿಸಿದ್ದರು. ಹಾಗಾಗಿ ಅವರ ಪರಿಚಯವೂ ನಮಗಾಗಿದ್ದಿತು.

ಹೀಗೆ ಈ ಎರಡೂ ಊರುಗಳಲ್ಲಿ ಅದ್ದೂರಿಯಾಗಿ ಭಕ್ತಿಭಾವದಿಂದ ಅವರ ಪಾದಪೂಜೆಯನ್ನು ನೆರವೇರಿಸಿಕೊಟ್ಟಿದ್ದ ನಮಗೆ ಮತ್ತೊಮ್ಮೆ ಕೊನೆಯ ಬಾರಿಗೆ ಎಂಬಂತೆ ಅವರ ದಿವ್ಯ ಪಾದಪೂಜೆಯನ್ನು ಈ ಹಿಂದೆ ಸ್ವತಃ ನಮ್ಮ ನೇತೃತ್ವದಲ್ಲಿ ನೆರವೇರಿಸಿದ್ದಂತೆ ನೆರವೇರಿಸುವ ಸೌಭಾಗ್ಯ 8.9.1986 ರಲ್ಲಿ ಒದಗಿಬಂದಿತ್ತು.

ಇದೇ ಯಳಂದೂರು ತಾಲ್ಲೂಕು ಕಿನಕಹಳ್ಳಿ ಗ್ರಾಮದ ಮಹಾಂತದೇವರು ಎಂಬ ನಮ್ಮ ಸದ್ಭಕ್ತರ ಮಹಾಮನೆಯಲ್ಲಿ ಏರ್ಪಡಿಸಲಾಗಿದ್ದ ಪೂಜ್ಯರ ಪಾದಪೂಜಾ ಕಾರ್ಯಕ್ರಮಕ್ಕೂ ಈ ಮಹನೀಯರು ಈ ಹಿಂದಿನವರಂತೆಯೇ 'ತಪ್ಪದೆ ಬಂದು, ತಾವೇ ಪಾದಪೂಜೆ ಮಾಡಬೇಕು' ಎಂದು ಬಹು ವಿನೀತ ಭಾವದಿಂದ ಬಿನ್ನಹ ಹಾಕಿ ನಮ್ಮನ್ನು ಆಹ್ವಾನಿಸಿದ್ದರು. ಈ ಮೂರನೆಯ ಬಾರಿಯ ಹಾಗೂ ಕಟ್ಟಕಡೆ ಬಾರಿಯ ಪಾದಪೂಜೆ ನಮಗೆ ವೈಯಕ್ತಿಕವಾಗಿ ಮುದ ನೀಡಿತ್ತು; ಧನ್ಯತಾಭಾವ ಮೂಡಿಸಿತ್ತು; ಫಲ ನೀಡಿತ್ತು. ಕಾರಣ, ಪಾದಪೂಜೆ ಮುಗಿದು ಪ್ರಸಾದ ಸ್ವೀಕರಿಸಿ ಲೋಕಾಭಿರಾಮವಾಗಿ ಮಾತನಾಡಲು ಪ್ರಾರಂಭಿಸಿದ್ದ ಜಗದ್ಗುರು ಮಹಾಸ್ವಾಮಿಗಳು ನಮ್ಮನ್ನು ಹತ್ತಿರಕ್ಕೆ ಕರೆದು, ಮೈ ನೇವರಿಸುತ್ತ ನಮ್ಮ ಪೂರ್ವಾಪರಗಳನ್ನೆಲ್ಲ ವಿಚಾರಿಸಿ "ಹೇಗಿದೆ ನಿಮ್ಮ ಮಠದ ಪರಿಸ್ಥಿತಿ? ಭಕ್ತರ ಸಹಕಾರ, ಸಂಬಂಧಗಳು ಚೆನ್ನಾಗಿವೆಯಾ? ನಿಮ್ಮ ಮಠಕ್ಕಿರುವ ಆದಾಯ ಮೂಲಗಳೇನು?" ಎಂಬುದೆಲ್ಲವನ್ನು ಕೇಳಿದ್ದರು. ಕೇಳಿದ್ದಕ್ಕೆಲ್ಲ ಉತ್ತರಿಸಿದ್ದ ನಮ್ಮನ್ನು ಕುರಿತು ಮತ್ತೆ ಮಾತು ಮುಂದುವರೆಯಿಸಿ "ಗುರುಮಲ್ಲೇಶ್ವರರು ಮಹಾತ್ಮರು, ಅವರ ಕೃಪೆ ಸಾಮಾನ್ಯವಾದುದಲ್ಲ. ಅವರು ತಮ್ಮ ನಿಷ್ಠಾವಂತ ಭಕ್ತರ ಇಷ್ಟಾರ್ಥವನ್ನೆಲ್ಲ ಈಡೇರಿಸುವವರೇ ಆಗಿದ್ದಾರೆ, ಹೌದೋ ಅಲ್ಲವೋ" ಎಂದು ನಮ್ಮನ್ನು ಪ್ರಶ್ನಿಸಿ ಉತ್ತರ ನಿರೀಕ್ಷಿಸಿದ್ದರು.

ಈ ಹಿಂದೆ, ಬಹು ಹಿಂದಿನಿಂದಲೂ ನಾವು ಇವರನ್ನು ನೇರವಾಗಿ ಕಾಣಬೇಕು, ಮಾತನಾಡಿಸುವಂತಾಗಬೇಕು, ಆಶೀರ್ವಾದ ಪಡೆದವರಾಗಬೇಕು ಎಂದು ಬಹುವಾಗಿ ಹಂಬಲಿಸಿ ಅದನ್ನು ಶ್ರೀ ಗುರುಕೃಪೆ, ಕಾಲಧರ್ಮಕ್ಕೆ ಸಮರ್ಪಿಸಿ ನಿಶ್ಚಿಂತರಾಗಿದ್ದುದು ನಮ್ಮ ಸ್ಮೃತಿಪಟಲದಲ್ಲಿ ಮೂಡಿಬಂದು ಥಟ್ಟನೆ "ಹೌದು ಹೌದು ಬುದ್ಧಿ, ಗುರುಮಲ್ಲೇಶ ತನ್ನ ನಂಬಿದವರನೆಂದೂ ಕೈಬಿಡುವುದಿಲ್ಲ" ಎಂದು ಉದ್ಘರಿಸಿದ್ದೆವು.

ಎತ್ತರದ ಅವರು ನಮ್ಮನ್ನ ಹಾಗೆ ಹತ್ತಿರಕ್ಕೆ ಕರೆದು ಆತ್ಮೀಯವಾಗಿ ಹಾಗೆ ಮಾತನಾಡಿಸಿದ್ದನ್ನು, ಹರಸಿ ಆಶೀರ್ವದಿಸಿದ್ದನ್ನು, ಅವರು ಲಿಂಗೈಕ್ಯರಾಗುವ ಮುಂಚೆ (6.12.1986). ಅದೇ ಒಂದು ವರ್ಷದಲ್ಲೆ ನಾನವರ ದಿವ್ಯಪಾದ ಮುಟ್ಟಿ ಮೂರು ಸಲ

ಪಾದಪೂಜಾ ಕಾರ್ಯಕ್ರಮ ನೆರವೇರಿಸಿದ ಮಹಾಭಾಗ್ಯ ನಮಗೊದಗಿ ಬಂದದ್ದನ್ನು ನಾವೆಂದೆಂದಿಗೂ ಮರೆಯಲಾಗದಂತಾಗಿದ್ದೇವೆ.

1991 ರಲ್ಲಿ ನಾವು ಮತ್ತೆ ಮೈಸೂರಿಗೆ ಬಂದೆವು. ಇಂದು ನಾವೇನಾಗಿದ್ದೇವೆ ಎನ್ನುವುದು ನಮ್ಮನ್ನು ಬಲ್ಲವರಿಗೆಲ್ಲ ಚೆನ್ನಾಗಿ ಗೊತ್ತಿರುವುದರಿಂದ ಆ ಬಗ್ಗೆ ವಿವರಿಸಬೇಕಿಲ್ಲ ಎನಿಸುತ್ತಿದೆ.

ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಲಿಂಗೈಕ್ಯರಾಗುವ ಮುಂಚೆ ಅವರ ವರ್ಧಂತಿ ಕಾರ್ಯಕ್ರಮವನ್ನು ಭಕ್ತ ಸಮುದಾಯದವರು ಅದ್ದೂರಿಯಾಗಿ ನಡೆಸುತ್ತಿದ್ದುದನ್ನು ನೋಡರಿಯದಿದ್ದ ನಾವು ಇದೀಗ ಇಲ್ಲಿಗೆ ಬಂದ ಮೇಲೆ ಅವರ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಿ ಅವರ ಘನೌನ್ನತ್ಯ ವ್ಯಕ್ತಿತ್ವದಲ್ಲಿದ್ದ ಆಳ ಅಂತರಾಳವನ್ನೆಲ್ಲ ಅರಿತವರಾಗಿದ್ದೇವೆ. ದೊಡ್ಡವರ ದೇಹವದು ಅಳಿದರೇನಂತೆ ಅವರಾತ್ಮಗಳು ನುಡಿದಂತೆ ನಡೆಯುವುದೇ ನಮ್ಮ ಧರ್ಮತಾನೆ. ನಾವು "ಶ್ರೀಗುರು ಕೃಪೆ" ಎನ್ನುವುದರಲ್ಲಿ ಅವರೂ ಇದ್ದಾರೆ ಎನ್ನುವುದನ್ನು ನಿಮ್ಮೆಲ್ಲರ ಅಂತರಾತ್ಮಕ್ಕೆ ನಿವೇದಿಸಿ, ನಡೆ ಪರುಷ, ನುಡಿ ಪರುಷ, ನೋಟ ಪರುಷವಾಗಿದ್ದ ಅವರನ್ನು ನಮ್ಮ ಉಸಿರಿರುವವರೆಗೂ ಸ್ಮರಿಸುತ್ತೇವೆ ಎಂದೆನ್ನುತ್ತ ಸದ್ಯಕ್ಕೆ ವಿರಮಿಸುತ್ತಿದ್ದೇವೆ.

(ಸಂದರ್ಶನ: ಜೀಮಾರಹಳ್ಳಿ ಗುರುಸಿದ್ದಪ್ಪ)

□

ಅರ್ಥರೇಖೆಯಿದ್ದಲ್ಲಿ ಫಲವೇನು ; ಆಯುಷ್ಯರೇಖೆ ಇಲ್ಲದನ್ನಕ್ಕ ?
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು ?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು ?
ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು ?
ನಮ್ಮ ಕೂಡಲಸಂಗನ ಶರಣರನಱಿಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು, ಶಿವಪಥವನಱಿಯದನ್ನಕ್ಕ !

**ಬಸವಣ್ಣ**

# ಕಾಯಕಯೋಗಿ ಲಿಂ. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು

**ಪಟ್ಟದ ಶ್ರೀ ಸಿದ್ದಮಲ್ಲಸ್ವಾಮಿಗಳು**
ವೀರಸಿಂಹಾಸನ ಶಿಲಾ ಮಠ, ಸೋಮಹಳ್ಳಿ
ಗುಂಡ್ಲುಪೇಟೆ ತಾಲ್ಲೂಕು

ಉರಿಯೊಳಗಣ ಕರ್ಪೂರಕ್ಕೆ ಕರಿಯುಂಟೇ ಅಯ್ಯಾ?
ಬಯಲ ಮರೀಚಿ ಜಲಕ್ಕೆ ಕೆಸರುಂಟೆ?
ವಾಯುವಿನಪ್ಪಿದ ಪರಿಮಳಕೆ ನಿರ್ಮಾಲ್ಯವುಂಟೆ?
ಕೂಡಲ ಸಂಗಮದೇವ
ನಿಮ್ಮ ಚರಣ ಕಮಲದೊಳಗೆನ್ನ ನಿಂಬಿಟ್ಟುಕೊಳ್ಳಯ್ಯ.

**ಬಸವಣ್ಣನವರು**

ಕರ್ಪೂರ ಉರಿದರೆ ಒಂದಿಷ್ಟು ಕಲೆಯು ಉಳಿಯದು ಏಕೆ? ಕರ್ಪೂರ ಪರಿಶುದ್ಧವಾದ್ದರಿಂದ ಹಾಗೆಯೇ ಮನಸ್ಸು ಪರಿಶುದ್ಧವಾಗಿರಬೇಕು. "ವಿರಕ್ತಾನಾಂ ಪ್ರಬುದ್ಧಾನಾಂ ಪ್ರಸೀದತಿ ಮಹೇಶ್ವರ." (ಶ್ರೀ ಸಿದ್ಧಾಂತ ಶಿಖಾಮಣಿ) ಎಂಬ ಮಾತಿನಂತೆ ವೈರಾಗ್ಯದ ತೀವ್ರತೆಯಿಂದ ಕೂಡಿದ ಜ್ಞಾನಿಗೆ ಶಿವಪ್ರಸಾದವು ದೊರೆತೇ ತೀರುತ್ತದೆ. ಅವನಲ್ಲಿ ಭಕ್ತಿ ಸಹಜವಾಗಿ ಮೂಡುತ್ತದೆ. ಬಯಲ ಮರೀಚಿಕೆ (ಬಿಸಿಲ್ಗುದುರೆ) ಎಂದರೆ ಬಯಲ ಮರೀಚಿಕೆಯು ನೀರಿನಂತೆ ಕಂಡರೂ ನೀರಲ್ಲ, ಅಂದರೆ ಅದು ಕಂಡ ಕಡೆ ಕೆಸರಿನ ಕುರುಹು ಇರುವುದಿಲ್ಲ. ಬಯಲಾದ ಅಂದರೆ ಕರ್ಮದ ಸೋಂಕನ್ನು ಕಳೆದುಕೊಂಡು, ಬಿಡುಗಡೆಹೊಂದಿದ

ಆತ್ಮವು ರಾಗ, ದ್ವೇಷಾದಿ ಮೋಕ್ಷಗಳೆಂಬ ಕೆಸರಿಲ್ಲದ ಸ್ವರೂಪವನ್ನು ಹೊಂದುತ್ತದೆ. ಅದು ಅಧ್ಯಾತ್ಮ ಬೆಂಕಿಯಲ್ಲಿ ಉರಿದು ಯಾವುದೇ ಕುರುಹುವನ್ನು ಉಳಿಸದೇ ಶಿವನಲ್ಲಿ ಬೆರೆತು ಬಯಲಾಗುತ್ತದೆ. ಹಾಗೆಯೇ ಗಾಳಿಯಲ್ಲಿ ಹರಡಿ ವಿಸ್ತಾರಗೊಂಡಂತೆ ಸುಗಂಧವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಗಾಳಿಯಲ್ಲಿ ಗಾಳಿಯಾಗುತ್ತದೆ. ಅದರ ಕುರುಹು ಏನೂ ಉಳಿಯದು. ಭವವಿಲ್ಲದ ಮುಕ್ತಿಯನ್ನು ಕೊಡು ಕೂಡಲಸಂಗಮದೇವಾ ನಿನ್ನ ಚರಣಕಮಲದಲ್ಲಿ ನನಗೆ ಆಶ್ರಯ ಕೊಡು ಎಂದು ಬೇಡಿಕೊಳ್ಳುತ್ತಾರೆ ಬಸವಣ್ಣನವರು.

ಸುತ್ತೂರು ವೀರಸಿಂಹಾಸನ ಮಠವು ಸಾವಿರ ವರ್ಷಕ್ಕಿಂತಲೂ ಹಿಂದಿನ ಚರಿತ್ರೆಯನ್ನುಳ್ಳ ಉಜ್ವಲ ಪರಂಪರೆಯನ್ನು ಹೊಂದಿರುವ ಪ್ರಾಚೀನ ಮಠವಾಗಿದೆ. ಗಂಗರು, ಚೋಳರು, ಹೊಯ್ಸಳರ ಕಾಲಕ್ಕಾಗಲೇ ಈ ಮಠವು ಪ್ರಜ್ವಲಮಾನಕ್ಕೆ ಬಂದಿತ್ತು. ಆದಿಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಸ್ಥಾಪಿಸಿದ ಈ ಮಠ ಇಂದು ಕರ್ನಾಟಕಕ್ಕೆ ಸೀಮಿತವಾಗಿರದೆ ಭಾರತದ ಆಚೆ ಹೊರದೇಶಗಳಲ್ಲಿ ತನ್ನ ಕೀರ್ತಿಯನ್ನು ಹರಡಿದೆ.

ಧಾರ್ಮಿಕ ನೆಲೆಗಟ್ಟಿನ ಮೇಲೆ ಸ್ಥಾಪಿತವಾಗಿದ್ದರೂ, ಆಧುನಿಕ ಮಾನವನಿಗೆ ಬೇಕಾಗಿರುವ ವಿಜ್ಞಾನ, ತಾಂತ್ರಿಕ ಕಾಲೇಜುಗಳು, ವೈದ್ಯಕೀಯ ದಂತ ಕಾಲೇಜುಗಳನ್ನು ಸ್ಥಾಪಿಸಿ, ಒಂದು ಬೃಹದಾಕಾರದ ಶೈಕ್ಷಣಿಕ ಸಂಸ್ಥೆಯಾಗಿ, ಸಮಾಜೋಧಾರ್ಮಿಕ ಕಾರ್ಯವನ್ನು ಮಾಡುತ್ತಿರುವುದೂ ಅಲ್ಲದೆ, ವೀರಶೈವ ಮಠಗಳಿಗೆ ಮಾರ್ಗದರ್ಶನ ನೀಡುವ ಒಂದು ಬೃಹತ್ ಸಂಸ್ಥೆಯಾಗಿ ಬೆಳೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ.

ಅರಮನೆ ಗುರುಮನೆ ಸಂಬಂಧ ಈ ಮಠಕ್ಕೆ ಸಾವಿರ ವರ್ಷಗಳಿಂದಲೂ ಇದೆ. ಕ್ರಿ.ಶ. 1032ರಲ್ಲಿ ಗಂಗರ ದೊರೆ ರಾಜೇಂದ್ರ ಚೋಳನ ಪಟ್ಟಾಭಿಷೇಕ ಸಂದರ್ಭದಲ್ಲಿ ಜಗದ್ಗುರು ಶ್ರೀ ಈಶಾನ ವಡೆಯರು ಗುರೂಪದೇಶ ಮಾಡಿದ ಸನ್ನಿವೇಶಗಳು 28 (164)ರ ಶಾಸನದಲ್ಲಿ ದಾಖಲೆಯಾಗಿರುವುದರಿಂದ, ಚೋಳ ಚಕ್ರವರ್ತಿಗಳಿಗೆ ರಾಜಗುರುಗಳಾಗಿದ್ದರು, ಸುತ್ತೂರು ಮಠದ ಪೀಠಾಧಿಪತಿಗಳು ಎಂಬುದು ಚಾರಿತ್ರಿಕ ದಾಖಲೆಯಾಗಿದೆ.

ಆಧ್ಯಾತ್ಮಿಕ ಜಗತ್ತಿನ ತ್ರಿವಿಕ್ರಮ ಶಕ್ತಿಯಾಗಿ ಮಠಗಳು ಬೆಳೆಯುತ್ತಿರುವುದು ಸನಾತನಧರ್ಮದ ಪ್ರತೀಕವಾಗಿದೆ. "ಧರ್ಮೋ ರಕ್ಷಿತ ರಕ್ಷಿತಃ" ಎಂಬ ಸೂಕ್ತಿಯಂತೆ ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಧರ್ಮ ಜಾಗೃತಿಯನ್ನು ಮೂಡಿಸುವಲ್ಲಿ ಅಖಿತ ಭಾರತ ಶರಣ ಸಾಹಿತ್ಯ ಪರಿಷತ್‌ನ ಸಂಸ್ಥಾಪಕರಾದ ಲಿಂ. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಕಾರ್ಯ ಶ್ಲಾಘನೀಯ. ಪ್ರತಿವರ್ಷವು ಇಂತಹ ಧಾರ್ಮಿಕ ಸಮ್ಮೇಳನವನ್ನು ನಡೆಸಿ, ಭಕ್ತರಿಗೆ ಶರಣರ ವಿಚಾರಧಾರೆಯನ್ನು ಎರೆದು ಹೃದಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ಜೆಎಸ್‌ಎಸ್ ಸಂಸ್ಥೆ ಮುಂಚೂಣಿಯಲ್ಲಿರುವುದು ಸಮುದಾಯಕ್ಕೆ ನೀಡಿದ ಕೊಡುಗೆಯಾಗಿದೆ.



ಒಂದು ಸಂಸ್ಥೆಯನ್ನು ಕಟ್ಟುವುದು ಅಷ್ಟು ಸುಲಭವಲ್ಲ. ಅದು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಂತವರಿಂದ ಮಾತ್ರ ಸಾಧ್ಯ. ಮೈಸೂರಿನಲ್ಲಿ ಬಡ ವಿದ್ಯಾರ್ಥಿಗಳಿಗಾಗುವ ತೊಂದರೆಯನ್ನು ಕಂಡು 1954ರಲ್ಲಿ ತಮ್ಮ ಕೊರಳಲ್ಲಿದ್ದ ಚಿನ್ನದ ಕರಡಿಗೆಯನ್ನು 800 ರೂ.ಗೆ ಮಾರಿ ಬಂದ ಹಣದಲ್ಲಿ ಚಿಕ್ಕದಾಗಿ ಒಂದು ವಿದ್ಯಾರ್ಥಿನಿಲಯ ಸ್ಥಾಪಿಸಿದರು. ಚಿನ್ನದಿಂದ ಮನುಷ್ಯನಿಗೆ ಬೆಲೆ ಬರುವುದಿಲ್ಲ. ಅವನು ಮಾಡುವ ಕಾರ್ಯದಿಂದ ಅವನ ವ್ಯಕ್ತಿತ್ವಕ್ಕೆ ಬೆಲೆ ಬರುತ್ತದೆ ಎಂದು ತಿಳಿದುಕೊಂಡಿದ್ದರು.

ಮಠದ ಮುಂದಿನ ಉತ್ತರಾಧಿಕಾರಿಗಳಾಗುವ ವಟುಗಳಿಗೆ, ಶಿಕ್ಷಣ ತರಪೇತು ಕೊಡುವುದಕ್ಕಾಗಿ ಒಂದು "ಗುರುಕುಲ"ವನ್ನು ವಾಣಿವಿಲಾಸ ರಸ್ತೆಯಲ್ಲಿರುವ ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆಯ ಪಕ್ಕದ ಕಟ್ಟಡದಲ್ಲಿ ಪ್ರಾರಂಭಿಸಿದರು. ಅಲ್ಲಿ ಒಂದು ಪ್ರಸಾದ ನಿಲಯವನ್ನು ಪ್ರಾರಂಭಿಸಿದರು. ಮಠಾಧಿಪತಿಗಳಾಗುವವರು ಲೌಕಿಕ ಮತ್ತು ಪಾರಮಾರ್ಥಿಕ ವಿದ್ಯೆಗಳಲ್ಲಿ ಪಾರಂಗತರಾಗಿರಬೇಕು. "ಸ ಗುರುಮೇವ ಅಭಿಗಚ್ಛೇತ್ ಶ್ರೋತ್ರಿಯಂ ಬ್ರಹ್ಮನಿಷ್ಠಂ", ಅಂದರೆ ಗುರುವು ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆಗಿರಬೇಕು. ಯಾರು ಹಾಗೆ ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆಗಿರುವನೋ ಅವನೇ ಗುರುಪದವಿಗೆ ಅರ್ಹನು ಎಂಬುದಾಗಿ ನಂಬಿದ್ದರು. ವೇದ ಆಗಮ ಶಾಸ್ತ್ರಗಳನ್ನು ಬೋಧಿಸಲು ಒಳ್ಳೆಯ ಉಪಾಧ್ಯಾಯರನ್ನು ನೇಮಿಸಿದ್ದರು. ಇಲ್ಲಿ ಶಿಕ್ಷಣ ಪಡೆದ ಅನೇಕ ವಟುಗಳು, ಅನೇಕ ಮಠಗಳಲ್ಲಿ ಪೀಠಾಧಿಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಲ್ಲಿ ಸಮಾಜಮುಖಿ ಚಿಂತನೆ ಎದ್ದು ಕಾಣುತ್ತಿತ್ತು. ಸಮಾಜದಲ್ಲಿ ಎಲ್ಲಾ ವರ್ಗದವರು ಮೇಲೆ ಬರಬೇಕು ಎಂಬುದೇ ಆಗಿತ್ತು. ಬಡವರು, ಕುರುಡರು, ಅಂಗವಿಕಲರ ಬಗ್ಗೆ ಅನುಕಂಪ, ದಯೆ, ಕರುಣೆಯನ್ನು ತೋರಿಸುತ್ತಿದ್ದರು. ಅವರಿಗೆ ಆನೆಕರೋಟಿ ವಿದ್ಯಾರ್ಥಿನಿಲಯದಲ್ಲಿ ಉಚಿತ ಊಟದ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ಬಡ ವಿದ್ಯಾರ್ಥಿಗಳಿಗಾಗಿ ಪುಸ್ತಕ ಮತ್ತು ಕಾಲೇಜಿನ ಶುಲ್ಕವನ್ನು ತಾವೇ ಭರಿಸುತ್ತಿದ್ದರು.

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಸೋಮಹಳ್ಳಿ ಗ್ರಾಮದ ವೀರಸಿಂಹಾಸನ ಶಿಲಾಮಠಕ್ಕೆ ನಾವು ಪಟ್ಟಾಧಿಕಾರಿಯಾದದ್ದು 1971ರಲ್ಲಿ. ಅನಂತರ 1975ರಲ್ಲಿ ಈ ಮಠದ ಹಿಂದಿನ ಗುರುಗಳಾದ ಲಿಂ. ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳವರ 25ನೇ ವರ್ಷದ (ರಜತ) ಮಹೋತ್ಸವವನ್ನು ಆಚರಿಸಬೇಕಾದ ಸಂದರ್ಭದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳನ್ನು ನೋಡುವ, ಅವರೊಡನೆ ಮಾತನಾಡುವ ಸುಯೋಗ ಒದಗಿತು. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಬಗ್ಗೆ ಬಂದಿರುವ ಕೃತಿಗಳ ಬಗ್ಗೆ ಓದಿ ತಿಳಿದುಕೊಂಡಿದ್ದೆ. ಇನ್ನು ಕೆಲವು ವಿಷಯಗಳನ್ನು ಅವರ ಭಕ್ತರಿಂದ ಕೇಳಿ ತಿಳಿದುಕೊಂಡಿದ್ದೆ. ಆದರೆ ಅವರನ್ನು ಹತ್ತಿರದಿಂದ ಕಂಡು ಮಾತನಾಡಿಸುವ ಸನ್ನಿವೇಶ

ದೊರಕಿದ್ದು, ನಮ್ಮ ಮಠದಲ್ಲಿ ಆಚರಿಸುವ ಆರಾಧನಾ ಮಹೋತ್ಸವದಲ್ಲಿ. ಅವರೊಡನೆ ಮಾತನಾಡುವಾಗ ಎಲ್ಲಾ ಮಠಾಧೀಶರನ್ನು ಒಂದೇ ದೃಷ್ಟಿಯಿಂದ ನೋಡುವ ಮನೋಧರ್ಮ, ನಮ್ಮ ಮಠಗಳಂತೆ ಎಲ್ಲಾ ಮಠಗಳು ಅಭಿವೃದ್ಧಿಯಾಗಬೇಕು. ನಮ್ಮ ಸಮಾಜಕ್ಕೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂಬುದೇ ಅವರ ಆಶಯವಾಗಿತ್ತು. ಧರ್ಮಗುರುಗಳು ಸಂಕುಚಿತತೆಯನ್ನು ಬಿಟ್ಟು "ಸರ್ವೆ ಜನಾಃ ಸುಖಿನೋ ಭವಂತು" ಎಂಬಂತೆ ವಿಶಾಲ ಮನೋಭಾವನೆಯಿಂದ ಸಮುದಾಯದ ಏಳಿಗೆಗೆ ಶ್ರಮಿಸಬೇಕು ಎಂಬುದು ಅವರ ದೃಢ ಸಂಕಲ್ಪವಾಗಿತ್ತು. ಆ ದೃಢ ಸಂಕಲ್ಪದ ಬೀಜವೇ ಹೆಮ್ಮರವಾಗಿ ಬೆಳೆದು ನಿಂತಿರುವ "ಜೆಎಸ್ಎಸ್ ಮಹಾವಿದ್ಯಾಪೀಠ." ಲಕ್ಷಾಂತರ ವಿದ್ಯಾರ್ಥಿಗಳಿಗೆ ಇಂದು ಜ್ಞಾನ ದಾಸೋಹವನ್ನು ನೀಡುತ್ತಿದೆ.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ದೃಷ್ಟಿಯಲ್ಲಿ ಮಠಗಳೆಂದರೆ ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗಿರದೇ ಜನರ ಜೀವನಮಟ್ಟ ಮತ್ತು ಬದುಕಿನ ಶೈಲಿಯನ್ನು ಉತ್ತಮಪಡಿಸಬೇಕು. ನಮ್ಮ ಧರ್ಮ, ಸಂಸ್ಕೃತಿಯನ್ನು ಬಿಂಬಿಸುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸಿ, ಜನಮಾನಸದಲ್ಲಿ ನೆಲೆಯಾಗಿ ನಿಲ್ಲಬಲ್ಲ ಧಾರ್ಮಿಕ, ಸಾಂಸ್ಕೃತಿಕ ಸಮಾರಂಭಗಳನ್ನು ಏರ್ಪಡಿಸಿ, ಅವುಗಳ ಮೂಲಕ ಸಮಾಜವನ್ನು ತಿದ್ದಬೇಕು ಎಂಬುದೇ ಅವರ ನಿಲುವು ಆಗಿತ್ತು. ಅದರ ಪ್ರತೀಕವೇ ಜೆಎಸ್ಎಸ್ ಸಂಸ್ಥೆಯು ನಡೆಸುತ್ತಿರುವ ಆದಿ ಗುರು ಶ್ರೀ ಶಿವರಾತ್ರಿ ಭಗವತ್ಪಾದರ ಜಯಂತಿ ಮಹೋತ್ಸವ. ಈ ಸಮಾರಂಭದಲ್ಲಿ ಶ್ರೇಷ್ಠ ಚಿಂತಕರ ಸಮಾವೇಶ, ಧಾರ್ಮಿಕ ಗೋಷ್ಠಿ, ಸಾಂಸ್ಕೃತಿಕ ಕಲೆ, ಸಂಗೀತ, ಕೃಷಿ ಮೇಳ, ಆರೋಗ್ಯ ತಪಾಸಣೆ, ಉತ್ತಮ ರಾಸುಗಳಿಗೆ ಬಹುಮಾನ, ಪುಸ್ತಕ ಮೇಳವನ್ನು ಏರ್ಪಡಿಸಿ ಜನರಲ್ಲಿ ಜಾಗೃತಿ ಮೂಡಿಸುವುದೇ ಆಗಿದೆ. ಇದೇ ಸಂದರ್ಭದಲ್ಲಿ ಲಕ್ಷಾಂತರ ಭಕ್ತಾದಿಗಳಿಗೆ ಅನ್ನದಾಸೋಹವನ್ನು ನಡೆಸುತ್ತಿರುವುದು ಸುತ್ತೂರು ಮಠದ ಹೆಗ್ಗಳಿಕೆಯಾಗಿದೆ.

ಲಿಂಗೈಕ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಮನಸ್ಸು ಬಹಳ ಮೃದು. ಇನ್ನೊಬ್ಬರ ಕಷ್ಟ ಸುಖಗಳಿಗೆ ಸ್ಪಂದಿಸುವ ಕರುಣಾಮಯಿಗಳು. ಕಷ್ಟದಲ್ಲಿ ನೊಂದ ಜೀವಿಗಳಿಗೆ ಅಭಯ ಹಸ್ತ ನೀಡುವ ದಯಾಳುಗಳಾಗಿದ್ದರು. ನಾವು ಅವರ ಹತ್ತಿರ ಕರೆದುಕೊಂಡು ಹೋಗಿದ್ದ ಅನೇಕ ಬಡ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶಾವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ಅನೇಕ ಬಡ ವಿದ್ಯಾರ್ಥಿಗಳಿಗೆ ಅವರ ಸಂಸ್ಥೆಯಲ್ಲಿ ಕೆಲಸ ಕೊಡಿಸಿದ್ದಾರೆ. ಆದರೆ ಅವರ ಒಂದು ಸ್ವಭಾವವನ್ನು ನಾವು ಅರಿಯದವರಾಗಿದ್ದೆವು. ಅದು ಯಾವುದು ಎಂದರೆ ಕೆಲವರನ್ನು ನಾಳೆ ಬಾ, ನಾಳೆ ಬಾ ಎಂದು ಹೇಳಿ ಕಳುಹಿಸುತ್ತಿದ್ದರು. ಐದಾರು ಸಲ ಆ ವಿದ್ಯಾರ್ಥಿ ಬುದ್ಧಿಯವರ ಹತ್ತಿರ ತಿರುಗಿ ಬಂದ ಮೇಲೆ ನಿನ್ನ ಕೆಲಸ ಆಯ್ತು ಎಂದು ಹೇಳುತ್ತಿದ್ದರು. ಅನಂತರ ಅವರ ಸ್ವಭಾವದ ಅರಿವು ಉಂಟಾಯಿತು. ಶ್ರೀಮಂತರ ವಿದ್ಯಾರ್ಥಿಯಾದರೆ ಎರಡು ಸಲ ತಿರುಗಿ, ಮೂರನೇ ಸಾರಿ ಬರದೇ ಯಾವುದಾದರೂ ಉದ್ಯೋಗಕ್ಕೆ ಹೊಂದಿಕೊಳ್ಳುತ್ತಾನೆ. ಆದರೆ ಬಡ ವಿದ್ಯಾರ್ಥಿಯಾದರೆ



ಅವನಿಗೆ ಬೇರೆ ದಾರಿಯಿಲ್ಲ. ಬುದ್ಧಿಯವರು ಹೇಳಿದಷ್ಟು ಸಾರಿ ಬಂದು ನೋಡಬೇಕಾಗಿತ್ತು. ಕಾರಣ ಬಡವರಿಗೆ ಹೆಚ್ಚು ಅವಕಾಶಗಳು ಸಿಗಲಿ ಎಂಬುದು ಬುದ್ಧಿಯವರ ಉದ್ದೇಶವಾಗಿತ್ತು ಎಂಬುದು ಅನಂತರ ತಿಳಿಯಿತು.

ಒಮ್ಮೆ ಬುದ್ಧಿಯವರ ಜೊತೆಯಲ್ಲಿ ಒಂದು ವಾರಗಳ ಕಾಲ ಪ್ರವಾಸ ಹೋಗುವ ಸನ್ನಿವೇಶ ನಮಗೆ ಒದಗಿಬಂದಿತು. ಮಂತ್ರಾಲಯದ ಹತ್ತಿರ ಹೋಗುತ್ತಿದ್ದಾಗ ಅವರ ಕಾರಿನ ಚಕ್ರಗಳು ಕೆಸರಿನಲ್ಲಿ ಹೂತುಕೊಂಡಿದ್ದವು. ಮುಂದೆ ಚಲಿಸಲು ಆಗದೇ ಕಾರು ನಿಂತುಕೊಂಡಿತು. ಆ ದಿನ ರಾತ್ರಿ ಹತ್ತಿರದಲ್ಲಿದ್ದ ಬಂಕಾಪುರ ಮಠದಲ್ಲಿ ಉಳಿದುಕೊಳ್ಳಬೇಕಾಯಿತು. ಅವರು ಯಾವುದೇ ಸ್ಥಳದಲ್ಲಿ ಉಳಿದುಕೊಂಡರೂ, ಲಿಂಗಪೂಜೆಯನ್ನು ಮಾಡದೇ ಇರುತ್ತಿರಲಿಲ್ಲ. ಶಿವಪೂಜೆಯ ನಂತರವೇ ಬೇರೆ ಕೆಲಸ. ಅವರ ಪೂಜೆ ಅಷ್ಟು ನಿಷ್ಠೆಯಿಂದ ಕೂಡಿತ್ತು.

ಲಿಂಗ ಬೇರೆ ಶರಣ ಬೇರೆಂದು ಹಂಗಿಸಿ ನುಡಿಯಲಾಗದು
ಲಿಂಗ ಬೇರೆ ಶರಣ ಬೇರೆಯೇ? ಶಿವ ಶಿವ ಒಂದೇ ಕಾಣಿರಣ್ಣ
ಸುವರ್ಣ ಆಭರಣವಾಯಿತೆಂದೆಡೆ ಅದು ನಾಮ ರೂಪ
ಭೇದವಲ್ಲದೆ ವಸ್ತು ಭೇದವಲ್ಲ
ಭಕ್ತಿಯ ವೈಭವದಿಂದ ಶರಣ ಸಕಾಯನಾಗಿ ಅವತರಿಸಿದನೆಂದೆಡೆ ಬೇರಾಗಬಲ್ಲದೇ?
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಲಿಂಗವೆಂದಡೂ
ಶರಣನೆಂದಡೂ ಒಂದೇ ಕಾಣಿರಣ್ಣ.

ಶಿವಕಾರುಣ್ಯದಿಂದಲೇ ಎಲ್ಲವು ನಡೆಯುತ್ತದೆ ಎಂಬ ನಂಬಿಕೆ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳದ್ದಾಗಿತ್ತು. ಮುಂದೆ ಅವರು ಮುಟ್ಟಿದ್ದೆಲ್ಲವೂ ಚಿನ್ನವಾಯಿತು.

ಇಂದು ಜೆಎಸ್ಎಸ್ ಮಹಾವಿದ್ಯಾಪೀಠ ಬೃಹದಾಕಾರವಾಗಿ ಬೆಳೆದು ನಿಂತಿದೆ. ಇದಕ್ಕೆ ಕಾರಣ ಬುದ್ಧಿಯವರಲ್ಲಿದ್ದ ಧೀಶಕ್ತಿ, ಶಿವಪರ ಚಿಂತನೆ, ಸಮಾಜೋಧಾರ್ಮಿಕ ಭಾವನೆ, ಸಾಮಾಜಿಕ ಕಳಕಳಿ, ಸಮುದಾಯದ ಏಳ್ಗೆ, ಬಡವರ ಬಗ್ಗೆ ಅನುಕಂಪ ಮುಂತಾದ ಗುಣಗಳು ಅವರಲ್ಲಿ ಮೇಳೈಸಿತ್ತು. ಈ ಸಂಸ್ಥೆಯ ಆಶ್ರಯದಲ್ಲಿ 300ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಸ್ಥಾಪನೆಯಾಗಿವೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಮುಂತಾದ ಅವರ ಯೋಜನೆಗಳು, ಅವರ ಕನಸಿನ ಕೂಸು. ಅವು ಇಂದು ಬೆಳೆದು ಹೆಮ್ಮರವಾಗಿವೆ.

ಲಿಂ. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿ, ಒಬ್ಬ ಕಾರಣಿಕಪುರುಷ, ಯುಗಪುರುಷ, ಅವತಾರಪುರುಷ, ದೈವಾಂಶಸಂಭೂತರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

# ಎಲ್ಲರನ್ನೂ ಇವರು ನಮ್ಮವರೆಂದವರು

**ಶ್ರೀ ಸದಾಶಿವ ಸ್ವಾಮಿಗಳು,** ಎಂ.ಎ.
ವಿರಕ್ತಮಠ, ಮಾದಾಪಟ್ಟಣ
ಗುಂಡ್ಲುಪೇಟೆ ತಾಲ್ಲೂಕು

ಈಗಾಗಲೇ ಕರ್ನಾಟಕದಲ್ಲಿ ಸಾಮಾನ್ಯವಾಗಿ ಸಾವಿರಾರು ಮಠಗಳು ಸಾಮಾಜಿಕ ಹಾಗೂ ಧಾರ್ಮಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದ್ದು, ಅವುಗಳಲ್ಲಿ ಶ್ರೀ ಸುತ್ತೂರು ವೀರಸಿಂಹಾಸನ ಮಠವು ಧಾರ್ಮಿಕ ಹಾಗೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ತನ್ನ ಉತ್ತುಂಗ ಶಿಖರವನ್ನು ಮುಟ್ಟಿದೆ. ಇಂತಹ ಸ್ಥಿತಿಯನ್ನು ಮುಟ್ಟಬೇಕಾದರೆ ಮೂಲ ಸಂಸ್ಥಾಪಕರ ತಪಸ್ಸಿನ ಫಲ, ಮಂತ್ರ ಮಹರ್ಷಿಗಳ ಮಂತ್ರಾನುಷ್ಠಾನ ಮತ್ತು ರಾಜೇಂದ್ರ ಸ್ವಾಮಿಗಳವರ ಧೀಶಕ್ತಿ, ಕರ್ತೃತ್ವಶಕ್ತಿ ಮತ್ತು ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರರ ಹೃದಯವೈಶಾಲ್ಯ ಮತ್ತು ಸಮಾಜಮುಖಿಯ ಚಿಂತನೆಗಳು ಕಾರಣವೆನಿಸುತ್ತವೆ. ಎಲ್ಲಕ್ಕೂ ಮೀರಿ ಹಿರಿಯ ಗುರುಗಳ ಆಶೀರ್ವಾದವೇ ಮುಖ್ಯ. ಇವತ್ತು ಸುತ್ತೂರು ಮಠದಲ್ಲಿ ಯಾವುದೇ ಕಾರ್ಯಕ್ರಮ ಇದ್ದರೆ ಯಾವುದೇ ಸ್ವಾಮಿಗಳು ಹೋಗುವುದಕ್ಕೆ ಬಹಳ ಸಂತೋಷ ಮತ್ತು ಸಡಗರ. ಅಲ್ಲಿ ತಮ್ಮ ತಮ್ಮ ಮಠಗಳಿಗಿಂತಲೂ ಹೆಚ್ಚು ಆತಿಥ್ಯ ಮತ್ತು ಪ್ರೀತಿ ವಿಶ್ವಾಸಗಳಿಂದ ಕಾಣುತ್ತಿರುವುದು ಮತ್ತು



ಬಸವಣ್ಣನವರು ಹೇಳಿರುವಂತೆ ಇವನಾರವ, ಇವನಾರವ, ಇವನಾರವ ಎನ್ನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ ಎಂದು ಹೇಳಿರುವಂತೆ ಯಾವುದೇ ಬಡವರು, ಶ್ರೀಮಂತರು ಎನ್ನುವ ಭೇದಭಾವವಿಲ್ಲದೆ ಯಾವ ಧಾರ್ಮಿಕ ಕಾರ್ಯಕ್ರಮವಿದ್ದರೂ ಎಲ್ಲ ಸ್ವಾಮಿಗಳಿಗೂ ಆದ್ಯತೆ ಇರುವುದರಿಂದ ನಮ್ಮ ಮಠದಲ್ಲಿ ಕಾಣುವುದಕ್ಕಿಂತ ಪ್ರೀತಿ ಇಲ್ಲಿ ಸಿಗುತ್ತದೆ ಎಂಬುದೇ ನಮ್ಮೆಲ್ಲರ ಅನಿಸಿಕೆ. ಯಾವುದೇ ಧಾರ್ಮಿಕ, ಸಾಮಾಜಿಕ ಚಿಂತನೆಗಳು, ಶಿಬಿರಗಳು ನಡೆಯಬೇಕಾದರೆ ಅಲ್ಲಿ ಸ್ವಾಮಿಗಳು ಇದ್ದೇ ಇರುತ್ತಾರೆ. ಇದಕ್ಕೆಲ್ಲ ಕಾರಣ ಇಂದಿನ ಜಗದ್ಗುರುಗಳವರ ಹೃದಯವೈಶಾಲ್ಯ.

ಇನ್ನು ಪ್ರಸ್ತುತ ವಿಷಯಕ್ಕೆ ಬರೋಣ. ನಾನು ಅಂದು ಮಹಾರಾಜ ಕಾಲೇಜಿನಲ್ಲಿ 1965ರ ದಶಕದಲ್ಲಿ ಬಿ.ಎ. ಮೊದಲನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆವಾಗ ನಮ್ಮ ಗುರುಗಳಾದ ಮಾದಾಪಟ್ಟಣ ಮಠದ ಅಂದಿನ ವಿರಕ್ತ ಮಠದ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರ ಆಶ್ರಯ ಪಡೆದಿದ್ದೆ. ಅವರು ಆ ಕಾಲಕ್ಕೆ ಶ್ರೀ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಲಹೆ ಮತ್ತು ಪ್ರೋತ್ಸಾಹದಿಂದ ಅಂದು ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಗ್ರಾಮವಾಗಿ ಅಲ್ಲಿ ವಿದ್ಯಾರ್ಜನೆಗೆ ಬರುವ ವಿದ್ಯಾರ್ಥಿಗಳಿಗಾಗಿ ಒಂದು ಅನಾಥಾಲಯವನ್ನು ಸ್ಥಾಪಿಸಿದ್ದರು. ಮತ್ತು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಪ್ರೋತ್ಸಾಹ ಮತ್ತು ಸಲಹೆ ಮೇರೆಗೆ ಅನಾಥಾಲಯದ ಪ್ರಾರಂಭೋತ್ಸವಕ್ಕೆ ಅಂದಿನ ಸಮಾಜಕಲ್ಯಾಣ ಮಂತ್ರಿಗಳಾಗಿದ್ದ ಜಿ.ವಿ. ಹಳ್ಳಿಕೇರಿಯವರ ಉದ್ಘಾಟನೆ ಹಾಗೂ ಸನ್ನಿಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ ನಮಗೆ ಹಾಸ್ಟೆಲ್ ವಿಷಯದಲ್ಲಿ ಹೇಗೆ ನಡೆಸಬೇಕು ಮತ್ತು ಲೆಕ್ಕಪತ್ರಗಳನ್ನು ಹೇಗೆ ಇಡಬೇಕು ಎಂಬುದನ್ನು ಅವರ ಸೆಕ್ರೆಟ್ರಿಯವರ ಮುಖಾಂತರ ಸಲಹೆಗಳನ್ನು ಕೊಡಿಸುತ್ತಿದ್ದರು. ಹೀಗೆ ತಮ್ಮಂತೆ ಧಾರ್ಮಿಕ, ಸಾಮಾಜಿಕ ಕರ್ತವ್ಯಗಳನ್ನು ಒಬ್ಬ ಮಠಾಧಿಪತಿಯಾದವರು ಹೇಗೆ ಮೈಗೂಡಿಸಿಕೊಳ್ಳಬೇಕು ಎಂಬುದನ್ನು ಆಚರಿಸಿ ತೋರಿಸಿ ಇನ್ನೊಬ್ಬರಿಗೆ ಮಾರ್ಗದರ್ಶಿಗಳಾಗಿದ್ದರು ಎಂಬುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆಗ ಅಂದರೆ 1965ರಲ್ಲಿ ನಮ್ಮ ಮಠಕ್ಕೆ ಆಗಮಿಸಿದ್ದರು. ಆಗ ನನಗೆ ಅವರ ಪ್ರಥಮ ದರ್ಶನವಾಯಿತು. ಮತ್ತೆ ನಾನು 1971ರಲ್ಲಿ ವ್ಯಾಸಂಗ ಮುಗಿಸಿ 1972ರಲ್ಲಿ ಎಂ.ಎ. ಮುಗಿಸಿ ಸನ್ಯಾಸ ದೀಕ್ಷೆಯನ್ನು ಹೊಂದಿ ನಮ್ಮ ಹಿರಿಯ ಗುರುಗಳು ನನ್ನನ್ನು ಉತ್ತರಾಧಿಕಾರಿಯಾಗಿ ಮಾಡಿದರು. ಮತ್ತು ನನ್ನ ಚರಪಟ್ಟಾಧಿಕಾರ ಮಹೋತ್ಸವದಲ್ಲಿ ಜಗದ್ಗುರುಗಳು ಭಾಗವಹಿಸಿದ್ದರು. ಆಗ ನನಗೆ ಉತ್ತಮ ಶಿಕ್ಷಣ ದೊರೆತಿದ್ದರೂ ಧಾರ್ಮಿಕ ಶಿಕ್ಷಣವಂತೂ ಇರಲಿಲ್ಲ. ಆದ್ದರಿಂದ ನಾನು ಧಾರ್ಮಿಕ ಶಿಕ್ಷಣ ಮತ್ತು ಆಚರಣೆ ವಿಷಯಗಳ ಬಗ್ಗೆ ನನಗೆ ಕುಂದೂರು ಇಂದಿನ ಹಿರಿಯ ಸ್ವಾಮೀಜಿಯವರಾದ ಶ್ರೀ ಶ್ರೀ ಡಾ. ಇಮ್ಮಡಿ ಶಿವಬಸವ ಸ್ವಾಮಿಗಳವರ ಒಂದು ಮಾರ್ಗದರ್ಶನ ಈ ಸಮಯದಲ್ಲಿ ದೊರೆಯಿತು. ಆಗ ಅವರು ಜಗದ್ಗುರು ಡಾ. ಶಿವರಾತ್ರಿ

ರಾಜೇಂದ್ರ ಸ್ವಾಮಿಗಳವರ ಬಳಿಗೆ ನನ್ನನ್ನು ಕರೆದುಕೊಂಡು ಹೋಗಿ ಹತ್ತಿರದಿಂದ ಪರಿಚಯಮಾಡಿಕೊಟ್ಟರು. ನಾನು ಮೈಸೂರಿಗೆ ಹೋದಾಗಲೆಲ್ಲಾ ಕುಂದೂರು ಶ್ರೀಗಳವರ ಜೊತೆ ಹೋಗುತ್ತಿದ್ದೆ. ಆಗ ಹಿರಿಯ ಜಗದ್ಗುರುಗಳವರ ಮಾರ್ಗದರ್ಶನ ನನಗೆ ತುಂಬಾ ಸಿಕ್ಕಿತು. ಆಗ ಅವರೊಡನೆ ನನ್ನ ಒಡನಾಟ ಜೀವನದಲ್ಲಿ ಧಾರ್ಮಿಕ ಚಿಂತನೆ ಮತ್ತು ಸಾಮಾಜಿಕ ಚಿಂತನೆ ದೊರೆತು ಒಬ್ಬ ಮಠಾಧಿಪತಿಯಾದವನು ಸಮಾಜದಲ್ಲಿ ಹೇಗೆ ವರ್ತಿಸಬೇಕು, ಸಮಾಜಮುಖಿ ಚಿಂತನೆ ಮಾಡಬೇಕು, ಕಾರ್ಯ ಮಾಡಬೇಕು, ಬಂದದ್ದನ್ನು ಸಮಾಜಕ್ಕೆ ಹೇಗೆ ಅರ್ಪಿಸಬೇಕು ಎಂಬುದನ್ನು ತಿಳಿಸುತ್ತಿದ್ದರು. ಇಲ್ಲಿ ಒಂದು ಮಾತು ಹೇಳಬೇಕೆಂದರೆ ಸ್ವಾಮಿ ವಿವೇಕಾನಂದರನ್ನು ಅವರ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಅವಸಾನ ಕಾಲ ಸಮೀಪವಾದಾಗ ವಿವೇಕಾನಂದರನ್ನು ಹತ್ತಿರಕ್ಕೆ ಕರೆದು ಹೇಳಿದರಂತೆ. ಇನ್ನೇನು ನಾನು ಕೆಲವು ದಿನಗಳಷ್ಟೇ ಬದುಕುತ್ತೇನೆ. ನಿನ್ನ ಕೊನೆಯ ಆಸೆ ಏನೆಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ ಹೇಳು ಎಂದರಂತೆ. ಆಗ ವಿವೇಕಾನಂದರು ಕೇಳಿದ ಮಾತು ಗುರುಗಳೇ ನಾನು ಯಾವಾಗಲೂ ನನ್ನ ಧ್ಯಾನ ಸಮಾಧಿಯಲ್ಲೇ ಅರ್ಥಾತ್ ದೇವರ ಚಿಂತನೆಯಲ್ಲೇ, ತಪಸ್ಸಿನಲ್ಲೇ ನಾನು ಕಾಲ ಕಳೆಯಬೇಕೆಂದಿದ್ದೇನೆ. ಆದ್ದರಿಂದ ತಾವು ನನಗೆ ಆಶೀರ್ವಾದ ಮಾಡಿ ಎಂದು ಕೇಳಿಕೊಂಡರಂತೆ. ಆಗ ಶ್ರೀ ರಾಮಕೃಷ್ಣರು ಹೇಳಿದರಂತೆ, ಛೀ ಹುಚ್ಚ ನೀನು ಜ್ಞಾನಿ ಎಂದು ತಿಳಿದುಕೊಂಡಿದ್ದೆ. ನೀನೆಷ್ಟು ಸ್ವಾರ್ಥಿ ಎಂದು ಬೈದರಂತೆ. ಆಗ ವಿವೇಕಾನಂದರಿಗೆ ದಿಕ್ಕೇ ತೋರಲಿಲ್ಲ. ಆಗ ಗುರುಗಳು ಹೇಳಿದ ಮಾತುಗಳಿವು. ಇಂದು ಭಾರತ ದೇಶದಲ್ಲಿ ಜನ ಅಜ್ಞಾನದಿಂದ ಬಳಲುತ್ತಿದ್ದಾರೆ ಮತ್ತು ಅಕ್ಷರವಿಲ್ಲದೆ, ಹೊಟ್ಟೆಗೆ ಅನ್ನವೂ ಇಲ್ಲದೆ ಬಳಲುತ್ತಿರುವಾಗ ನೀನು ತಪಸ್ಸು ಮಾಡಲು ಕುಳಿತುಕೊಳ್ಳುವುದು ಸರಿಯೆ? ಎಂದು ಹೇಳಿ, ನೀನು ಅಕ್ಷರವಿಲ್ಲದವರಿಗೆ ವಿದ್ಯೆ ಕೊಡಬೇಕು. ಅನ್ನವಿಲ್ಲದವರಿಗೆ ಅನ್ನ ಕೊಡಬೇಕು. ಬಡವರ ಕಣ್ಣೀರನ್ನು ನೀನು ಹೊರೆಸಿದಾಗ ಮಾತ್ರ ನನಗೆ ಮತ್ತು ನನ್ನ ಆತ್ಮಕ್ಕೆ ಶಾಂತಿ ಎಂದು ಹೇಳಿದರಂತೆ. ಅಂದಿನಿಂದ ಅವರು ಸಮಾಜ ಸುಧಾರಣೆ ತಮ್ಮ ಗುರಿ ಎಂದು ತಿಳಿದು ಕಾರ್ಯತತ್ಪರರಾದರಂತೆ. ಹಿರಿಯ ಜಗದ್ಗುರುಗಳು ವಿವೇಕಾನಂದರ ಈ ಆದರ್ಶವನ್ನು ತಮ್ಮ ಸಮಾಜ ಸುಧಾರಣೆಗೆ ಕೈಗೊಂಡರು. ನಾನು ಮೈಸೂರಿಗೆ ಹೋದಾಗಲೆಲ್ಲಾ ಕುಂದೂರು ಶ್ರೀಗಳವರ ಜೊತೆಯಲ್ಲಿ ಶ್ರೀ ಸುತ್ತೂರು ಮಠಕ್ಕೆ ಹೋಗುತ್ತಿದ್ದೆ. ಆಗ ಗುರುಗಳು ನಮ್ಮನ್ನು ಸಂಬೋಧಿಸುತ್ತಿದ್ದು ಹೀಗೆ. Thanks ಬಂದೀರಲ್ಲ ಎಂದು ತಮಾಷೆ ಮಾಡುತ್ತಿದ್ದರು. ನಾನು ಯಾಕೆ ಬುದ್ಧಿ ತಾವು ಥ್ಯಾಂಕ್ಸ್ ಹೇಳುತ್ತಿರಲ್ಲಾ ಎಂದರೆ ನೀವು ಇಂಗ್ಲಿಷ್ ಕಲಿತವರು. ಆದ್ದರಿಂದ ನಾನು ಇಂಗ್ಲಿಷ್‌ನಲ್ಲಿ ಥ್ಯಾಂಕ್ಸ್ ಹೇಳುತ್ತಿದ್ದೇನೆ ಎಂದು ತಮಾಷೆ ಮಾಡುತ್ತಿದ್ದರು. ಅಲ್ಲಿ ಹೋದರೆ ನಮಗೆ ವಿಶೇಷ ಆತಿಥ್ಯವನ್ನು ಸ್ವೀಟ್ ಏನು ಬೇಕು ಹೇಳಿ ಎಂದು ಕೇಳುತ್ತಿದ್ದರು. ಮಧ್ಯಾಹ್ನ ಹೊತ್ತಿಗೆ ಇಲ್ಲೇ ಪೂಜೆ ಪ್ರಸಾದ ಮಾಡಿ ಹೋಗಬೇಕೆಂದು ಹೇಳುತ್ತಿದ್ದರು. ಲೇಟಾಗಿ ಊಟದ ವೇಳೆಗೆ ಹೋದರೆ ಆಗಲೂ ನಿಮಗೆ ಸ್ವೀಟ್ ಏನು



ಬೇಕು. ನಾವು ಯಾವುದು ಬೇಗ ಆಗುವುದಿಲ್ಲವೋ ಅದನ್ನೇ ಒಂದೊಂದು ಸಾರಿ ಕೇಳಿಬಿಡೋದು. ಆದರೂ ನಾವು ಪ್ರಸಾದಕ್ಕೆ ಕುಳಿತುಕೊಳ್ಳುವ ವೇಳೆಗಾಗಲೇ ನಾವು ಕೇಳಿದ ಸ್ವೀಟು ಸಿದ್ಧವಾಗುತ್ತಿತ್ತು. ಇದು ಇವರ ಪ್ರಸಾದದ ಮಹಿಮೆಯಾಗಿರುತ್ತಿತ್ತು. ಮತ್ತು ಅವರ ಸಮೀಪದಿಂದ ನನಗೆ ಭಕ್ತಿ, ವಿನಮ್ರತೆ, ಸಮಾಜದ ಬಗ್ಗೆ ಚಿಂತನೆಗಳು ನನಗೆ ಅರಿವನ್ನು ಉಂಟುಮಾಡಿತು. ಮತ್ತು ಯಾವಾಗಲೂ ನಗುಮುಖ, ಶಾಂತಿ ಮತ್ತು ಸಮಾಧಾನ ಸೈರಣೆ ಇರುತ್ತಿತ್ತು. ಯಾವಾಗಲು ಯಾರೆ ಮಠಾಧಿಪತಿಗಳು ಬರಲಿ ತಾವು ಇರುವ ಕಡೆ ಪೂಜೆ ಮತ್ತು ಪ್ರಸಾದ ಸಿದ್ಧವಾಗಿರುತ್ತಿತ್ತು ಮತ್ತು ಬಡಬಗ್ಗರು, ಹಿಂದುಳಿದವರು, ಧೀನರನ್ನು ಕಂಡರೆ ಬಹಳ ಮರುಗುತ್ತಿದ್ದರು, ಕನಿಕರ ತೋರುತ್ತಿದ್ದರು. ಯಾರಾದರೂ ಬಡವರು ಏನಾದರೂ ಕೇಳಿಕೊಂಡರೆ ಯಾರು ಇಲ್ಲದ ವೇಳೆಯಲ್ಲಿ ಕರೆದು ಕೈಯಾರೆ ಕೊಟ್ಟು ಕಳುಹಿಸಿಬಿಡುತ್ತಿದ್ದರು. ಇದರಿಂದ ನಾನು ಉದಾರವಾಗಿ ನಡೆದುಕೊಳ್ಳಬೇಕೆಂಬುದನ್ನು ಕಲಿತುಕೊಂಡೆ. ಅವರದು ಮಾತೃಹೃದಯ. ಇಲ್ಲಿ ಒಂದು ಕಡೆ ಶ್ರೀ ಜ್ಞಾನ ಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ತಮ್ಮ ಪ್ರವಚನದಲ್ಲಿ ಸಂತನಾದವನು ಹೇಗೆ ಇರುತ್ತಾರೆ ಎಂಬುದನ್ನು ಹೀಗೆ ಹೇಳುತ್ತಾರೆ.

ಈ ಜಗತ್ತಿನಲ್ಲಿ ಯಾರು ದೊಡ್ಡವರು ಎಂಬುದನ್ನು ಮತ್ತು ಯಾರು ಶ್ರೇಷ್ಠ ಎಂದು ಚೀನಾ ದೇಶದ ಸಂತ, ಅನುಭಾವಿ ಹೇಳಿರುವುದನ್ನು ಉದಾಹರಿಸುತ್ತಾರೆ. ಏನೆಂದರೆ ನಿಜವಾಗಿ ಈ ಜಗತ್ತಿನಲ್ಲಿ ದೊಡ್ಡವರಾರು? ಎಂದರೆ ಚೀನಾ ದೇಶದ ಮೆಂಗ್ ಝೂ ಎಂಬ ಅನುಭಾವಿ ಹೇಳುತ್ತಾನೆ. ಏನೆಂದರೆ? "He is great who looses not the child's heart" ಮಗುವಿನಂತ ಮುಗ್ಧ ಮನಸ್ಸು ಮತ್ತು ಪವಿತ್ರ ಹೃದಯ ಹೊಂದಿದವರೇ ದೊಡ್ಡವರು ಎಂದಂತೆ. ಶ್ರೀಗಳವರಲ್ಲಿ ಮಗುವಿನಲ್ಲಿ ಇರತಕ್ಕಂತಹ ಮುಗ್ಧ ಹೃದಯ ಮತ್ತು ಮನಸ್ಸುಗಳು ಇದ್ದುವು. ಮಗುವು ಯಾರು ಕರೆದರೂ ಹೋಗುವಂತೆ ಅವರಲ್ಲಿ ಆ ಜಾತಿ ಈ ಜಾತಿ ಎನ್ನದೆ ಕರೆದವರಲ್ಲಿ ಹೋಗುವಂತೆ ಮತ್ತು ಅದು ನಕ್ಕು ನಲಿವಂತೆ ಶ್ರೀಗಳವರು ನಮ್ಮೊಂದಿಗಿರುತ್ತಿದ್ದರು. ಪವಿತ್ರ ಪ್ರೇಮವನ್ನು ಹಂಚುವ ಆ ಮಗುವಿನ ಮನಸ್ಸು ಪರಿಶುದ್ಧವೂ ಆಗಿರುತ್ತಿತ್ತು. ಅವರ ಮನಸ್ಸು ಹೃದಯಗಳು, ಸಣ್ಣವರಾದ ನಾವು ಯಾರ ಬಳಿಗೆ ಹೋದರೆ ದೊಡ್ಡವರಾಗುತ್ತೇವೆ ಹಾಗೆ ಸಣ್ಣವರಲ್ಲೂ ದೊಡ್ಡತನವನ್ನು ಕಾಣುತ್ತಿದ್ದರು. ಚೆಸ್ಟರ್ಸನ್ ಹೇಳುವಂತೆ "He is great who makes everybody feel great" ಸಣ್ಣವರಾದ ನಾವು ದೊಡ್ಡವರಾಗುತ್ತೇವೆಯೋ ಅವರು ದೊಡ್ಡವರು ಎಂಬುದು ಆ ಮಾತಿನ ಭಾವ. ಆದ್ದರಿಂದ ಶ್ರೀಗುರುಗಳವರ ಸಾಮೀಪ್ಯದಿಂದ ನಮ್ಮ ಕುಂದುಕೊರತೆಗಳು ಕಡಿಮೆಯಾಗುತ್ತವೆ. ನಮ್ಮ ಹಿರಿಮೆಗರಿಮೆಗಳ ಅರಿವು ಅನುಭವ ನಮಗಾಗುತ್ತದೆ. ಅದಕ್ಕೆ ಬಸವಣ್ಣನವರು ಒಂದು ವಚನದಲ್ಲಿ "ಶಿವಪಥವರಿವೊಡೆ ಗುರುಪಥವೆ ಮೊದಲು ಗುರುಪಥವರಿವೊಡೆ ಶರಣರ ಸಂಗವೇ ಮೊದಲು" ಎಂಬಂತೆ. ಅವರ ಸಾಮೀಪ್ಯದಿಂದ ತನು ಶುದ್ಧವಾಗುತ್ತದೆ, ಮನ

ಶುದ್ಧವಾಗುತ್ತದೆ.

ಯಾವುದೇ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಿಗೆ ಶ್ರೀ ಕುಂದೂರು ಶ್ರೀಗಳವರನ್ನು ನನ್ನನ್ನು ಬಿಡದೆ ತಮ್ಮ ಕಾರಿನಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಪ್ರಯಾಣದಲ್ಲಿ ಲೋಕಾಭಿರಾಮವಾಗಿ ಮಾತನಾಡುತ್ತಾ, ಸರಸ ಸಂಭಾಷಣೆಗಳನ್ನು ಮಾಡುತ್ತ ನೂರಾರು ಮೈಲಿ ಪ್ರಯಾಣಿಸುತ್ತಿದ್ದೆವು. ಜೊತೆಯಲ್ಲಿಯೇ ಕೂಡಿಸಿಕೊಂಡು ಪೂಜೆ, ಪ್ರಸಾದ ಮಾಡಿಸುತ್ತಿದ್ದರು ಮತ್ತು ಅವರು ಯಾವುದೇ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ತಮ್ಮ ಭಾಷಣವನ್ನು ಶುರು ಮಾಡಬೇಕಾದರೂ ಕೆಳಕಂಡ ಸಂಸ್ಕೃತ ಶ್ಲೋಕವನ್ನು ಪಠಿಸುತ್ತಿದ್ದರು.

> ಯತ್ರೈವ ಯತ್ರೈವ ಶಿರೋಮದೀಯಂ  
> ತತ್ರೈವ, ತತ್ರೈವ ಪದದ್ವಯಂತೇ  
> ಯತ್ರೈವ ಯತ್ರೈವ ಮನೋಮದೀಯಂ  
> ತತ್ರೈವ, ತತ್ರೈವ, ತವಸ್ವರೂಪಂ

ಎಂದು ಎಲ್ಲೆಲ್ಲಿ ನನ್ನ ಶಿರಸ್ಸು ಒರಗುತ್ತದೆಯೋ ಅಲ್ಲಲ್ಲಿ ನಿನ್ನ ಪಾದಕಮಲವಿರಿಸು. ಎಲ್ಲೆಲ್ಲಿ ನನ್ನ ಮನಸ್ಸು ಪ್ರವರ್ತಿಸುತ್ತದೆಯೋ ಅಲ್ಲೆಲ್ಲಾ ನಿನ್ನ ಸ್ವರೂಪದರ್ಶನ ಮಾಡಿಸು ಎಂದು ತಮ್ಮ ಅನುಗ್ರಹ ಭಾಷಣವನ್ನು ಮಾಡುತ್ತಿದ್ದರು. ಇದರಿಂದ ನಾವು ತಿಳಿಯುವುದೇನೆಂದರೆ ಅವರು ಗುರುವಿನ ಮೇಲೆ ಎಷ್ಟು ಭಕ್ತಿಯನ್ನಿಟ್ಟಿದ್ದರು ಎಂಬುದನ್ನು ತಿಳಿಸುತ್ತದೆ. ಮತ್ತು ಪ್ರಪ್ರಥಮವಾಗಿ ಮೈಸೂರು ಜಿಲ್ಲಾ ಮಠಾಧಿಪತಿಗಳ ಗೋಷ್ಠಿಯನ್ನು ಸ್ಥಾಪಿಸಿದರು. ಇದರಿಂದ ಮಠಾಧಿಪತಿಗಳ ಪರಸ್ಪರ ಸ್ನೇಹ ಸಮರಸ, ವಿಶ್ವಾಸ ಮೂಡಿಸುವುದಲ್ಲದೆ, ಸಾಮಾಜಿಕವಾಗಿ ಮಠಗಳು ಯಾವ ಯಾವ ಕೆಲಸವನ್ನು ಮಾಡಬೇಕು ಮತ್ತು ಸಮಾಜಸೇವೆಗೆ ಬದ್ಧ ಕಂಕಣನಾಗಬೇಕು ಎಂಬುದೇ ಇದರ ಉದ್ದೇಶ. ಹಾಗೆ ವೀರಶೈವ ಮಠಾಧಿಪತಿಗಳನ್ನು ಸುಮಾರು ಅರವತ್ತು ಜನ ಮಠಾಧಿಪತಿಗಳನ್ನು ತಮ್ಮ ಜೊತೆಯಲ್ಲಿ ಪ್ರವಾಸವನ್ನು ಮಾಡಿಸಿ ಪುಣ್ಯಕ್ಷೇತ್ರಗಳಿಗೆ, ಪವಿತ್ರ ಸ್ಥಳಗಳಿಗೆ ಮತ್ತು ಸಂತರ ಕ್ಷೇತ್ರದರ್ಶನ ಮಾಡಿಸಿದರು. ಈ ಪ್ರವಾಸದಲ್ಲಿ ಅತ್ಯಂತ ಮುಖ್ಯವಾಗಿ ಒಂದು ವಿಷಯವನ್ನು ನೆನಪಿಸಿಕೊಳ್ಳದಿರಲಾರೆವು. ಅದು ಏನೆಂದರೆ, ನಾವು ಪ್ರವಾಸ ಕಾಲದಲ್ಲಿ ಹೈದರಾಬಾದ್‌ಗೆ ಹೋಗಬೇಕಾಗಿ ಬಂತು. ಅಲ್ಲಿ ಆಗ ಎಚ್. ವೀರಭದ್ರಯ್ಯನವರು ಐ.ಜಿ.ಪಿ.ಯಾಗಿ ಹೈದರಾಬಾದಿನಲ್ಲಿದ್ದರು. ಶ್ರೀ ಜಗದ್ಗುರುಗಳವರ ಆಪ್ತ ಶಿಷ್ಯರೂ ಅತ್ಯಂತ ನಿಷ್ಠರೂ ಆಗಿದ್ದರು. ಗುರುಗಳು ಅಲ್ಲಿಗೆ ಮಠಾಧಿಪತಿಗಳ ಬರುವಿಕೆಯನ್ನು ಅವರಿಗೆ ಮುಂಚಿತವಾಗಿ ಫೋನ್ ಮೂಲಕ ತಿಳಿಸಿದ್ದರು. ಆಗ ಅವರು ಜಗದ್ಗುರುಗಳು ಇರುವ ನಮ್ಮಲ್ಲಿ 60 ಮಂದಿ ಮಠಾಧಿಪತಿಗಳಿಗೂ 3 ದಿವಸ ತಂಗಿಸಿ ಷಡ್ರಸಾನ್ನ ಭೋಜನವನ್ನು ಏರ್ಪಡಿಸಿದ್ದರು. ಅವರಿಂದ ನಾವು ಬಲವಂತವಾಗಿ ಇನ್ನೇನೇನೋ ನೆಪ ಹೇಳಿ ಬಿಡಿಸಿಕೊಂಡು ಬಂದೆವು. ಗುರು ಎಂತಹ ಶಿಷ್ಯರನ್ನು ಸಂಪಾದಿಸಿದ್ದರು. ಮತ್ತು ಅವರು ಎಲ್ಲಾ ಮಠಾಧಿಪತಿಗಳಿಗೂ ಬರುವ ದಿವಸ ಪಂಚೆ,



ಟವಲ್, ಕಾಣಿಕೆ, ಹೂವು, ಹಣ್ಣುಗಳನ್ನು ಪ್ರತಿಯೊಬ್ಬರಿಗೂ ತರಿಸಿಕೊಟ್ಟರು. ದೊಡ್ಡ ಬಂಗಲೆಯಲ್ಲಿ ನಮಗೆ ಆಶ್ರಯ ನೀಡಿ, 60 ಮಂಚ, 60 ಹಾಸಿಗೆ, ದಿಂಬು ಎಲ್ಲವೂ ಹೊಸದನ್ನು ತರಿಸಿದ್ದರು. ಎಂತಹ ಸೇವೆ ಅವರದು. ಗುರುಗಳಿಗೆ ಬರುವ ದಿವಸ ಪಾದಪೂಜೆ ಮಾಡಿ, ಅತ್ಯಂತ ವೈಭವದಿಂದ ಪ್ರಸಾದವನ್ನು ನೀಡಿ ನಮ್ಮನ್ನೆಲ್ಲಾ ಬೀಳ್ಕೊಟ್ಟರು. ಪ್ರವಾಸ ಹೋದ ಕಡೆಯಲೆಲ್ಲ ಮೊದಲು ಮಠಾಧಿಪತಿಗಳಿಗೆ ವ್ಯವಸ್ಥೆ ಮಾಡಿಸಿ ತಾವು ಪೂಜೆ ಪ್ರಸಾದವನ್ನು ತೆಗೆದುಕೊಳ್ಳುತ್ತಿದ್ದರು. ಇದರಿಂದ ಎಷ್ಟು ಉದಾರಚರಿತರು, ಉದಾರಚರಿತನಾಂತು ವಸುಧೈವ ಕುಟುಂಭಕಂ ಎಂದು ಹೇಳಿದ ಹಾಗೆ ಎಷ್ಟು ಉದಾರ ಗುಣಗಳಿದ್ದವು ಎಂಬುದನ್ನು ತೋರಿಸುತ್ತಿತ್ತು. ಹಿಂದೆ ಆದಿಗುರು ಭಗವತ್ಪಾದರ ಜಯಂತಿಯನ್ನು ಮೊದಲು ಈಗಿನ ಆಸ್ಪತ್ರೆ ಇರುವ ಜಾಗದಲ್ಲಿ ನಡೆಯಿಸಲಾಗುತ್ತಿತ್ತು. ಆವಾಗ ಒಂದು ಜಯಂತಿಯಲ್ಲಿ ಶ್ರೀ ಭಗವತ್ಪಾದರ ಜಯಂತ್ಯೋತ್ಸವವನ್ನು ನನ್ನ ಕೈಯಲ್ಲಿ ಉದ್ಘಾಟನೆ ಮಾಡಿಸಿದರು. ಅಂದು ಗುರುಗಳ ಸಾನ್ನಿಧ್ಯ, ಕುವೆಂಪುರವರ ಅಧ್ಯಕ್ಷತೆ ಮತ್ತು ಜನಪದ ಸಾಹಿತಿ ತರಿಕೆರೆ ಮಲ್ಲಪ್ಪನವರ ಭಾಷಣವಿತ್ತು. ಯಾವ ಮಠಾಧಿಪತಿಯಾಗಲಿ ಜ್ಞಾನ ಬೆಳೆಸಿಕೊಳ್ಳಲಿ ಎಂಬ ಉದ್ದೇಶವೇ ಅಡಗಿತ್ತು. ಮತ್ತು ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಅಖಿಲ ಭಾರತ ವೀರಶೈವ ಮಠಾಧೀಶ್ವರ ಗೋಷ್ಠಿಗೆ ನಮ್ಮಲ್ಲಿನ 50ಕ್ಕೂ ಹೆಚ್ಚು ಮಿಗಿಲಾಗಿ ಮಠಾಧಿಪತಿಗಳನ್ನು ಜೊತೆಯಲ್ಲಿ ಕರೆದುಕೊಂಡು ಮೈಸೂರು ಸೀಮೆಯ ಮಠಾಧಿಪತಿಗಳ ಪರಸ್ಪರ ಸ್ನೇಹ ಸೌಹಾರ್ದದಿಂದ ಕೂಡಿರುತ್ತಾರೆ ಎಂಬುದನ್ನು ಅಲ್ಲಿ ಮನಗಾಣಿಸಿಕೊಟ್ಟರು. ಒಮ್ಮೆ ಹುಬ್ಬಳ್ಳಿಗೆ ಹೋಗುವಾಗ ನನ್ನನ್ನು ಮತ್ತು ಕುಂದೂರು ಮಠದ ಶ್ರೀಗಳನ್ನು ತಮ್ಮ ಕಾರಿನಲ್ಲೇ ಕರೆದುಕೊಂಡು ಹೋಗುತ್ತಿದ್ದರು. ಆಗ ರಾಣಿಬೆನ್ನೂರು ಹತ್ತಿರ ಒಬ್ಬ ಜಂಗಮರು ಕಾಲ್ನಡಿಗೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಆಗ ಡ್ರೈವರ್‌ಗೆ ಕಾರನ್ನು ತಟ್ಟನೆ ನಿಲ್ಲಿಸೆಂದರು. ನಾವೆಲ್ಲರು ಏಕೆಂದು ನೋಡಿದರೆ ಜಂಗಮರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ನಮಗೆ ಕಂಡರು. ಆಗ ಗುರುಗಳು ಅವರನ್ನು ಹತ್ತಿರಕ್ಕೆ ಕರೆದು ನಡೆದು ಏಕೆ ಹೋಗುತ್ತಿದ್ದೀರಿ ಎಂದು ಕೇಳಿದಾಗ ಅವರು ಬಸ್‌ಗೆ ದುಡ್ಡಿಲ್ಲವೆಂದರು. ಎಲ್ಲಿಗೆ ಎಂದು ಕೇಳಿದರು. ಅದಕ್ಕೆ ಅವರು ಮೈಸೂರಿಗೆ ಎಂದು ಹೇಳಿದರು. ಆಗ ಕ್ಯಾತನಹಳ್ಳಿ ಶ್ರೀಗಳವರಿಗೆ ಅವರಿಗೆ ಬಸ್ ಛಾರ್ಜು ಕೊಟ್ಟು ಕಳುಹಿಸಿ ಎಂದು ಆಜ್ಞಾಪಿಸಿದರು. ಹೀಗೆ ಅವರು ಬಡಬಗ್ಗರನ್ನು ಕಂಡರೆ ಎಷ್ಟು ಉದಾರವಾಗಿ ನಡೆದುಕೊಳ್ಳುತ್ತಿದ್ದರು ಎಂಬುದನ್ನು ನಾವು ಪ್ರತ್ಯಕ್ಷ ನೋಡಿರುವೆವು. ಮತ್ತು ಮೈಸೂರು ಜಿಲ್ಲೆಯ ಮಠಾಧಿಪತಿಗಳ ಗೋಷ್ಠಿಯನ್ನು ಸ್ಥಾಪಿಸಿದರು. ಇದರಿಂದ ಪ್ರತಿಯೊಬ್ಬ ಮಠಾಧಿಪತಿಗಳು ತಮ್ಮ ಕುಂದುಕೊರತೆಗಳನ್ನು ಸಮಾಜಮುಖಿ ಕೆಲಸವನ್ನು ಪ್ರಸ್ತಾಪಿಸಲು ಅನುವುಮಾಡಿಕೊಟ್ಟರು. ಹಾಗೆಯೇ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು 1986ರಲ್ಲಿ ಸಂಸ್ಥಾಪಿಸಿ ಹರಸಿದರು. ಇದರಿಂದ ಮಾನವ ಧರ್ಮದ ಶಾಶ್ವತ ಮೌಲ್ಯಗಳನ್ನು ವಿಶಿಷ್ಟವಾದ ಶರಣ ಸಾಹಿತ್ಯ ಸಂಶೋಧನೆ ಸಂಪಾದನೆ, ಸಂರಕ್ಷಣೆ, ಪ್ರಕಾಶನ ನಡೆಯಬೇಕೆಂಬುದು ಅವರ

ಉದ್ದಿಶ್ಯವಾಗಿತ್ತು. ಎರಡನೆಯದಾಗಿ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಇದೇ ಸಂದರ್ಭದಲ್ಲಿ ಸ್ಥಾಪಿಸಿದರು. ಕೆಲವು ಸಂದರ್ಭಗಳಲ್ಲಿ ಅಸ್ವಸ್ಥರಾದಾಗ ತಾವು ಒಪ್ಪಿಕೊಂಡಿದ್ದ ಕೆಲವು ಪೂಜಾ ಕಾರ್ಯಕ್ರಮಗಳಿಗೆ ಅಂದು ನಾವು ಹೋಗಿ ನೆರವೇರಿಸುವಂತೆ ಅಪ್ಪಣೆ ಕೊಡುತ್ತಿದ್ದರು. ಇದರಿಂದ ಎಲ್ಲರೊಡನೆ ಸಮಾನತೆಯನ್ನು ಕಂಡುಕೊಂಡಿದ್ದರು. ಸ್ಕೂಲು, ಕಾಲೇಜು, ತಾಂತ್ರಿಕ ವಿಜ್ಞಾನ, ವೈದ್ಯಕೀಯ ಹೀಗೆ ಹೇಳುತ್ತಾ ಹೋದರೆ ನೂರಾರು. ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ವಿದ್ಯಾಸಂಸ್ಥೆಯು ಎಷ್ಟು ಬೆಳೆದಿದೆ ಎಂದರೆ ಊಹಿಸಲು ಸಾಧ್ಯವೇ ಇಲ್ಲ. ಅಲ್ಲದೆ ಇಂದಿನ ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರು ತುಂಬಾ ವಿಶಾಲವಾದ ದೃಷ್ಟಿಕೋನವನ್ನು ಹೊಂದಿರುವವರು. ಇಂದು ವಿಶ್ವವೇ ಅವರ ಮನೆ, ವಿಶ್ವಕುಟುಂಬಿಯಾಗಿದ್ದಾರೆ. ಆತ್ಮಜ್ಞಾನ, ವಿಜ್ಞಾನ ಎರಡನ್ನೂ ಸಹ ಜೊತೆಯಲ್ಲಿಯೇ ಬೆಳೆಸುತ್ತಾ ಬಂದಿದ್ದಾರೆ. ಸರ್ಕಾರ ಇವರಿಗೆ ಪರಿಗಣಿತ ವಿಶ್ವವಿದ್ಯಾನಿಲಯಕೊಟ್ಟಿದ್ದು ಇವರ ಕಾಲದ ಒಂದು ಮಹತ್ವವಾದ ಸಾಧನೆ ಎಂದು ಹೇಳಬೇಕು. ಎಲ್ಲಾ ವಿದ್ಯಾರ್ಥಿನಿಲಯಗಳು ಕಾಲೇಜುಗಳು ಎಷ್ಟು ಯಾವಾಗ ಎಂಬುದು ಎಲ್ಲರಿಗೂ ತಿಳಿದ ವಿಷಯ ಆಗಿರುವುದರಿಂದ. ಈ ಪೀಠದ ಎಲ್ಲ ಗುರುಗಳಿಗೆ ನನ್ನ ಅನಂತ ನಮನಗಳನ್ನು ಸಲ್ಲಿಸಿ ಮುಗಿಸುತ್ತೇನೆ. □

ಭಕ್ತಿ ಎಂತಹದಯ್ಯಾ?
ದಾಸಯ್ಯ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ?
ಸಿರಿಯಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ?
ಸಿಂಧುಬಲ್ಲಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ? ಕೂಡಲಸಂಗಮದೇವಾ,
ನೀ ಬಾಣನ ಬಾಗಿಲ ಕಾಯ್ದಂತಹದಯ್ಯಾ.

**ಬಸವಣ್ಣ**

# ಮಹಾನ್ ಜಂಗಮಪ್ರೇಮಿ ಜಗದ್ಗುರುವರರು

**ಶ್ರೀ ಶಿವಲಿಂಗಸ್ವಾಮಿಗಳು (ಮೇದಿನಿ ಸ್ವಾಮಿಗಳು)**
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಸಿದ್ಧಗಂಗಾ ಶ್ರೀಕ್ಷೇತ್ರ

ಪರಮ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ನಾವು ಪ್ರಥಮವಾಗಿ ಭೇಟಿಯಾದದ್ದು 1967ರಲ್ಲಿ ನಮ್ಮ ಹತ್ತೊಂಬತ್ತನೆಯ ವಯಸ್ಸಿನಲ್ಲಿ. ಅವರಾಗಲೇ ತಮ್ಮ ಅಪಾರ ಸಾಧನೆ ಸಿದ್ಧಿಗಳಿಂದಾಗಿ ನಾಡಿನ ಹಲವಾರು ಜನರ ಮನಸ್ಸನ್ನು ಗೆದ್ದವರಾಗಿದ್ದರು. ಹಲವಾರು ಸಾಧು ಸಂತರ ಬಗ್ಗೆ ನಾವು ಓದಿ ತಿಳಿದಿದ್ದೇವೆ, ಕೇಳಿ ತಿಳಿದಿದ್ದೇವೆ. ಆದರೆ ನಾವು ನೋಡಿ ತಿಳಿದ ಹಲವು ಮಹಾನುಭಾವರಲ್ಲಿ ಪರಮ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಒಬ್ಬರು. ಇಂತಹ ಮಹಾನ್ ಸಂತರನ್ನು ನಾವು ಕಣ್ಣಾರೆ ಕಾಣುವಂತೆ ಅವಕಾಶ ಮಾಡಿಕೊಟ್ಟವರು ಸಿದ್ಧಗಂಗಾ ಶ್ರೀಕ್ಷೇತ್ರದ ಮಠಾಧ್ಯಕ್ಷರಾದ ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು. ನಮ್ಮ ಬಾಲ್ಯದ ಕಾಲದಲ್ಲಿ ಇವರ ಕೃಪೆ ನಮ್ಮ ಮೇಲಾಗದಿದ್ದರೆ ನಾವು ನಾಡಿನ ಯಾವ ಪುಣ್ಯಪುರುಷರನ್ನೂ ಕಣ್ಣಾರೆ ಕಾಣಲಾಗುತ್ತಿರಲಿಲ್ಲ ಎಂಬುದೊಂದು ಸತ್ಯಸ್ಯಸತ್ಯವಾದ ಸಂಗತಿಯಾಗಿದೆ. 'ಹೂವಿನಿಂದಾಗಿ ನಾರೂ ಸ್ವರ್ಗ ಸೇರಿತು' ಎನ್ನುವ ನಾಣ್ನುಡಿಯಂತೆ ಈ ಪುಣ್ಯಾತ್ಮರಿಂದ ಆ ಪುಣ್ಯಾತ್ಮರನ್ನು ಕಾಣುವಂತಾದ್ದು ನಮ್ಮ

ಪುಣ್ಯವಿಶೇಷವೆಂದೇ ಹೇಳಿಕೊಳ್ಳಬೇಕಾಗಿದೆ. ಹಾಗಾಗಿ ಅಂದು ಮತ್ತು ಮುಂದೆ ಅನೇಕ ಬಾರಿ ಪರಮ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ನಾವು ಕಾಣುವಂತಾಗಲು ಸಾಧ್ಯವಾದುದರ ಹಿನ್ನೆಲೆಯಲ್ಲಿ ಕೆಲವೊಂದು ವಿಚಾರಗಳನ್ನು ಸ್ಥೂಲವಾಗಿಯಾದರೂ ಪ್ರಾಸಂಗಿಕವಾಗಿ ಹೇಳಿಕೊಳ್ಳಲೇಬೇಕಾಗಿದೆ.

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕು ಮೇದಿನಿ ಗ್ರಾಮದಲ್ಲಿ 1948ರಲ್ಲಿ ಜನಿಸಿದ ನಾವು ನಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸ್ವಗ್ರಾಮದಲ್ಲೂ, 5 ರಿಂದ 8 ನೆಯ ತರಗತಿವರೆಗೆ ಬೆಳಕವಾಡಿಯ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲೂ, ಅನಂತರ ತಲಕಾಡಿನಲ್ಲಿ ಆಗ್ಗೆ ಇದ್ದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೌಢಶಾಲೆಯಲ್ಲಿ ಪ್ರಥಮ ವರ್ಷದ ವಿದ್ಯಾಭ್ಯಾಸವನ್ನು ಮಾಡಿದ್ದೆವು. ಮುಂದೆ ಕನಕಪುರದ ದೇಗುಲಮಠಕ್ಕೆ ಹೋಗಿ ತಂಗಿ ಅಲ್ಲಿನ ರೂರಲ್ ಹೈಸ್ಕೂಲ್‌ನಲ್ಲಿ ಒಂಬತ್ತನೆಯ ತರಗತಿಗೆ ಪ್ರವೇಶ ಪಡೆದಿದ್ದೆವು. ಆಗ್ಗೆ ಈ ಮಠದಲ್ಲಿದ್ದ ಮಹಾಲಿಂಗ ಸ್ವಾಮಿಗಳವರು ಮಹದೇಶ್ವರ ಬೆಟ್ಟದಲ್ಲಿ ಆಗತಾನೆ ಪ್ರಾರಂಭವಾಗಿ ಎರಡು ವರ್ಷ ಕಳೆದಿದ್ದ ಶ್ರೀ ಮಹದೇಶ್ವರ ಪ್ರೌಢಶಾಲೆಯಲ್ಲಿ ಓದುವಂತೆ ಅಪ್ಪಣೆಯಿತ್ತು ಕಳುಹಿಸಿಕೊಟ್ಟಿದ್ದರು. ಅಲ್ಲಿ ಒಂಬತ್ತನೆಯ ತರಗತಿ ಮುಗಿಸಿದೆವು. 1964-65-66 ನೆಯ ಸಾಲಿನಲ್ಲಿ ದೇಶದಲ್ಲಿ ದೊಡ್ಡ ಕ್ಷಾಮ ಅಡರಿತ್ತು. ದುಡ್ಡು ಕೊಟ್ಟರೂ ರೇಷನ್ ಸಿಗುವುದು ದುಸ್ತರವಾಗಿದ್ದಿತು. ಆಗತಾನೆ ಪ್ರಾರಂಭವಾಗಿ ಎರಡು ವರ್ಷ ಕಳೆದಿದ್ದ ಈ ಮಹದೇಶ್ವರ ಪ್ರೌಢಶಾಲೆಯಲ್ಲಿ ಹತ್ತನೆಯ ತರಗತಿ ಪ್ರಾರಂಭವಾಗಲೇ ಇಲ್ಲ. ಅನಿವಾರ್ಯವಾಗಿ ಊರಿಗೆ ವಾಪಸ್ಸಾದೆವು.

ನಮ್ಮ ವಿದ್ಯಾಭ್ಯಾಸ ಇಷ್ಟಕ್ಕೇ ಕೊನೆಯೆಂದುಕೊಂಡಿದ್ದೆವು. ಆದರೆ ನಮ್ಮ ಹಿರಿಯ ಗುರುಗಳಾದ ಶ್ರೀ ಶಿವಲಿಂಗಸ್ವಾಮಿಗಳು (ನಮ್ಮ ಮಠದಲ್ಲಿ ಸ್ವಾಮಿಗಳಾದವರನ್ನೆಲ್ಲ ಶಿವಲಿಂಗಸ್ವಾಮಿಗಳೆಂದೇ ಕರೆಯುವ ವಾಡಿಕೆ ಇದೆ) ಸಿದ್ಧಗಂಗಾ ಶ್ರೀಕ್ಷೇತ್ರದ ಮಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳಿಗೆ ನಮ್ಮ ವಿದ್ಯಾಭ್ಯಾಸ ಮುಂದುವರೆಯುವಿಕೆಗೆ ಅವಕಾಶ ಮಾಡಿಕೊಡಬೇಕೆಂದು ಕೋರಿ ಪತ್ರ ಬರೆದಿದ್ದರು. ಮೂರೇ ದಿನಕ್ಕೆ ಆ ಕಡೆಯಿಂದ ಶ್ರೀಗಳವರು ಒಪ್ಪಿಗೆ ಸೂಚಿಸಿ ಬರೆದಿದ್ದ ಪತ್ರವೂ ಬಂದಿತು. ಈ ಪತ್ರ ಬಂದ ಮಾರನೆಯ ದಿನವೆ ನಮ್ಮ ಹಿರಿಯ ಗುರುವರರು ಲಿಂಗೈಕ್ಯರಾಗಿಹೋದರು. ಬಹುಶಃ ಬಹು ಸಂಕಷ್ಟ ಸಮಯದಲ್ಲಿ ಅತ್ಯಂತ ಸೂಕ್ತ ಸ್ಥಳಕ್ಕೆ ತಮ್ಮ ಭಾವೀ ಮಠಾಧಿಪತಿ ಸೇರುವಂತಾಯಿತಲ್ಲ ಎನ್ನುವ ಆನಂದದ ತುರೀಯಾವಸ್ಥೆಯನ್ನು ಮುಟ್ಟಿಯೇ ಅವರು ಲಿಂಗೈಕ್ಯರಾಗಿಬಿಟ್ಟಿದ್ದ ರೆಂಬುದೇ ನಮ್ಮ ಇಂದಿನ ಅನಿಸಿಕೆಯಾಗಿದೆ.

ಅದು ಆಷಾಢಮಾಸ. ಮಠ ಶೂನ್ಯ ಬೀಳಬಾರದೆಂಬ ಸಂಪ್ರದಾಯದಂತೆ ನಮ್ಮ ಹಿರಿಯರು ಕಗ್ಗಲಿಪುರದ ಮಠಾಧ್ಯಕ್ಷರಾಗಿದ್ದ ಶ್ರೀ ಕರಿಬಸವ ಸ್ವಾಮಿಗಳಿಂದ ನಮಗೆ ಆಶ್ರಮೋಪದೇಶ ಒದಗಿಸಿ ಪಟ್ಟಾಧಿಕಾರ ಕಾರ್ಯವನ್ನು ನೆರವೇರಿಸಿದರು. ಜುಲೈ 1966 ರಂದು ನಮ್ಮ ಹಿರಿಯ ಗುರುಗಳ ಹಾಗು ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ



ಸದಾಶಯದಂತೆ ವಿದ್ಯಾಭ್ಯಾಸ ಮುಂದುವರೆಯಿಸಲು ಸಿದ್ಧಗಂಗಾ ಶ್ರೀಕ್ಷೇತ್ರಕ್ಕೆ ಬಂದೆವು. ನಮ್ಮೆಲ್ಲಾ ಪರಿಸ್ಥಿತಿಯನ್ನು ಅರಿತವರಾಗಿದ್ದ ಪೂಜ್ಯ ಶ್ರೀಗಳವರು ನಮ್ಮ ಮೇಲೆ ತುಂಬಾ ಆಸ್ಥೆವಹಿಸುತ್ತಿದ್ದುದು ನಮ್ಮ ಗಮನಕ್ಕೆ ಬಂದಿತ್ತು. ನಮ್ಮ ಭವಿಷ್ಯವೆಲ್ಲ ರೂಪಿತವಾಗುವುದು ಇವರಿಂದಲೆ ಎಂದುಕೊಂಡವರಾಗಿದ್ದ ನಾವೂ ಕೂಡ ಬಂದಂದಿನಿಂದಲೇ ಪೂಜ್ಯರ ಸೇವೆಯನ್ನು ನಿಷ್ಠೆಯಿಂದ ಮಾಡತೊಡಗಿದ್ದೆವು.

ಆ ವರ್ಷ ಕಳೆದಿತ್ತು. 1967 ರ ಅದೊಂದು ದಿನ ಪೂರ್ವಭಾವಿಯಾಗಿ ನಿಗದಿತವಾಗಿದ್ದಂತೆ ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ಮೈಸೂರಿನಲ್ಲಿರುವ ಸುತ್ತೂರು ಮಠಕ್ಕೆ ಕಾರ್ಯಕ್ರಮವೊಂದರ ನಿಮಿತ್ತ ಹೊರಟಿದ್ದರು. ಹೊರಡುವ ಸಮಯದಲ್ಲಿ ನಮ್ಮನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಅದೇ ಮೊದಲ ಬಾರಿಗೆ ನಾವು ಆ ಮಹಾಭಾಗ್ಯರನ್ನು ನೋಡಲು ಸಾಧ್ಯವಾದುದು. ಅಂದು ನಾವು ಸುತ್ತೂರು ಮಠಕ್ಕೆ ಹೋದಾಗ ಅವರು ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪಾದಕ್ಕೆರಗಿ ಬಹು ಭಕ್ತಿಭಾವದಿಂದ ಸ್ವಾಗತಿಸಿದ್ದುದು, ಆತ್ಮೀಯವಾಗಿ ಸಂಭಾಷಿಸಿದ್ದುದು, ಹೊರಡುವಾಗ ವಿನಯ ಪೂರ್ವಕವಾಗಿ ಸಂಭಾಳಿಸಿ ಬೀಳ್ಕೊಟ್ಟುದು – ಈ ಎಲ್ಲವನ್ನೂ ಗಮನಿಸುತ್ತಿದ್ದ ನಮಗೆ ಅದೇನೇನೋ ಹೊಸ ಹೊಸ ವಿಚಾರಗಳು ಹೊಳೆಯಲಾರಂಭಿಸಿ ನಾವು ನಿಬ್ಬೆರಗಿಗೊಳ ಗಾಗಿದ್ದೆವು; ದಿಙ್ಮೂಢರಾಗಿದ್ದೆವು. ಒಂದು ಘನತೆ ಮತ್ತೊಂದು ಘನತೆಯನ್ನು ಗುರುತಿಸಿ, ಗೌರವಿಸುವುದರಲ್ಲಿ ಹೇಗೆ ಆನಂದ ತುಂದಿಲತೆಯಲ್ಲಿರು ತ್ತದೆ ಎಂಬುದನ್ನು ನಾವು ಕಣ್ಣಾರೆ ಕಂಡುಂಡದ್ದು ಅದೇ ಸಂದರ್ಭದಲ್ಲಿ.

ಕಿರಿಯರಾದ ನಮ್ಮ ಪೂರ್ವಾಪರಗಳ ಬಗ್ಗೆಯೂ ಕೇಳಿ ತಿಳಿದು ಪ್ರೀತ್ಯಾದರಗಳಿಂದ ಮಾತನಾಡಿಸಿದ್ದಂತೂ ವೈಯಕ್ತಿಕವಾಗಿ ನಮಗೆ ತುಂಬಾ ಮುದ ನೀಡಿತ್ತು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಹೀಗೆ ಅವರ ಪರಿಚಯಕ್ಕೆ ಬಂದಿದ್ದ ನಾವು ಮತ್ತೊಂದು ಸಂದರ್ಭದಲ್ಲಿ ಭೇಟಿಯಾಗಿದ್ದಾಗ ನಮ್ಮನ್ನು ತಮ್ಮ ಬಳಿ ಕರೆದು "ಒಳ್ಳೆಯ ಕ್ಷೇತ್ರದ ಶ್ರೇಷ್ಠ ಗುರುವರರ ಸನ್ನಿಧಿಯಲ್ಲಿದ್ದೀರಿ. ಅಂತಹವರು ಸಿಗುವುದು ದುರ್ಲಭ. ಅವರ ಸೇವೆ ಮಾಡುವ ಅವಕಾಶ ದೊರೆತಿರುವುದು ನಿಮ್ಮ ಪುಣ್ಯವಿಶೇಷ. ನಿಷ್ಠೆಯಿಂದ ಅವರ ಸೇವೆ ಮಾಡಿ, ಅವರ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಎಚ್ಚರಿಕೆಯಿಂದ ತಪ್ಪದೆ ಪರಿಪಾಲಿಸಿ, ಚೆನ್ನಾಗಿ ಓದಿ, ಅವರ ಕೃಪೆಯಿಂದ ಖಂಡಿತವಾಗಿಯೂ ನಿಮಗೆ ಉನ್ನತ ಸ್ಥಾನಮಾನಗಳು ದೊರಕುತ್ತವೆ. ನಿಮ್ಮ ಜೀವಿತ ಸಾರ್ಥಕವಾಗುತ್ತದೆ" ಎಂದೆಲ್ಲಾ ತಿಳಿವಳಿಕೆ ನೀಡಿದ್ದರು. ಅನೇಕ ಕತ್ತಲೆಯ ತಿರುವುಗಳನ್ನು ದಾಟಿ ಬಂದಿದ್ದ ನಮಗೆ ಅವರ ಈ ಮಾತುಗಳು ಬಹು ಪ್ರಿಯವಾಗಿ ಕಂಡು ಬಂದಿದ್ದವು, ಬೆಳಕು ಬೀರುವಂತಹವುಗಳಾಗಿದ್ದವು. ಹಾಗಾಗಿ ಅವುಗಳನ್ನು ಗಂಭೀರವಾಗಿ ಪರಿಗಣಿಸಿ, ಗೌರವದಿಂದ ಸ್ವೀಕರಿಸಿ ಮನಸ್ಸಿನ ಮೂಲೆಯೊಂದರಲ್ಲಿರಿಸಿಕೊಂಡಿದ್ದೆವು. ಈಗಲೂ

ಸಮಯಾನುಸಾರ ಅವುಗಳು ನೆನಪಿಗೆ ಬರುತ್ತಿರುತ್ತವೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಖಾಸಗಿಯಾಗಿ ಕಟ್ಟಿ ಪಾಸಾಗಿದ್ದ ನಾವು ಶ್ರೀ ಸಿದ್ಧಗಂಗಾ ವೇದ ಮತ್ತು ಸಂಸ್ಕೃತ ಕಾಲೇಜಿನಲ್ಲಿ ಹತ್ತೊಂಬತ್ತು ವರ್ಷಗಳ ಕಾಲ ಅಧ್ಯಯನ ನಡೆಯಿಸಿ ಎರಡು ವಿದ್ವತ್ತುಗಳನ್ನು (ಶಕ್ತಿವಿಶಿಷ್ಟಾದ್ವೈತ ವಿದ್ವತ್ತು – ಅಲಂಕಾರ ವಿದ್ವತ್ತು) ಮಾಡಿ ಅಲ್ಲೇ ಉಪ ಪ್ರಧ್ಯಾಪಕ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವಂತಾದೆವು. ಈ ಘಟ್ಟ ತಲುಪಿದ್ದ ಮಗದೊಂದು ಸಂದರ್ಭದಲ್ಲಿ ಭೇಟಿಯಾಗಿದ್ದಾಗ "ವೃತ್ತಿ ದೃಷ್ಟಿಯಿಂದ ನೀವು ಮೈಸೂರಿಗೆ ಬರುವುದಾದರೆ ಬನ್ನಿ, ಊರಿಗೆ ಹತ್ತಿರವಾಗುತ್ತದೆ. ನಿಮ್ಮ ಗುರುಗಳು ಅನ್ಯಥಾಭಾವಿಸದಂತೆ ಅವರಲ್ಲಿ ಮಾತನಾಡುತ್ತೇವೆ" ಎಂದಿದ್ದರು. ಆದರೆ ಅದಕ್ಕೆ ನಮ್ಮ ಮನಸ್ಸು ಒಪ್ಪದೆ ಸುಮ್ಮನಾಗಿದ್ದೆವು. ನಮ್ಮ ಬಗ್ಗೆ ಅವರಿಗೆ ಎಂತಹ ಕಾಳಜಿ ಇತ್ತು ಎನ್ನುವುದಕ್ಕೆ ಇದೊಂದು ಸ್ಪಷ್ಟ ಉದಾಹರಣೆಯಾಗಿದೆ.

1985 ರಲ್ಲಿ ನಾವು ನಮ್ಮ ಮೇದಿನಿ ಮಠದ ನೂತನ ಕಟ್ಟಡ ಕಟ್ಟಲು ಪ್ರಾರಂಭಿಸಿದ್ದೆವು. ಈ ಸಮಯದಲ್ಲೊಮ್ಮೆ ಅದೊಂದು ಸ್ಥಳದಲ್ಲಿ ಭೇಟಿಯಾಗುವ ಅವಕಾಶ ಒದಗಿತ್ತು. ಅಂದು ಮಾತಿನ ಮಧ್ಯೆ ನಾವೇ ಬಾಯ್ಬಿಟ್ಟು "ಮಠದ ಕಟ್ಟಡ ಕೆಲಸ ಪ್ರಾರಂಭಿಸಿದ್ದೇವೆ. ಅದರ ಆರಂಭೋತ್ಸವಕ್ಕೆ ತಾವು ದಯಮಾಡಿಸಬೇಕು" ಎಂದು ಅಲ್ಲೇ ಬಿನ್ನಹ ಹಾಕಿದ್ದೆವು. "ಸಂತೋಷ, ಒಳ್ಳೆಯ ಸುದ್ದಿ. ನಮ್ಮನ್ನು ಖುದ್ದು ಆಹ್ವಾನಿಸಲು ತಾವು ಮತ್ತೊಮ್ಮೆ ಬರುವುದೇನೂ ಬೇಡ, ಆಹ್ವಾನ ಪತ್ರ ತಲುಪಿದರೆ ಸಾಕು" ಎಂದಿದ್ದರು. ನಮ್ಮ ಮಠದ ಕೆಲಸ ಇನ್ನೂ ಮುಗಿದಿರಲಿಲ್ಲ. 1986 ರಲ್ಲಿ ಅವರು ಲಿಂಗೈಕ್ಯರಾಗಿಬಿಟ್ಟರು....ಎನ್ನುತ್ತ ಸಂದರ್ಶಕನಾದ ನನ್ನನ್ನು ಕುರಿತು .... ಮತ್ತೊಮ್ಮೆ ನಮ್ಮನ್ನು ಖುದ್ದು ಆಹ್ವಾನಿಸಲು ಬರುವುದೇನೂ ಬೇಡ, ಆಹ್ವಾನ ಪತ್ರ ತಲುಪಿದರೆ ಸಾಕು ಎಂದಿದ್ದ ಅವರ ಮಾತುಗಳನ್ನು ಗಮನಿಸಿ ಎಂದು ಹೇಳುತ್ತಾ ತಮ್ಮೆರಡು ಕೈಗಳನ್ನು ಮುಖದ ಮೇಲಿರಿಸಿ ನಾಲ್ಕಾರು ಬಾರಿ ಮೇಲೆ ಕೆಳಗೆ ಸವರುತ್ತ ಗದ್ಗದಿತ ಧ್ವನಿಯಲ್ಲಿ ಮತ್ತೊಮ್ಮೆ.... ಆ ಮಾತುಗಳನ್ನು ಗಮನಿಸಿ.... ಗಮನಿಸಿ ಎಂಬ ದ್ವಿರುಕ್ತಿ ಶಬ್ದವನ್ನು ಉಚ್ಚರಿಸಿದ್ದರು.

ಮತ್ತೆ ತಮ್ಮನ್ನು ತಾವೇ ಸಾವರಿಸಿಕೊಂಡು, ಇವಿಷ್ಟು ವಿಚಾರಗಳು ನಾವು ಹೇಳಿಕೊಳ್ಳಲೇ ಬೇಕಾಗಿದ್ದವು. 1967 ರಿಂದ 1985 ರವರೆಗೆ ಸುಮಾರು ಹತ್ತೊಂಬತ್ತು ವರ್ಷಗಳ ಅವಧಿಯಲ್ಲಿ ನೂರಾರು ಬಾರಿ ವಿವಿಧ ಸಂದರ್ಭ, ಸನ್ನಿವೇಶಗಳಲ್ಲಿ ನಾವವರನ್ನು ನೋಡಿದ್ದೇವೆ. ಸುಪ್ರಸಿದ್ಧ ಮಠದ ಗುರುಪರಂಪರೆಯಲ್ಲಿ ಬಂದವರಾಗಿದ್ದು, ತಮ್ಮ ಅವಿರತ ಪರಿಶ್ರಮದಿಂದ ಬಹು ಅರ್ಥಪೂರ್ಣವೂ, ಅಮೂಲ್ಯವೂ ಆದ ಸಾಧನೆ ಸಿದ್ಧಿಗಳಿಂದ ಲಕ್ಷಾಂತರ ಜನರ ಮನದಲ್ಲಿ ನೆಲೆಸಿದ್ದವರಾಗಿದ್ದರೂ ಸ್ವಲ್ಪವೂ ಹಮ್ಮು-ಬಿಮ್ಮುಗಳಿಲ್ಲದ ನೆಲೆಯಲ್ಲಿ, ಸದಾ ಹಸನ್ಮುಖಿಗಳಾಗಿ, ಎಲ್ಲರೊಡನೆಯೂ ಅವರು ವ್ಯವಹರಿಸುತ್ತಿದ್ದ ರೀತಿ ಅವರನ್ನು ಬಲ್ಲ ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ವಿಶೇಷವಾಗಿ ಜಂಗಮರನ್ನು ಕಂಡಾಗ ಅವರು



ಹಿರಿಯ ಕಿರಿಯರೆನ್ನದೆ ಎಲ್ಲರನ್ನೂ ಬಾಯ್ತುಂಬ ಬಹು ವಚನ ಶಬ್ದಗಳೊಡನೆಯೇ ಮಾತನಾಡುತ್ತಿದ್ದವರಾಗಿದ್ದರು. ನಿಜಕ್ಕೂ ಅವರೊಬ್ಬ ಮಹಾನ್ ಜಂಗಮ ಪ್ರೇಮಿ ಜಗದ್ಗುರುವರರು.

ಅಂದ ಹಾಗೆ ಅಂತಿಮವಾಗಿ ಒಂದು ಮಾತು: ನಮ್ಮ ಪೂಜ್ಯ ಗುರುವರರಾದ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಅದೊಂದು ಸಮಯದಲ್ಲಿ ಮೈಸೂರಿನ ಅರಮನೆ ಪಂಚಗವಿ ಮಠದ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರನ್ನು ಸ್ಮರಿಸಿಕೊಂಡು "ಪೂಜ್ಯ ಗೌರೀ ಶಂಕರ ಮಹಾಸ್ವಾಮಿಗಳು ನಮ್ಮನ್ನು ಹಾಗು ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ತಮ್ಮೆರಡು ಕಣ್ಣುಗಳು ಎನ್ನುತ್ತಿದ್ದರು" ಎಂದು ಹೇಳಿದ್ದುದು ಜ್ಞಾಪಕಕ್ಕೆ ಬರುತ್ತಿದೆ. ಅವರ ಘನ ವ್ಯಕ್ತಿತ್ವವನ್ನು ವಿವರಿಸಲು ಮತ್ತಾವ ಮಾತುಗಳು ತಾನೇ ಬೇಕಾಗಿವೆ ಹೇಳಿ!?

ಪರಮ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಕಣ್ಣಾರೆ ಕಾಣುವಂತಾಗಲು ಕಾರಣರಾದ ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ಹಾಗು ಈ ಸಮಯದಲ್ಲಿ ಪರಮ ಪೂಜ್ಯರೇ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಸ್ಮರಿಸಲು ಈ ಮೂಲಕ ಸದವಕಾಶ ಕಲ್ಪಿಸಿಕೊಟ್ಟಿರುವ ಅವರ ಕರಕಮಲಸಂಜಾತರಾಗಿರುವ ಪ್ರಸ್ತುತದ ಸುತ್ತೂರು ಶ್ರೀಕ್ಷೇತ್ರದ ಶ್ರೀ ವೀರಸಿಂಹಾಸನ ಮಠದ ಜಗದ್ಗುರುವರರಾದ ಪರಮ ಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಪಾದ ಚರಣಂಗಳಿಗೆ ನಮ್ಮ ಸಾಷ್ಟಾಂಗ ಪ್ರಣಾಮಗಳು.

□

ಹೊತ್ತಾರೆ ಎದ್ದು ಶಿವಲಿಂಗದೇವನ
ದೃಷ್ಟಿ(ಯಾ) ರೆ ನೋಡದವನ ಸಂಸಾರವೇನವನ?
ಬಾಳುವೆಣನ ಬೀಳುವೆಣನ ಸಂಸಾರವೇನವನ?
ನಡೆವೆಣನ ನುಡಿವೆಣನ ಸಂಸಾರವೇನವನ?
ಕರ್ತು ಕೂಡಲಸಂಗಮದೇವಾ,
ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

**ಬಸವಣ್ಣ**

# ನಮ್ಮನ್ನುದ್ಧರಿಸಿದ ಮಹಾನ್ ಜಗದ್ಗುರುವರರು

**ಶ್ರೀ ಸೋಮಶೇಖರಸ್ವಾಮಿ**
ಅಧ್ಯಕ್ಷರು, ಗುರುವಿದ್ಯಾವಿಕಾಸ ವಿದ್ಯಾಸಂಸ್ಥೆ
ಮೈಸೂರು

ಪ್ರಸ್ತುತ ಮೈಸೂರಿನಲ್ಲಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಂಗಸಂಸ್ಥೆಗಳಲ್ಲೊಂದಾಗಿರುವ ಜೆಎಸ್‌ಎಸ್ ಪ್ರಕಟಣಾ ವಿಭಾಗದಲ್ಲಿ ಉದ್ಯೋಗಿಯೂ ಆಗಿರುವ ನಾವು ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಸ್ವಾಮಿಗಳವರನ್ನು ಪ್ರಥಮವಾಗಿ ಕಂಡದ್ದು 1978 ರಲ್ಲಿ. ನಮ್ಮ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ. ಅವರೇ ಕಟ್ಟಿ ಬೆಳೆಯಿಸಿರುವ ಈ ಮಹಾನ್ ಸಂಸ್ಥೆಯ ಈ ವಿಭಾಗಕ್ಕೆ ಮುಂದೊಂದು ದಿನ ಉದ್ಯೋಗಕ್ಕೆ ಬಂದಂತಾದುದೊಂದು ಯೋಗಾಯೋಗದ ಸಂಗತಿಯೂ ಆಗಿದೆ. ನಾವಿಲ್ಲಿಗೆ ಬರುವಂತಾದುದು... ಅವರ ಕೃಪೆಗೆ ಪಾತ್ರರಾದುದು ... ನಮ್ಮ ಸಾಮಾಜಿಕ ಸ್ಥಾನಮಾನಗಳು ಉನ್ನತಿ ಕಂಡಿರುವುದು... ಈ ಎಲ್ಲವುಗಳ ಬಗ್ಗೆ ಚಿಂತನೆ ಮಾಡಿದಾಗಲೆಲ್ಲ ನಮಗೆ ಅಲ್ಲಮಪ್ರಭುವರ್ಯರ "ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ" ಎನ್ನುವ ಮಾತುಗಳು ನೆನಪಿಗೆ ಬರುತ್ತಲೇ ಇರುತ್ತವೆ. ಹೀಗೆನ್ನಲು ಸಾಕಷ್ಟು ಕಾರಣಗಳಿವೆ. ನಾವೂ ಮೈಸೂರು ಜಿಲ್ಲೆಯವರೇ ಆದರೂ ಬಹಳ ಕಾಲದವರೆಗೆ ನಮಗವರ ಬಗ್ಗೆ



ಏನೇನೂ ತಿಳಿದಿರಲಿಲ್ಲ. ಒಂದು ಹಂತದಲ್ಲಿ ಅವರ ವ್ಯಕ್ತಿತ್ವದ ಬಗ್ಗೆ ಹೇಳಿ ಕೇಳುವುದರ ಮೂಲಕ ತಿಳಿದುಕೊಳ್ಳುವಂತಾದೆವು. ಮುಂದೊಮ್ಮೆ ಅವರನ್ನು ಕಣ್ಣಾರೆ ಕಂಡರೂ ಮಾತನಾಡಲಾಗಿರಲಿಲ್ಲ. ಆ ಮುಂದೆ ಅದೊಂದು ಸಂಧಿಕಾಲದಲ್ಲಿ ಅವರ ಕೃಪಾಶ್ರಯಕ್ಕೊಳಗಾಗಿ ಈ ಹಿಂದೆ ತಿಳಿಸಿದಂತೆ ನಮ್ಮ ಬದುಕು ಹಸನಾಗಿ, ನಮ್ಮ ಸಾಮಾಜಿಕ ಸ್ಥಾನಮಾನಗಳು ಉನ್ನತಿ ಕಂಡಿವೆ. ಹಾಗಾಗಿ ಈ ನಾಲ್ಕು ನಿಟ್ಟಿನ ನಮ್ಮ ಅನುಭವಗಳ ಹಿನ್ನೆಲೆಯಲ್ಲಿ ಪರಮಪೂಜ್ಯರ ಬಗ್ಗೆ ನಮ್ಮ ಅನಿಸಿಕೆಗಳನ್ನು ಏನೇನನ್ನೂ ಆರೋಪಿಸದೆ ಸಹಜವಾಗಿ ತದ್ವತ್ತಾಗಿ ಬಿತ್ತರಿಸುವ ಹೆಬ್ಬಯಕೆ ನಮ್ಮದಾಗಿದೆ.

ನಮ್ಮ ವಂಶಜರು ಮೂಲತಃ ಇಂದಿನ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಸೋಮಹಳ್ಳಿಯವರಾಗಿದ್ದರೂ ನಾವು ಮಾತ್ರ ಹುಟ್ಟಿದ್ದು, ಬೆಳೆದದ್ದು, ಬಾಲ್ಯದ ವಿದ್ಯಾಭ್ಯಾಸ (ಒಂಬತ್ತನೆಯ ತರಗತಿವರೆಗೆ) ಮಾಡಿದ್ದು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಕುದರಂಗಿ ಗ್ರಾಮದಲ್ಲಿ. ನಮ್ಮ ಅಜ್ಜ (ತಾಯಿಯ ತಂದೆ) ಬಹಳ ಹಿಂದೆಯೇ ಈ ಊರಿಗೆ ಬಂದವರಾಗಿದ್ದರು. ಚೊಚ್ಚಲ ಹೆರಿಗೆ ನಿಮಿತ್ತ ಇವರ ಬಳಿಗೆ ಬಂದಿದ್ದ ನಮ್ಮ ತಾಯಿ ನಾವು ಜನಿಸಿದ ಸ್ವಲ್ಪ ಸಮಯದಲ್ಲೇ ಕಾಲವಶವಾಗಿದ್ದರು. ಹಾಗಾಗಿ ನಮ್ಮಜ್ಜನ ಮನೆಯವರೇ ನಮ್ಮನ್ನು ಸಾಕಿ ಸಲಹಿದ್ದರು. ಜಂಗಮ ಸಂತತಿಯವರಾದ ನಮಗೆ ಆರು ವರ್ಷವಾಗಿದ್ದಾಗ ನಮ್ಮಜ್ಜ ಜಂಗಮದೀಕ್ಷೆ ಒದಗಿಸಿ, ಲೋಕ ಶಿಕ್ಷಣದ ಜೊತೆಗೆ ಒಂದಿಷ್ಟು ಸಂಸ್ಕೃತಾಭ್ಯಾಸವನ್ನೂ ಮಾಡಿಸಿದ್ದರು. ಒಟ್ಟಾರೆ ಹದಿನೇಳು ವರ್ಷಗಳ ಕಾಲ ನಾವಿಲ್ಲೇ ಇದ್ದೆವು. ಈ ಅವಧಿಯಲ್ಲಿ ನಮಗೆ ಪರಮಪೂಜ್ಯರ ಬಗ್ಗೆ ಏನೇನೂ ತಿಳಿದಿರಲಿಲ್ಲ.

ಹದಿನೆಂಟನೆಯ ವಯಸ್ಸಿನಲ್ಲಿ ಸ್ವಗ್ರಾಮಕ್ಕೆ ಬಂದಿದ್ದ ನಮ್ಮನ್ನು ನಮ್ಮ ತಂದೆಯವರು ಸಂಸ್ಕಾರಬದ್ಧ ನಡೆನುಡಿಗಳನ್ನು ಮೈಗೂಡಿಸಿಕೊಳ್ಳುವಂತಾಗಲಿ ಎಂಬ ದೃಷ್ಟಿಯಿಂದ ದೇವನೂರು ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ಮಠಕ್ಕೆ ಸೇರಿಸಿದ್ದರು. ಕೆಲ ಕಾಲ ಇಲ್ಲಿದ್ದ ನಮ್ಮನ್ನು ಮೂಲ ಸನ್ನಿಧಿಯವರು ಕೊಳ್ಳೇಗಾಲ ತಾಲ್ಲೂಕು ಮುಳ್ಳೂರು ಗ್ರಾಮದಲ್ಲಿರುವ ಭಿಕ್ಷದ ಮಠಕ್ಕೆ ಕಳುಹಿಸಿದರು. ಐದು ವರ್ಷಗಳವರೆಗೆ ಕಂತೆಭಿಕ್ಷಾ ಕಾಯಕದಲ್ಲಿ ತೊಡಗಿದ್ದ ನಾವು ಮುಂದೆ ಇದೇ ತಾಲ್ಲೂಕು ಕಾಮಗೆರೆ ಗ್ರಾಮದ ಭಿಕ್ಷದ ಮಠಕ್ಕೆ ಬಂದೆವು. ನಾವಿಲ್ಲಿಗೆ ಬಂದ ಮೇಲೆಯೇ ನಮಗೆ ಪರಮಪೂಜ್ಯ ಜಗದ್ಗುರುರವರ ಬಗ್ಗೆ ಹೆಚ್ಚೆಚ್ಚು ವಿಚಾರಗಳು ತಿಳಿಯುವಂತಾದದ್ದು. ಪೂಜ್ಯ ಶ್ರೀಗಳವರ ಅವಿಚ್ಛಿನ್ನ ಶಿಷ್ಯರಲ್ಲೊಬ್ಬರೆನಿಸಿದ್ದವರೂ, ಈ ವಲಯದ ಖ್ಯಾತ ರಾಜಕಾರಣಿಗಳೂ ಎನಿಸಿದ್ದ ಇಲ್ಲಿನವರಾದ ದಿವಂಗತ ಹೆಚ್. ನಾಗಪ್ಪನವರ ಪರಿಚಯ ನಮಗಿದ್ದುದರಿಂದ ನಾವು ಪರಸ್ಪರರು ಭೇಟಿಯಾದಾಗಲೆಲ್ಲ ಶ್ರೀಗಳವರ ಬಗ್ಗೆ ಅವರು ಏನಾದರೊಂದು ವಿಷಯ ಪ್ರಸ್ತಾಪಿಸುತ್ತಲೇ ಇದ್ದರು. ಹಾಗಾಗಿ ಈ ಮಹನೀಯರ ಸತ್ಸಂಗದಿಂದಲೇ ನಮಗೆ ಪೂಜ್ಯಶ್ರೀಗಳವರ ಘನಭೂಮ ವ್ಯಕ್ತಿತ್ವದ ವಿವಿಧ ಮುಖಗಳನ್ನು ಅರಿಯುವಂತಾದುದನ್ನಿಲ್ಲಿ ಬಹು ಕೃತಜ್ಞತೆಯೊಡನೆ ಸ್ಮರಿಸುತ್ತಿದ್ದೇವೆ. ದೀರ್ಘಕಾಲದ ಅವಿರತ

ಪರಿಶ್ರಮ, ತ್ಯಾಗ, ಸಂಯಮಗಳಿಂದ ಅಪಾರ ಸಾಧನೆ, ಸಿದ್ಧಿಗಳಿಗೆ ಕಾರಣರಾಗಿದ್ದ ಶ್ರೀಗಳವರಲ್ಲಿ ಮೇಳೈಸಿದ್ದ ಲೋಕಕಾರುಣ್ಯ ದೃಷ್ಟಿ, ಸಮಷ್ಟಿ, ಹಿತಚಿಂತನೆ, ಶಿವಪರತುಡಿತ-ದುಡಿತಗಳು... ಇತ್ಯಾದಿ ಸಾತ್ವಿಕ ಗುಣವಿಶೇಷಗಳ ಬಗ್ಗೆ ಕೇಳಿ ತಿಳಿದಿದ್ದ ನಾವು ದಂಗಾಗಿದ್ದೆವು. ಬಹು ಎತ್ತರ ಬಿತ್ತರದ ವ್ಯಕ್ತಿತ್ವವುಳ್ಳವರಾಗಿದ್ದ ಅವರನ್ನು ಕುರಿತು ಜನಸಾಮಾನ್ಯರಿಂದ ಹಿಡಿದು ಗಣ್ಯಾತಿಗಣ್ಯರೆಲ್ಲರೂ ಬಿತ್ತರಿಸುತ್ತಿದ್ದ ಮಾತುಗಳಲ್ಲಿ 'ಮಹಾನ್ ಸಂತಶ್ರೇಷ್ಠರಾದ ಅವರ ಸಾಧನೆಸಿದ್ಧಿಗಳು ಅಪಾರ, ಅವರ ಕೃಪಾದೃಷ್ಟಿಗೆ ಬಿದ್ದವರೆಲ್ಲ ಉದ್ಧಾರವಾಗಿದ್ದಾರೆ, ಸಂಘಸಂಸ್ಥೆಗಳು ಪಾವನವಾಗಿವೆ' ಎಂಬ ಸಾರಭೂತ ಅಂಶಗಳು ಅತಿಸಾಮಾನ್ಯ ಸಂಗತಿಗಳಾಗಿದ್ದವು. ಈ ಸಾರಭೂತ ವಿಚಾರಗಳನ್ನು ಗುರುತಿಸುತ್ತಿದ್ದ ನಮ್ಮ ಮನಸ್ಸು ತಂತಾನೆ ವಿನೀತವಾಗುತ್ತಿತ್ತು. ಅವರ ಬಗ್ಗೆ ಭಕ್ತಿ, ಗೌರವಗಳು ಸಹಜವಾಗಿ ಉಕ್ಕಿ ಹರಿಯುವಂತೆ ಮಾಡಿಸುತ್ತಿತ್ತು. ಇಂತಹ ಸಮಯಗಳಲ್ಲಿ ಆ ಮಹಾನ್ ಚೇತನವನ್ನೊಮ್ಮೆ ಕಣ್ಣಾರೆ ಕಾಣಬೇಕೆಂಬ ಹಂಬಲ ನಮ್ಮಲ್ಲಿ ಬಲವತ್ತರಗೊಂಡು ಕಾಡಲಾರಂಭಿಸುತ್ತಿತ್ತು. ಅದೊಂದು ಪುಣ್ಯವಿಶೇಷವೆಂದೇ ಹೇಳಬೇಕು. ನಾವು ಹಂಬಲಿಸಿ ಹಾತೊರೆಯುತ್ತಿದ್ದ ಈ ನಮ್ಮ ಕಾಮ್ಯಾರ್ಥ ಈಡೇರುವ ಸುಸಮಯದಲ್ಲಿ ಅನತಿಕಾಲದಲ್ಲೇ ಕೂಡ ಬಂದಿತು. ಅದು ಈಡೇರಿದ್ದು ಕೂಡ ಇಲ್ಲೇ... ಈ ಕಾಮಗೆರೆಯಲ್ಲೆ.

ಅದು 1978 ರ ಮೇ ತಿಂಗಳ ಒಂದು ಶುಭದಿನ. ನಾವಿದ್ದ ಈ ಭಿಕ್ಷದ ಮಠದಲ್ಲಿ ಬಸವ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ ಹಿನ್ನೆಲೆಯಲ್ಲಿ ಊರಿನ ಗಣ್ಯರು ಸುತ್ತೂರು ಶ್ರೀಗಳವರಿಗೆ ಬಿನ್ನಹ ಹಾಕಿ ಆಹ್ವಾನಿಸಿದ್ದರು. ಆ ದಿನ ಬಂತು. ಊರಿಗೆ ಊರೇ ಶೃಂಗಾರಗೊಂಡಿತ್ತು. ಹಬ್ಬದ ಸಂಭ್ರಮ ಎಲ್ಲೆಡೆ ತುಳುಕಾಡುತ್ತಿತ್ತು. ನಿಗದಿತ ಸಮಯಕ್ಕೆ ಅವರು ಆಗಮಿಸಿದರು. ಸ್ವಾಗತಿಸಲು ನೆರೆದಿದ್ದವರೆಲ್ಲರೂ ಅವರ ಪಾದಕ್ಕೆರಗಲು ಹಾತೊರೆಯುತ್ತಿದ್ದುದನ್ನು ಹೇಳತೀರದು. ಕೊಂಬು, ತಮ್ಮಟೆ ಇತ್ಯಾದಿ ವಾದ್ಯವಿಶೇಷ ಸಮೇತವಾಗಿ ಅವರನ್ನು ಸಭೆಗೆ ಬರಮಾಡಿಕೊಳ್ಳಲಾಗಿತ್ತು. ಬಹು ಸುಂದರ ಮೈಮಾಟದ ಅವರು ಘನಗಾಂಭೀರ್ಯದಿಂದ ಆಸೀನರಾಗಿದ್ದುದು ಆ ಸಭೆಗೊಂದು ವಿಶೇಷ ಕಳೆ ತಂದಿತ್ತು. ಅತ್ತಿತ್ತಗಲದಂತೆ ನಮ್ಮ ಕಣ್ಣುಗಳು ಅವರತ್ತವೇ ನಾಟಿದ್ದವು. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ "ಹತ್ತಾರು ಕಡೆ ಅಂಡಲೆಯುವ ಮನಸ್ಸನ್ನು ಒಂದು ಕಡೆ ಕೀಲಿಸುವಂತೆ ಮಾಡುವುದೇ ಸೌಂದರ್ಯ" ಎಂಬ ಮಾತುಗಳು ನೆನಪಾಗುತ್ತಿದ್ದವು. ಸಭಾ ಕಾರ್ಯಕ್ರಮ ಮುಗಿದ ಮೇಲೆ ಹಲವು ಸದ್ಭಕ್ತರು ಅವರನ್ನು ತಮ್ಮ ತಮ್ಮ ಮನೆಗಳಿಗೆ ಕರೆದೊಯ್ದು ತನು, ಮನ, ಧನಸಹಿತವಾಗಿ ತಮ್ಮ ತಮ್ಮ ಭಕ್ತಿಗೌರವಗಳನ್ನು ಸಮರ್ಪಿಸಿ ಧನ್ಯತಾಭಾವದಲ್ಲಿ ಮುಳುಗಿ ಹೋಗುತ್ತಿದ್ದರು. ಈ ಒಂದೊಂದು ಕ್ರಿಯೆಯನ್ನು ಗಂಭೀರವಾಗಿ ಗಮನಿಸುತ್ತಿದ್ದ ನಮ್ಮಲ್ಲಿ ಅವರ ಬಗೆಗಿದ್ದ ಭಕ್ತಿ, ಗೌರವ ಭಾವಗಳು ಮತ್ತಷ್ಟು ತೀವ್ರಗೊಳ್ಳುತ್ತಿದ್ದವು. ಒಂದು ಮಠದ ಸ್ವಾಮಿಯಾದವರೊಬ್ಬರನ್ನು ಅಷ್ಟೊಂದು ಅದ್ದೂರಿಯಾಗಿ, ಸಂಭ್ರಮದಿಂದ, ಭಕ್ತಿಭಾವಸಹಿತವಾದ ಉತ್ಸುಕತೆಯಿಂದ ಭಕ್ತಸಮುದಾಯ ಹಾಗೆ ಸ್ವಾಗತಿಸಿದುದನ್ನು ನಾವು



ಆ ವಯೋಮಾನದಲ್ಲಿ ನೋಡಿದ್ದು ಅದೇ ಮೊದಲು. ನಿಜಕ್ಕೂ ಅದೊಂದು ಅವಿಸ್ಮರಣೀಯ ಅನುಭವ. ಇಷ್ಟಾದರೂ ಇದುವರೆವಿಗೆ ಅವರವರ ಮಾತುಗಳ ಮೂಲಕ ಕೇಳಿ, ದಿನಪತ್ರಿಕೆಗಳನ್ನು ಓದಿ ಅವರ ಬಗ್ಗೆ ತಿಳಿದಿದ್ದವರಾಗಿದ್ದ ಅವರನ್ನು ಇದೀಗ ಇಲ್ಲಿ ಕಣ್ಣಾರೆ ಕಂಡಿದ್ದರೂ ಅವರೊಡನೆ ಏನೇನೂ ಮಾತನಾಡಲಾಗದೆ ಹೋಗಿದ್ದ ಕೊರತೆ ನಮ್ಮಲ್ಲಿದ್ದುದರಿಂದ ಅದೊಂದು ಬಗೆಯ ಅತೃಪ್ತಿ ನಮ್ಮನ್ನಾವರಿಸಿದ್ದಿತು.

ಈ ಹಿಂದೆ ಅವರನ್ನು ಕುರಿತು ಕೇಳಿದ್ದುದು... ಇದೀಗ ಈ ಬಗೆಯಲ್ಲಿ ನೋಡುವಂತಾಗಿದ್ದುದು ಈ ಎಲ್ಲ ಎಲ್ಲವೂ ನಮ್ಮ ಭಾವಕೋಶದಲ್ಲಿ ಅವರ ಬಗ್ಗೆ ಅದೇನನ್ನೊ ತುಂಬುತ್ತಿದ್ದವು. ಅದೊಂದು ದಿನ ಕನಸೊಂದು ಬಿದ್ದಿತು. ಪ್ರತ್ಯಕ್ಷರಾಗಿದ್ದ ಅವರು 'ಮೈಸೂರಿಗೆ ಬಂದುಬಿಡು' ಎಂದಷ್ಟೆ ಅಪ್ಪಣೆ ಇತ್ತು. ಅದೃಶ್ಯರಾಗಿದ್ದರು. ಅದು ಬರೇ ಕನಸಾಗಿಯೇ ಉಳಿಯದೆ ನನಸೂ ಆಯಿತು. 1980 ರಲ್ಲಿ ನಾವು ಮೈಸೂರು ನಗರದ ಕೆ.ಆರ್. ಮೊಹಲ್ಲದಲ್ಲಿರುವ ಹುಲ್ಲಿನ ಬೀದಿ ಶಾಖಾ ಮಠಕ್ಕೆ ಬರುವಂತಾಯಿತು. ಕಂತೆ ಭಿಕ್ಷಾ ಕಾಯಕ ಮಾಡುತ್ತ ಮನಸ್ಸಿಗೆ ಪ್ರಿಯವೆನಿಸಿದ್ದನ್ನು ಓದಿಕೊಳ್ಳುತ್ತ ಕಾಲ ಸವೆಯಿಸುತ್ತಿದ್ದೆವು. ಇಲ್ಲಿದ್ದಾಗಲೇ ಖಾಸಗಿಯಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕಟ್ಟಿ ಪಾಸಾಗಿದ್ದೂ ಕೂಡ. ಓದುವ ಹವ್ಯಾಸ ರೂಢಿಸಿಕೊಂಡಿದ್ದ ನಮಗೆ ಸಾಹಿತ್ಯಾಸಕ್ತಿ ಹೆಚ್ಚಿ ಲೇಖನ ಕಲೆಯನ್ನು ವೃದ್ಧಿಸಿಕೊಳ್ಳಲು ಮನಸ್ಸಾಗಿದ್ದಿತು.

1984ರ ಅವಧಿಯಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಗುರುವರ್ಯರನ್ನು ಕುರಿತು ಹತ್ತಾರು ತ್ರಿವಿಧಿಗಳನ್ನು ಬರೆದಿದ್ದೆವು. ಇವುಗಳಿಗೆ ನಮ್ಮ ಮಠದಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದ ಕಾಮಗೆರೆಯ ಸಿದ್ದಪ್ಪನೆಂಬ ವಿದ್ಯಾರ್ಥಿ ರಾಗ ಸಂಯೋಜಿಸಿ ಸುಶ್ರಾವ್ಯವಾಗಿ ಹಾಡಿ ತೋರಿಸಿದ್ದ. ಅಷ್ಟೇ ಅಲ್ಲ ಮೈಸೂರಿನಲ್ಲಿರುವ ಸುತ್ತೂರು ಶಾಖಾಮಠದಲ್ಲಿ ಆಚರಿಸಲಾಗುತ್ತಿದ್ದ ಶ್ರಾವಣಮಾಸದ ಕಾರ್ಯಕ್ರಮದಲ್ಲಿ ಅವಕಾಶ ಗಿಟ್ಟಿಸಿಕೊಂಡು ಹಾಡಿದ್ದವನೂ ಆಗಿದ್ದ. ಇದೇ ಈ ಸಾಹಿತ್ಯಾಸಕ್ತಿಯೇ ನಾವು ನೇರವಾಗಿ ಶ್ರೀಗಳವರನ್ನು ನೋಡುವಂತೆ, ಮಾತನಾಡುವಂತೆ ಅವಕಾಶ ಕಲ್ಪಿಸಿಕೊಟ್ಟದ್ದು.

ನಾವು ಬರೆದಿದ್ದ ತ್ರಿವಿಧಿಗಳನ್ನು ಹಾಡಿದ್ದ ಅದೇ ಹುಡುಗನ ಮೂಲಕವೇ ನಮ್ಮ ಪೂರ್ವಾಪರಗಳನ್ನು ತಿಳಿದವರಾಗಿದ್ದ ಪೂಜ್ಯರು ತಮ್ಮನ್ನು ನೋಡುವಂತೆ ಹೇಳಿ ಕಳುಹಿಸಿದ್ದರಿಂದ ಅವರು ನಿಗಧಿಪಡಿಸಿದ್ದ ಸಮಯಕ್ಕೆ ಸರಿಯಾಗಿ ಸುತ್ತೂರು ಮಠಕ್ಕೆ ಧಾವಿಸಿ ಅವರ ಪಾದಕ್ಕೆರಗಿ ನಮ್ಮ ಪರಿಚಯ ಮಾಡಿಕೊಂಡೆವು. "ಹ್ಞೂಂ, ಗೊತ್ತಾಯಿತು ಚೆನ್ನಾಗಿ ಬರೆಯುತ್ತೀರಿ. ಮುಂದುವರೆಯಿಸಿ, ಮಹಾತ್ಮರು, ಶರಣರ ಬಗ್ಗೆ ನಿಮಗೆ ಬರೆಯಬೇಕೆನಿಸಿದ್ದನ್ನೆಲ್ಲಾ ಬರೆಯಿರಿ" ಎಂದು ತಿಳಿಸಿ ಆಧ್ಯಾತ್ಮಿಕಪರವಾದ ಒಂದೆರಡು ಕೃತಿಗಳನ್ನು ನಮ್ಮ ಕೈಗಿತ್ತು ಮತ್ತೆ ಮಾತು ಮುಂದುವರೆಸಿ "ಚೆನ್ನಾಗಿ ಓದಿ, ಇಷ್ಟವಿದ್ದರೆ ನಮ್ಮ ಗುರುಕುಲಕ್ಕೆ ಬನ್ನಿ, ಸಾಧಕರಾಗಿ ಅಭ್ಯಾಸ ಮುಂದುವರೆಯಿಸಿ, ಉದ್ಯೋಗದ ಆಸೆ

ಇದ್ದರೆ ನಮ್ಮ ಸಂಸ್ಥೆಯಲ್ಲಿ ಧಾರ್ಮಿಕ ಚಟುವಟಿಕೆಗಳಿಗೆ ಮೀಸಲಾದ ಯಾವುದೇ ನಿಟ್ಟಿನಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ" ಎಂದು ಹೇಳಿ ಕಳುಹಿಸಿಕೊಟ್ಟಿದ್ದರು.

ಅವರ ಆ ಪ್ರಾಂಜಲ ಮನಸ್ಸಿನ ಮಾತುಗಳಲ್ಲಿ ನಾವು ಬೆಳೆಯಬೇಕು, ಏಳಿಗೆ ಕಾಣಬೇಕು, ಸಮಾಜ ಸೇವೆಗೆ ತೊಡಗಿ ಜೀವನ ಸಾರ್ಥಕಗೊಳಿಸಿಕೊಳ್ಳಬೇಕು ಎಂಬೆಲ್ಲ ಕಾಳಜಿ ಇದ್ದುದನ್ನು ಗುರುತಿಸಿದ್ದ ನಾವು ಮೂಕವಿಸ್ಮಿತರಾಗಿದ್ದೆವು. ಅವರ ಕರೆಗೆ ಓಗೊಟ್ಟಿದ್ದ ನಾವು ಮತ್ತೊಂದು ದಿನ ಸಾನ್ನಿಧ್ಯದಲ್ಲಿ ನಿಂತು 'ತಮ್ಮ ಸಂಸ್ಥೆಗೆ ಬರಲು ಮಾನಸಿಕವಾಗಿ ಸಿದ್ಧರಾಗಿ ಬಂದಿದ್ದೇವೆ. ಅವಕಾಶ ಮಾಡಿಕೊಡುವ ಕೃಪೆ ಮಾಡಿ' ಎಂದು ವಿನಯಪೂರ್ವಕವಾಗಿ ನಿವೇದಿಸಿಕೊಂಡೆವು. ಅಂದು (24.12.1984). ಅದೇ ಗಳಿಗೆಯಲ್ಲೇ ಮಹಾವಿದ್ಯಾಪೀಠದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಂದಿನ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಬಳಿ ಹೋಗಲು ತಿಳಿಸಿದರು. ಪರಮಪೂಜ್ಯರು ಸಂಸ್ಥೆ ವತಿಯಿಂದ ಹೊರತರಲಾಗುತ್ತಿದ್ದ 'ಪ್ರಸಾದ' ನಿಯತಕಾಲಿಕೆಗೆ ಸಂಬಂಧಿಸಿದಂತೆ ಬಂದೊದಗುವ ಕೆಲಸ ಕಾರ್ಯಗಳನ್ನು ನಿಭಾಯಿಸುವಂತೆ ನಿಯೋಜಿಸಿದ್ದರು. 1986 ರಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಅಸ್ತಿತ್ವಕ್ಕೆ ತಂದಿದ್ದ ಅವರು ಅದರ ವತಿಯಲ್ಲಿ ನಾವು ಮಾಡಬಹುದಾದ ಕೆಲಸಕಾರ್ಯಗಳ ಬಗ್ಗೆ ವಿವರವಾಗಿ ತಿಳಿಸಿದ್ದರು. ವಿಶೇಷವಾಗಿ 'ಗ್ರಾಮಾಂತರ ವೀರಶೈವ ಧರ್ಮ ಪ್ರಸಾರ' ಕಾರ್ಯಕ್ರಮದ ಜವಾಬ್ದಾರಿಯನ್ನು ನಾವೇ ನಿರ್ವಹಿಸಬೇಕೆಂದು ಅಪ್ಪಣೆ ಇತ್ತಿದ್ದರು. ಡಿಸೆಂಬರ್ 1986 ರಲ್ಲಿ ಅವರು ಲಿಂಗೈಕ್ಯರಾಗಿಬಿಟ್ಟರು. ಅವರ ಆ ಕೊನೆಯ ಅಪ್ಪಣೆಯನ್ನು ಈ ಇಪ್ಪತ್ತಮೂರು ವರ್ಷಗಳಲ್ಲಿ ನಾವು ನಿಷ್ಠೆಯಿಂದ ಪರಿಪಾಲಿಸುತ್ತ ಬಂದಿದ್ದೇವೆ. ಪರಮನಲ್ಲಿ ಬೆರೆತಾಗ ಲಕ್ಷಾಂತರ ಹೃದಯಗಳು ಕಂಬನಿ ಮಿಡಿದವು. ಅವರ ಕೊನೆಯ ಅಪ್ಪಣೆಯಂತೆ ಹಾಗೂ 24 ನೆಯ ಜಗದ್ಗುರು ಮಹಾಸ್ವಾಮಿಗಳ ಆದೇಶದಂತೆ ನಾಡಿನ ವಿವಿಧ ಜಿಲ್ಲೆಗಳಿಗೆ ಸೇರಿದ ನಾಲ್ಕೂವರೆ ಸಾವಿರದಷ್ಟು ಬೇರೆ ಬೇರೆ ಊರುಗಳಲ್ಲಿ ಧರ್ಮ ಪ್ರಸಾರ ಮಾಡಿರುವುದರ ಜೊತೆ ಜೊತೆಗೆ ಇಪ್ಪತ್ತೆಂಟು ಸಾವಿರದ ಎಂಟು ನೂರು ಜನರಿಗೆ ಲಿಂಗದೀಕ್ಷೆ (ವೀರಶೈವರಲ್ಲದವರಿಗೂ) ಮಾಡಿಸಿರುವ ತೃಪ್ತಿ ನಮಗಿದೆ. ಸಹಸ್ರ ಸಹಸ್ರ ಜನರ ಪರಿಚಯ, ಪ್ರೀತ್ಯಾದರಗಳು ನಮಗೆ ದಕ್ಕಿವೆ. ಈ ಮೊದಲೆ ತಿಳಿಸಿದಂತೆ ಅವರ ಕೃಪಾಶ್ರಯಕ್ಕೊಳಗಾಗಿ ನಮ್ಮ ಬದುಕು ಹಸನಾಗಿದೆ. ನಮ್ಮ ಸಾಮಾಜಿಕ ಸ್ಥಾನಮಾನಗಳು ಸಾಕಷ್ಟು ಸುಧಾರಿಸಿವೆ. ಅವರ ಕೃಪಾಶ್ರಯಕ್ಕೆ ಒಳಗಾಗದೆ ಹೋಗಿದ್ದರೆ ನಾವೆಷ್ಟೇ ಪ್ರಯತ್ನಿಸಿದ್ದರೂ ಇಂದು ನಾವಿರುವ ಸ್ಥಿತಿಯನ್ನು ನಾವು ಮುಟ್ಟಲಾಗುತ್ತಿರಲಿಲ್ಲ ಎನ್ನುವುದರಲ್ಲಿ ಏನೇನೂ ಅನುಮಾನಗಳಿಲ್ಲ. ನಿಜಕ್ಕೂ ಅವರು ನಮ್ಮನ್ನುದ್ಧರಿಸಿದ ಮಹಾನ್ ಜಗದ್ಗುರುವರರು.

□

# ಸಾಗರಂ ಸಾಗರೋಪಮಂ

**ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು**
ಅನ್ನದಾನೀಶ್ವರ ಮಠ, ಸಿದ್ಧಾರ್ಥ ನಗರ, ಮೈಸೂರು

ಪರಮ ಪೂಜ್ಯರಾದ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮತ್ತು ನನ್ನ ಸಹೋದರರು ಜೊತೆಯಲ್ಲಿ ಸಂಸ್ಕೃತ ಓದುತ್ತಿದ್ದರು. ನನ್ನ ಸೋದರರು ಅಕಾಲಿಕ ಮರಣ ಹೊಂದಿದ ನಂತರ 1947ರಲ್ಲಿ ನನ್ನನ್ನು ಕೆಎಸ್ಎಸ್ ಪಾಠಶಾಲೆಗೆ ಸೇರಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳಿಂದ ಬ್ರಿಟಿಷರ ವಿರುದ್ಧ ಹೋರಾಟ ನಡೆಯುತ್ತಿತ್ತು. ಅಲ್ಲಲ್ಲಿ ಗೋಲೀಬಾರ್ ನಡೆಯುತ್ತಿತ್ತು. ಮೈಸೂರಿನಲ್ಲಿ ಒಬ್ಬ ವಿದ್ಯಾರ್ಥಿ ರಾಮಸ್ವಾಮಿ ಎಂಬುವನು ಡಿಸಿ ಯವರ ಎದುರು ತಿರುಗಿ ಬಿದ್ದಾಗ ಅವನನ್ನು ಶೂಟ್‌ಮಾಡಿದ್ದೇ ಹೆಚ್ಚಿನ ಗಲಬೆಗೆ ಕಾರಣವಾಗಿ ಎಲ್ಲಾ ಕ್ಷೇತ್ರದ ಜನರು ಹೋರಾಟಕ್ಕಿಳಿದರು. ಆಗ ಶಾಲಾ ಕಾಲೇಜು ಹಾಸ್ಟಲ್ ಕ್ಲೋಸ್ ಮಾಡಿಸಿ ನಮ್ಮ ಊರುಗಳಿಗೆ ವಾಪಸ್ ಹೋಗುವಂತೆ ಆದೇಶ ನೀಡಿದರು. ರೈಲು ಬಸ್‌ಗಳ ಸಂಚಾರ ಸ್ಥಗಿತಗೊಂಡಿದ್ದರಿಂದ ನಡೆದುಕೊಂಡೆ ಊರಿಗೆ ಬಂದೆವು. ಲೋವರ್ ಸೆಕೆಂಡರಿ ಪರೀಕ್ಷೆ ಮದ್ದೂರು ತಾಲ್ಲೂಕು ಬೆಸಗರಹಳ್ಳಿ ಮಿಡ್ಲ್‌ಸ್ಕೂಲ್‌ನಲ್ಲಿ ಪಾಸ್ ಆಯಿತು. ಸ್ವಾತಂತ್ರ ಬಂತು. 1948ರಲ್ಲಿ ಪುನಃ ಹಾಸ್ಟಲಿನಲ್ಲಿ ಅವಕಾಶ ದೊರೆಯಿತು. ರಾಜೇಂದ್ರ

ಮಹಾಸ್ವಾಮಿಗಳು ಸಾಹಿತ್ಯವಿದ್ವತ್ (ಅಲಂಕಾರ ವಿದ್ವತ್) ಮುಗಿಸಿದ್ದರು. ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರು ಕಾಲವಾದ ನಂತರ ಪರಮಪೂಜ್ಯರ ಹೆಗಲಿಗೆ ಪೂರ್ಣ ಜವಾಬ್ದಾರಿ ಬಂದಿತ್ತು. ನಾನು ಸಂಸ್ಕೃತ ಓದುತ್ತ ಜೊತೆಗೆ ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಮರಿಮಲ್ಲಪ್ಪನವರ ಶಾಲೆಗೆ ಸೇರಿದೆನು. ರಾಜೇಂದ್ರ ಸ್ವಾಮಿಗಳು ಸ್ವಲ್ಪ ದಿವಸ ಹಾಸ್ಟಲಿನಲ್ಲಿ ಪ್ರತ್ಯೇಕವಾಗಿ ಪ್ರಸಾದ ಸ್ವೀಕರಿಸುತ್ತಿದ್ದರು. ಅನಂತರ ಸಯ್ಯಾಜಿರಾವ್ ರೋಡಿನಲ್ಲಿರುವ ನಿರಂಜನಾಲಯದಲ್ಲಿ ಅವರ ವಾಸ್ತವ್ಯ ಪೂಜೆ ಪ್ರಸಾದ ನಡೆಯುತ್ತಿತ್ತು. ಆಗ ಗುರುಗಳು ಬೆಳಗ್ಗೆ ಬಂದರೆ ಬಹಳಕಾಲ ಇರುತ್ತಿದ್ದರು. ಸಾಯಂಕಾಲ ಹೋಗುವಾಗ ನಿರಂಜನಾಲಯಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಒಮ್ಮೊಮ್ಮೆ ಜಟಕಾ ಗಾಡಿಯಲ್ಲಿ ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳು ಶ್ರೀ ರಾಜೇಂದ್ರ ಸ್ವಾಮಿಗಳು ಹೋಗುತ್ತಿದ್ದರು. ಜಿಲ್ಲೆಯಿಂದ ಹೊರಗಡೆ ಹೋಗಬೇಕಾದರೆ ಒಂದು ಬಟ್ಟೆ ಹೊದಿಕೆಯ ಕಾರು ಇದ್ದಿತ್ತು. ಅದು ಆಗಾಗೆ ಕೆಟ್ಟು ದಾರಿಯಲ್ಲಿ ನಿಲ್ಲುತ್ತಿತ್ತು. ಬಹಳ ಬೇಸರದಿಂದ ಆ ಕಾರ್ ಮಾರಿ ಹಿರಿಯ ಶ್ರೀಗಳವರು ಒಂದು ಹಸಿರು ಬಣ್ಣದ ಮಾರೀಸ್ ಕಾರನ್ನು ಕೊಡಿಸಿದ್ದರು. ಸುಗ್ಗಿ ಕಾಲದಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಭಕ್ತರಲ್ಲಿ ದವಸ ಧಾನ್ಯ ವಸೂಲಿಗೆ ಕಳುಹಿಸುತ್ತಿದ್ದರು. ನಮ್ಮ ಮಠದ ಶಿಷ್ಯರುಗಳ ಊರಿಗೆ ಅಂದರೆ ಚಿಕ್ಕಾಯರಹಳ್ಳಿ, ಕ್ಯಾತನಹಳ್ಳಿ, ಚಿನ್ನೇನಹಳ್ಳಿ, ಶೆಟ್ಟಹಳ್ಳಿ, ನಂಜನಗೂಡಿನ ಹುಲ್ಲಹಳ್ಳಿ ಇಲ್ಲಿಗೆ ನನ್ನನ್ನು ಕಳುಹಿಸುತ್ತಿದ್ದರು. ನಾವು ದವಸ ಧಾನ್ಯ ಶೇಖರಿಸಿದ ನಂತರ ಅದನ್ನು ತರಿಸಿಕೊಳ್ಳುತ್ತಿದ್ದರು. 1949-50ರ ದಶಕದಲ್ಲಿ ತುಂಬಾ ಕ್ಷಾಮ ಬಂದಿತ್ತು. ಅಮೇರಿಕಾದ ಅಧ್ಯಕ್ಷರು ಭಾರತಕ್ಕೆ ಬಟರ್, ಆಯಿಲ್, ಗೋಧಿಯನ್ನು ಬಿಡುಗಡೆ ಮಾಡಿದ್ದರು. ನಮ್ಮ ಪಾಠಶಾಲೆಯಲ್ಲಿ ಯತೇಚ್ಛವಾಗಿ ಉಪಯೋಗಿಸುತ್ತಿದ್ದರು. ನಮಗೆ ಗೋಧಿ ತಿಂದು ಅಭ್ಯಾಸವಿರಲಿಲ್ಲ. ಹೇಗೋ ರೂಡಿ ಮಾಡಿಕೊಂಡಿದ್ದೆವು. ನಂತರ ಘನ ಸರ್ಕಾರದವರು ವಿದ್ಯಾರ್ಥಿನಿಲಯಗಳಿಗೆ ಗ್ರಾಂಟ್ ರೂಪದಲ್ಲಿ ನೆರವಿಗೆ ಬಂದರು. ಆನಂತರ ಗುರುಗಳು ಸಮಾಧಾನವಾಗಿ ಇರುತ್ತಿದ್ದರು. ಆಗ ಸ್ಕೂಲ್, ಕಾಲೇಜುಗಳಲ್ಲಿ ಭಾಷಣ ಸ್ಪರ್ಧೆ ಇರುತ್ತಿತ್ತು. ಇಂದಿನ ಲಾಯರ್ ಹೆಚ್. ಗಂಗಾಧರಪ್ಪ, ತುಮಕೂರ್ ಕಡೆಯ ಪ್ರೊ. ಸಿದ್ದಪ್ಪನವರು ಆಗ ವಿದ್ಯಾರ್ಥಿಗಳಾಗಿದ್ದರು. ಎಲ್ಲಾ ಕಡೆ ಮೊದಲನೇ ಬಹುಮಾನ ಇಲ್ಲವೇ ಶೀಲ್ಡ್‌ಗಳನ್ನು ತರುತ್ತಿದ್ದರು. ಅವರ ಮೇಲೆ ಗುರುಗಳಿಗೆ ಬಹಳ ಅಭಿಮಾನ. ಹಬ್ಬ ಹರಿದಿನಗಳಲ್ಲಿ ಅಧ್ಯಯನ ಕಾಲದಲ್ಲಿ ವಿಶೇಷ ಸಿಹಿ ಊಟವಿರುತ್ತಿತ್ತು. ಆಗ ಅಲ್ಲಿದ್ದ ಶಾಲೆಯಲ್ಲಿ ಹೆಡ್‌ಮಾಸ್ಟರ್ ಕೃಷ್ಣಶಾಸ್ತ್ರಿಗಳು; ಬಸವರಾಜಶಾಸ್ತ್ರಿಗಳು, ವಿಶ್ವನಾಥ ಶಾಸ್ತ್ರಿಗಳು, ವಿಷ್ಣುಮೂರ್ತಿಗಳು ಉಪಾಧ್ಯಾಯರಾಗಿ ಇದ್ದರು. ಚಿಕ್ಕಬುದ್ದಿಯವರು (ರಾಜೇಂದ್ರ ಸ್ವಾಮಿಗಳು) ಪಾಠ ತೆಗೆದುಕ್ಕೊಳ್ಳುತ್ತಾರೆ ಎಂದು ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುತ್ತಿದ್ದರು. ಗುರುಗಳು ಸರಿಯಾಗಿ ಪಾಠ ಒಪ್ಪಿಸದಿದ್ದವರಿಗೆ ಪಾರಿಜಾತ ಕಡ್ಡಿಯಿಂದ ಸಿಕ್ಕಾಬಟ್ಟೆ ಹೊಡೆದು ಆ ಪಾಠ ಒಪ್ಪಿಸುವವರೆಗೆ ಒಂಟಿ ಕಾಲಿನಲ್ಲಿ ನಿಲ್ಲಿಸುತ್ತಿದ್ದರು. ನಮಗೆ ಬೆಳಗ್ಗೆ 7-30ಗೆ ಶುಕ್ರವಾರ



ಶಾಲೆ 10 ಘಂಟೆಗೆ ಮುಗಿಸಿ ಇಂಗ್ಲೀಷ್ ಶಾಲೆಗೆ ಹೋಗಿ 4-30 ಘಂಟೆಗೆ ಮುಗಿಸಿ ಬಂದ ನಂತರ 5-30 ಯಿಂದ 7 ಘಂಟೆವರೆವಿಗೆ ಪುನಃ ಸಂಸ್ಕೃತ ಪಾಠ ನಡೆಯುತ್ತಿತ್ತು. ಬಿಡುವಿಲ್ಲದಿದ್ದ ಕಾರಣಕ್ಕೆ ನನ್ನಂತಹ ಅನೇಕ ವಿದ್ಯಾರ್ಥಿಗಳು ರಾತ್ರಿ 9 ಘಂಟೆವರೆವಿಗೆ ತೂಕಡಿಕೆಯಿಂದ ಓದು ಸಾಗುತ್ತಿತ್ತು. ಆಗಲೂ ಸಹ ಗುರುಗಳು ಅಡಿಗೆಯ ಮರಯ್ಯನನ್ನು ಕರೆದುಕೊಂಡು ಬಂದು ಬಾಟ್ಲಿ ನೀರನ್ನ ತೆಗೆಸಿಕೊಂಡು ವಿದ್ಯಾರ್ಥಿಗಳಿಗೆ ಹಾಕಿ ಓದಿಸುತ್ತಿದ್ದರು. ಬೆಳಗಿನಜಾವ 5 ಘಂಟೆಗೆ ಪ್ರಾರ್ಥನೆ ಆದ ನಂತರ ನಿತ್ಯಕರ್ಮ ಮುಗಿಸಿ 7-30 ತನಕ ಬೇಕಾಗಿತ್ತು. ಆಗಲೂ ಸಹ ಒಮ್ಮೊಮ್ಮೆ ರೂಂಗೆ ಭೇಟಿಕೊಟ್ಟು ಮಲಗಿದ್ದವರನ್ನು ಎಚ್ಚರಿಸುವ ಪರಿಪಾಠವಿತ್ತು. ಕೆಲವು ಬಾರಿ ದಂಡವನ್ನೂ ಹಾಕುತ್ತಿದ್ದರು.

ಬುದ್ದಿಯವರು ಬರುತ್ತಿದ್ದಾರೆ ಎಂದರೆ ಇಡೀ ಹಾಸ್ಟಲಿನ ವಿದ್ಯಾರ್ಥಿಗಳು ಬಹು ಎಚ್ಚರಿಕೆಯಿಂದ ಇರುತ್ತಿದ್ದೆವು. ಆಗ ಗುರುಕುಲ ಬೇರೆ ಇರಲಿಲ್ಲ. ಎಲ್ಲವೂ ಹಾಸ್ಟಲಿನಲ್ಲೇ. ಆದರೆ ಅವರುಗಳಿಗೆ ಪ್ರತ್ಯೇಕ ಊಟ ಇರುತ್ತಿತ್ತು. ಆಗ ಜಡೆಸ್ವಾಮಿಗಳು, ಮಡೇನಹಳ್ಳಿ ಸದಾಶಿವಸ್ವಾಮಿಗಳು ಚಿದ್‌ಘನಸ್ವಾಮಿಗಳು, ಹುಲ್ಲಹಳ್ಳಿ ಸ್ವಾಮಿಗಳು, ಕಾಗಲ್ವಾಡಿ ಶಿವರುದ್ರಸ್ವಾಮಿಗಳು ಇನ್ನು ಕೆಲವರು ಇರುತ್ತಿದ್ದರು.

ಕೆಲವು ವರ್ಷಗಳ ಬಳಿಕ ಹಾಸ್ಟಲಿನ ಪಕ್ಕದಲ್ಲೆ ಗುರುಕುಲ ಪ್ರಾರಂಭವಾಯಿತು. ಅಲ್ಲಿ ಬೆಳಗ್ಗೆ ಪಟ್ಟಾಭಿಜೋಯಿಸರಿಂದ ಯೋಗ ತರಗತಿ ನಡೆಯುತ್ತಿತ್ತು. ಚಿಕ್ಕ ಬುದ್ದಿಯವರು ಕ್ಯಾತನಹಳ್ಳಿ ಶ್ರೀಗಳು ಗುರುಕುಲದ ವಟುಗಳು, ಸ್ವಾಮಿಗಳು, ಯೋಗಭ್ಯಾಸ ನಿರತ ರಾಗಿರುತ್ತಿದ್ದರು.

ಧನುರ್ಮಾಸದಲ್ಲಿ ಯೋಗ ತರಗತಿ ನಡೆಯುತ್ತಿರಲಿಲ್ಲ. ಆಗ ನಾನು ಬುದ್ದಿಯವರ ಹತ್ತಿರ ನನ್ನ ಬಗ್ಗೆ ಕೆಲವರು ಚಾಡಿ ಹೇಳುತ್ತಿದ್ದರು. ಮುಗ್ಧರಾದ ಗುರುಗಳು ಚಾಡಿಯನ್ನು ನಂಬುತ್ತಿದ್ದರು. ಆಗ ಒಂದು ವಾರ ಕಾಲ ಗುರುಗಳ ಹತ್ತಿರ ಹೋಗುತ್ತಿರಲಿಲ್ಲ. ಪುನಃ ಗುರುಗಳು ನನ್ನನ್ನು ಕರೆಸಿ ಬುದ್ಧಿವಾದ ಹೇಳುತ್ತಿದ್ದರು.

ಮುಂದೆ ನಾನು ವಿದ್ಯಾಭ್ಯಾಸಕ್ಕೆ ಕಾಶಿಗೆ ಹೋದೆ. ವಿದ್ಯಾಭ್ಯಾಸ ಮುಗಿಸಿ ಕಾಶಿಯಿಂದ ಬಂದಾಗ 1958 ಏಪ್ರಿಲ್‌ನಲ್ಲಿ ಚಿಕ್ಕ ಬುದ್ದಿಯವರಿಗೆ ಮರದ ಪಾದರಕ್ಷೆಗಳನ್ನು ಮತ್ತು ರುದ್ರಾಕ್ಷಿ ಮಾಲೆಯನ್ನು ತಂದು ಒಪ್ಪಿಸಿದ್ದೆನು. ಅವರಿಗೆ ಅತ್ಯಂತ ಸಂತೋಷಪಟ್ಟರು. ನಾನು ವಿದ್ವತ್ ಪಾಸು ಮಾಡಿದ ನಂತರ ನನ್ನ ಮೇಲೆ ಬಹಳ ವಾತ್ಸಲ್ಯದಿಂದ ಇರುತ್ತಿದ್ದರು. ನಾನು ನಮ್ಮ ವಿದ್ಯಾಪೀಠದಲ್ಲಿ ಕೆಲಸ ಮಾಡುವ ಇಚ್ಛೆ ವ್ಯಕ್ತಪಡಿಸಿದೆನು. ಆಗ ಗುರುಗಳು ನಿನ್ನ ಟೆಂಪರ್‌ಮೆಂಟಿಗೆ ಕಷ್ಟವಾಗಬಹುದೆಂದು ಹೇಳಿದರು. ಆದರೂ ಕೆಲಸ ಕೊಟ್ಟರು. ಏಕೋ ಏನೋ ಅದು ಒಗ್ಗದೆ ಉಪನ್ಯಾಸ ವೃತ್ತಿಗೆ ರಾಜಿನಾಮೆಕೊಟ್ಟೆನು. ಕೆಲವು ತಿಂಗಳ ಬಳಿಕ ನಂಜನಗೂಡಿನ ಮಲ್ಟಿಪರ್ಪಸ್ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿ ಸಿಕ್ಕಿತು. ಅಲ್ಲಿ ಸಿರಿಯಪ್ಪನವರ ವಿದ್ಯಾರ್ಥಿ ನಿಲಯದಲ್ಲಿ ವಾರ್ಡನ್ ಆಗಿ ಇರುವಂತೆ ಚಿಕ್ಕಬುದ್ದಿಯವರು

ಆದೇಶಿಸಿದರು. ಅಲ್ಲಿ ರಾಜಣ್ಣ ಎನ್ನುವವರು ಮ್ಯಾನೇಜರ್ ಆಗಿದ್ದರು. ಕಬ್ಬಳ್ಳಿ ಸಿರಿಯಪ್ಪನವರ ಸಂಬಂಧಿ ರಾಜಶೇಖರಪ್ಪನವರು ನಾವು ಹಾಸ್ಟಲಿನಲ್ಲಿ ವಿದ್ಯಾರ್ಥಿಗಳಿಗೆ ಶಿಸ್ತು ತರಿಸಲು ಪ್ರಾರಂಭಿಸಿ ಎಲ್ಲರಿಗೂ ಲಿಂಗಧಾರಣೆ ಮಾಡಿಸಿ ಪ್ರಾರ್ಥನೆ, ಆಗಾಗ್ಗೆ ಸಭೆ ನಡೆಸುವುದು ಮಾಡತೊಡಗಿದೆವು. ಅಲ್ಲಿ ನಮ್ಮ ಪ್ರಭಾವ ಜಾಸ್ತಿಯಾಗಿರುವುದನ್ನು ಗಮನಿಸಿದ ಮ್ಯಾನೇಜರ್ ರಾಜಣ್ಣ ನಮ್ಮ ಮೇಲೆ ಗುರುಗಳಿಗೆ ಚಾಡಿ ಹೇಳಿದರು. ಅದನ್ನು ನಂಬಿದ ಗುರುಗಳು ನನಗೆ ಹಾಸ್ಟಲಿನ ರೂಂನಿಂದ ಹೊರಹೋಗಲು ಹೇಳಿದ್ದಾರೆಂದು ನೋಟೀಸ್‌ಬೋರ್ಡಿನಲ್ಲಿ ಪ್ರಕಟವಾಗಿತ್ತು. ತುಂಬಾ ಭಾರವಾದ ಮನಸ್ಸಿನಿಂದ ಅಲ್ಲಿ ಒಂದು ಮನೆ ಮಾಡಿ ಊರಿನಿಂದ ಮಠದ ಓದುವ ವಿದ್ಯಾರ್ಥಿಗಳನ್ನ ಕರೆತಂದೆನು. ಒಂದು ವರ್ಷ ಬುದ್ಧಿಯವರನ್ನ ನೋಡಲು ಹೋಗಲಿಲ್ಲ. ಅನಂತರ 64-65ರಲ್ಲಿ ಅವರು ಅನಾರೋಗ್ಯದಿಂದ ಬಳಲುತ್ತಿದ್ದರೆಂದು ಗೊತ್ತಾಗಿ ಅವರನ್ನು ನೋಡಲು ಹೋಗಿದ್ದೆನು. ದುಃಖದಿಂದ ಅವರೊಡನೆ ಏನೂ ಮಾತನಾಡದೇ ಮೌನವಾಗಿ ಇದ್ದು ಹೊರಟೆನು. ಆಗ ಗುರುಗಳು ಹೋಗು ಊಟ ಮಾಡು ಎಂದರು. ನಾನು ಅವರಿಗೆ ನನಗೆ ಸಂಬಳ ಬರುತ್ತಿದೆ ತಮ್ಮ ಆಶೀರ್ವಾದದಿಂದ ಸುಖವಾಗಿ ಇದ್ದೇನೆ ಎಂದೆ. ಹಿಂದಿನ ನೋಟೀಸ್ ಬಗ್ಗೆ ಗುರುಗಳಲ್ಲಿ ವಿನಂತಿಸಿದೆ. ಮ್ಯಾನೇಜರ್‌ನ ಸುಳ್ಳು ಮಾತಿನಿಂದ ನನ್ನನ್ನು ಹೊರಗೆ ಹೋಗುವಂತೆ ತಮ್ಮ ಅಪ್ಪಣೆಯಾಗಿತ್ತು ಎಂದೆ. ಆಗ ಅವರು ಅದು ನಿಜವೇ ಆಗಿದ್ದಲ್ಲಿ ನೀನು ಏಕೆ ಬಂದು ನನ್ನೊಡನೆ ಹೇಳಲಿಲ್ಲ ಹೋಗು ಊಟ ಮಾಡು ಎಂದು ಕೈ ಹಿಡಿದು ಕರೆದುಕೊಂಡು ಹೋಗಿ, ಆನೆ ಕರೆಯುವ ಪಟ್ಟಿಯ ತಮ್ಮ ಖಾಸಾ ಅಡಿಗೆಯಲ್ಲಿ ಊಟ ನೀಡಿಸಿದರು. ನಾನು ದಿಗ್ಭ್ರಾಂತನಾದೆನು. ಅವರ ಮಾತೃಹೃದಯದ ಬಗ್ಗೆ ನನ್ನ ಅಹಂಕಾರ ತಗ್ಗಿ ಹೋಯಿತು.

ನಂಜನಗೂಡಿನಲ್ಲಿ ನಾನು ಇದ್ದಾಗ ಜನರನ್ನು ಒಟ್ಟುಗೂಡಿಸಿ ಬಸವಸಮಿತಿಯನ್ನು ಮಾಡಿ ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದೆ. ಆಗ ನಮ್ಮ ಬಂಧುಗಳಾದ ಮ್ಯಾಜಿಸ್ಟ್ರೇಟ್ ಲಿಂಗರಾಜುರವರು ಸಹಕಾರ ಕೊಟ್ಟರು. ಪುನಃ ಗುರುಗಳಿಗೂ ನಮಗೂ ವಿಶ್ವಾಸ ಹೆಚ್ಚಿತು.

1966ರಲ್ಲಿ ನಡೆದ ನನ್ನ ಪಟ್ಟಾಭಿಷೇಕಕ್ಕೆ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ನೇತ್ರತ್ವದಲ್ಲಿ ಕನಕಪುರದ ನಿರ್ವಾಣಸ್ವಾಮಿಗಳು ವಾಟಾಳು ಬಸವಲಿಂಗ ಸ್ವಾಮಿಗಳು ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳು ಆಗಮಿಸಿದ್ದರು.

ನನ್ನ ಪೂಜ್ಯ ಗುರುಗಳಿಂದ ಪಟ್ಟಾಭಿಷಕ್ತನಾದ ನಂತರ ಸಭೆಯಲ್ಲಿ ನನ್ನ ಬಗ್ಗೆ ಬಹು ಒಳ್ಳೆಯ ಮಾತನಾಡಿ ಆಶೀರ್ವದಿಸಿದರು. ಅಂದಿನಿಂದ ನನ್ನ ಬಗ್ಗೆ ವಿಶೇಷ ಪ್ರೀತಿ ಇಟ್ಟುಕೊಂಡಿದ್ದರು.

ಮೈಸೂರಿನಲ್ಲಿ ಮಠಾಧಿಪತಿಗಳ ಗೋಷ್ಠಿಯಲ್ಲಿ ನನಗೂ ಒಂದು ಪಾತ್ರ ಕೊಟ್ಟು



ಕಾರ್ಯದರ್ಶಿಯಾಗುವಂತೆ ಒತ್ತಾಯಿಸಿದರು. ಕಾರ್ಯಭಾರಗಳಿಂದ ಅದು ನನ್ನ ಕೈಯಲ್ಲಿ ಸಾಧ್ಯವಾಗಲಿಲ್ಲ.

ಅವರು ಎಲ್ಲಿಗೆ ಹೋದರೂ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ದಕ್ಷಿಣ ಇಂಡಿಯಾ ಪ್ರವಾಸ ಕೈಗೊಂಡು ಶ್ರೀಶೈಲ ಮುಂತಾದ ಕಡೆ ಮೈಸೂರು ಜಿಲ್ಲೆಯ ಎಲ್ಲಾ ಸ್ವಾಮಿಗಳನ್ನ ಕರೆದುಕೊಂಡು ಎಲ್ಲಾ ಕಡೆ ಕ್ಷೇತ್ರದರ್ಶನ ಮಾಡಿಸಿದರು.

ಮೈಸೂರಿನ ನಮ್ಮ ಮಠಕ್ಕೆ ಕಾರ್ತೀಕದಲ್ಲಿ ಪೂಜೆಗೆ ಬಿನ್ನಹ ಮಾಡಿ ಕರೆತಂದೆವು. ಪ್ರಸಾದದ ನಂತರ ವೈಭವದ ಪೂಜೆ ನಡೆಸಿ ಹೋಗುವಾಗ ಅವರಿಗೆ ಕಿರುಕಾಣಿಕೆ ಕೊಟ್ಟೆನು. ಅದನ್ನು ಸ್ವೀಕರಿಸದೆ ಇದು ನಮ್ಮ ಮಠ, ನೀವು ಅಭಿವೃದ್ಧಿಯಾಗಿ ಎಂದು ಆ ಕಾಣಿಕೆಯನ್ನ ನನ್ನ ಜೇಬಿಗೇ ಹಾಕಿಬಿಟ್ಟರು. ಆ ಸಂದರ್ಭವನ್ನು ಈಗಲೂ ವರ್ಣಿಸಲಾಗುತ್ತಿಲ್ಲ. ಪೂಜ್ಯರೊಡನೆ ಕಳೆದ 40 ವರ್ಷಗಳಲ್ಲಿ ಅನೇಕ ಉಬ್ಬರವಿಳಿತಗಳನ್ನ ಕಂಡರೂ ಪೂಜ್ಯರು ನನ್ನ ಮೇಲೆ ಬಹು ಅಭಿಮಾನ ತೋರಿಸುತ್ತಿದ್ದರು. ಅವರು ತಮ್ಮ ಜಯಂತಿ ಮುಗಿಸಿ ಅಮೇರಿಕಾಕ್ಕೆ ಹೊರಟಾಗ ಅವರ ಪಾದಕ್ಕೆ ನಮಸ್ಕರಿಸಲು ಹೋದಾಗ ನೀವು ವಿರಕ್ತರು ಪಾದಮುಟ್ಟಬೇಡಿ ಹಾಗೆ ನಮಸ್ಕರಿಸಿ ಎಂದು ಹೇಳಿ ನೀವು ನಮ್ಮ ಮಠದ ಆಧಾರಸ್ತಂಭಗಳು ಹಾಗೆ ವಿಶ್ವಾಸದಿಂದ ಇರಬೇಕೆಂದು ಆಗಾಗ್ಗೆ ಮಾತೃ ಹೃದಯದಿಂದ ಹೇಳುತ್ತಿದ್ದರು. ಅಮೇರಿಕಾಕ್ಕೆ ಒಂದು ಪತ್ರ ಬರೆದಿದ್ದೆನು. ಅದರ ಒಕ್ಕಣೆಯಂತೆ ವಾಪಸ್ ಬರುವಾಗ ಆಯುರ್ವೇದ ಕಾಲೇಜಿನಿಂದ ಜಗನ್‌ಮೋಹನ ಅರಮನೆಯವರೆವಿಗೆ ಸಾವಿರಾರು ಭಕ್ತರೊಡನೆ ನಡೆದುಕೊಂಡು ಮೈಸೂರಿನ ಭಕ್ತರು ಇಟ್ಟುಕೊಂಡಿದ್ದ ಸತ್ಕಾರ ಸಮಾರಂಭದಲ್ಲಿ ಪಾಲ್ಗೊಂಡರು. ಆನಂತರ ನೀನು ಪತ್ರ ಬರೆದಂತೆ ನಡೆದುಕೊಂಡೇ ಬಂದೆವು ಎಂದು ಜ್ಞಾಪಿಸಿದರು. ಅವರನ್ನ ಎಂದೂ ಮರೆಯಲಾರೆವು. ಪ್ರತಿದಿನ ಶ್ರೀ ಶಿವರಾತ್ರಿ ರಾಜೇಂದ್ರರನ್ನ, ಮೈಸೂರಿನ ಶ್ರೀಮನ್ಮಹಾರಾಜ ಜಯಚಾಮ ರಾಜೇಂದ್ರ ಒಡೆಯರವರ ಕುಟುಂಬವರ್ಗದವರಿಗೆ ಶುಭವನ್ನ ಕೋರಿ ಹೂವು ದರಿಸಿದ ನಂತರ ಮಂಗಳಾರತಿ ಮಾಡಿ ನಂತರ ಪ್ರಸಾದ ಸ್ವೀಕರಿಸುವ ಪರಿಪಾಠ ಇಂದಿಗೂ ನಮಗೆ ನಡೆದುಬಂದಿದೆ.

ಪರಮಪೂಜ್ಯರ ಮಾತೃಹೃದಯದ ಮುಖ ಕಮಲ ಇಂದಿಗೂ ಸದಾ ನೆನಪಿಗೆ ಬರುತ್ತದೆ. ಕಷ್ಟ ಕಾಲದಲ್ಲಿ ಅವರನ್ನ ನೆನೆದಾಗ ಪರಿಹಾರವಾಗುತ್ತದೆ.

ಈಗಲೂ ಅವರ ಕರಕಮಲ ಸಂಜಾತರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಅದೇ ವಿಶ್ವಾಸ ಇಟ್ಟಿರುತ್ತಾರೆ. ಎಲ್ಲಾ ವಿಶೇಷ ದಿವಸಗಳಲ್ಲಿ ಆಹ್ವಾನ ಕಳುಹಿಸುತ್ತಾರೆ. ಅವರೊಡನೆ ಕೂಡುತ್ತೇವೆ. ಆದರೆ ಅವರು ವಿಶ್ವಕುಟುಂಬಿಗಳು; ನೂರಾರು ಶಾಲೆ ಕಾಲೇಜುಗಳನ್ನ ವಿಶ್ವದಾದ್ಯಂತ ಬೆಳಸಿ ಬಿಡುವಿಲ್ಲದಂತೆ ಇರುತ್ತಾರೆ. ಸಂದರ್ಭ ಸಿಕ್ಕಾಗ ಅವರೊಡನೆ ಹೃದಯಪೂರ್ವಕವಾಗಿ ಮಾತನಾಡಿ ಪ್ರಸಾದ ಸ್ವೀಕರಿಸಿ ಬರುತ್ತೇವೆ. □

# ಅವರ ನೆನಪು ಮಧುರ... ಅಜರಾಮರ

**ಶ್ರೀ ಪರಶಿವಮೂರ್ತಿ ಸ್ವಾಮಿಗಳು**
ಶ್ರೀ ಮಹಾಂತೇಶ್ವರ ಮಠಾಧ್ಯಕ್ಷರು, ಬರಡನಪುರ, ಮೈಸೂರು ತಾ.

ಮೈಸೂರಿನ ಒಂದು ಬಡಾವಣೆಯೇ ಆಗಿದೆ ಎನ್ನುವಷ್ಟು ಹತ್ತಿರದ ಊರಿನವರಾಗಿರುವ ನಾವು ಅಂದಿಗೆ ತಮ್ಮ ವಿಶಿಷ್ಟ ಸಾಧನಾ ವಿಶೇಷ ಸಾತ್ವಿಕಗುಣ ಸಂಪನ್ನತೆಯಿಂದ ಬಹು ಖ್ಯಾತನಾಮರಾಗಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರನ್ನು ಪ್ರಪ್ರಥಮವಾಗಿ ಕಾಣುವಂತಾದುದು ನಮ್ಮ ಇಪ್ಪತ್ತನೆಯ ವಯಸ್ಸಿನ ಅನಂತರ – 1977 ರಲ್ಲಿ. ಕಾರಣ; 1973ರಲ್ಲಿ ಸ್ಥಾಪಿತವಾದ ನಮ್ಮ ಮಠದ ಇತಿಹಾಸವೇ ಇತ್ತೀಚಿನದು. 1958ರಲ್ಲಿ ಜನಿಸಿದವರಾದ ನಮ್ಮನ್ನು ಈ ಮಠದ ಸ್ವಾಮಿಯನ್ನಾಗಿ ಮಾಡಬೇಕೆಂಬ ಗುರಿ ಇಟ್ಟುಕೊಂಡು ನಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ಜಂಗಮ ದೀಕ್ಷೆ ಕೊಡಿಸಿ ತಾವಿಲ್ಲಿ ಮಠವನ್ನು ಕಟ್ಟಿದ ನಮ್ಮ ಹಿರಿಯ ಗುರುವರರಾದ ಶ್ರೀ ಮಹಾಂತೇಶ್ವರ ಮಹಾಸ್ವಾಮಿಗಳವರು ಮರುವರ್ಷವೇ (1974) ನಮಗೆ ಪಟ್ಟಾಧಿಕಾರ ನೆರವೇರಿಸಿ ನಾವು ಪೂರ್ವಾಶ್ರಮದ ನೆನಪುಗಳನ್ನು ಅಳಿಸಿಕೊಳ್ಳಲಿ, ಸಂಸ್ಕಾರಬದ್ಧ ನಡೆನುಡಿಗಳನ್ನು ಮೈಗೂಡಿಸಿಕೊಳ್ಳುವಂತಾಗಲಿ ಎಂಬ



ದೂರದೃಷ್ಟಿಯಿಂದ ಅಂದಿಗೆ ಪ್ರಸಿದ್ಧಿ ಪಡೆದಿದ್ದ ಕನಕಪುರದ ದೇಗುಲ ಮಠ ಹಾಗೂ ಟಿ.ನರಸೀಪುರ ತಾಲ್ಲೂಕು ಮಾಡ್ರಹಳ್ಳಿ ಮಠಗಳಲ್ಲಿ ಇರುವಂತೆ ಮಾಡಿದ್ದರು. ಮಾಡ್ರಹಳ್ಳಿ ಮಠದಲ್ಲಿದ್ದಾಗ ಅಲ್ಲಿನ ಹಿರಿಯ ಗುರುಗಳಾದ ಪೂಜ್ಯ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳವರು (ಇವರು ಹಿಂದೆ ನಮ್ಮ ಹಿರಿಯ ಗುರುಗಳಿಗೆ ಹಾಗೂ ಆ ಮುಂದೆ ನಮಗೂ ಜಂಗಮದೀಕ್ಷೆ ನೀಡಿದ ಮಹಾಗುರುವರರು) ಲಿಂಗೈಕ್ಯರಾಗಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳವರಿಗೆ (ಈಗಿನ ಸ್ವಾಮಿಗಳವರು) ನೂತನವಾಗಿ ಪಟ್ಟಾಧಿಕಾರ ನೆರವೇರಿಸಿದ್ದರಿಂದ ಇವರಿಗೆ ಮಾರ್ಗದರ್ಶಕರಾಗಿ ನೆರವನ್ನು ನೀಡುತ್ತಾ ಇಲ್ಲಿಯೇ ಕೆಲಕಾಲ ಇರಲಿ ಎಂಬುದು ನಮ್ಮ ಹಿರಿಯ ಗುರುಗಳ ಆಶಯವಾಗಿತ್ತು. ಹಾಗಾಗಿ ನಮ್ಮ 20ನೆಯ ವಯಸ್ಸಿನವರೆಗೂ ನಾವಿಲ್ಲೇ ಇದ್ದವರಾಗಿದ್ದೆವು. ಈ ಕಾರಣಗಳಿಂದ ಬಹು ಹತ್ತಿರದ ಊರಿನವರಾಗಿದ್ದ ನಮಗೆ ಈ ಇಪ್ಪತ್ತು ವರ್ಷಗಳವರೆಗೆ ಅವರ ದರ್ಶನ ಭಾಗ್ಯ ದೊರೆತಿರಲಿಲ್ಲ.

ಇಂದು ನಮ್ಮನ್ನು ಬಲ್ಲವರಾಗಿರುವವರೆಲ್ಲರೂ ಬಹುಕಾಲದವರೆಗೆ ಮಠವಿಲ್ಲದಿದ್ದ ನಮ್ಮೂರಿನಲ್ಲಿ ಮಠ ಆದದ್ದು ಮತ್ತು ಭಕ್ತ ಸಂತತಿಯವರಾದ ನಾವು ಜಂಗಮ ದೀಕ್ಷೆ ಪಡೆದು ಮಠಾಧಿಪತಿಯಾಗುವಂತಾದುದು ಈ ಎರಡೂ ಬಹು ಆಕಸ್ಮಿಕವೂ, ಪವಾಡ ಸದೃಶವೂ ಆದ ಘಟನೆಗಳೆಂದು ಅಭಿಮಾನಪೂರ್ವಕವಾಗಿ ಹೇಳುತ್ತಿರುತ್ತಾರೆ. ಆದರೆ ನಮಗೆ ನಾವು ಮೈಸೂರಿಗೆ ಬಹು ಹತ್ತಿರದವರಾಗಿದ್ದರೂ ನಮ್ಮ ಇಪ್ಪತ್ತನೆಯ ವಯಸ್ಸಿನವರೆವಿಗೂ ಪರಮಪೂಜ್ಯರನ್ನು ಕಾಣಲಾಗದೆ ಅಜ್ಞಾತ ಸ್ಥಿತಿಯಲ್ಲೇ ಇರಿಸಿದ್ದ ಕಾಲಧರ್ಮ ಪ್ರಭಾವದ ಮಹಿಮಾನುಭೂತಿಯನ್ನೇ ಕುರಿತು ಚಿಂತಿಸುವುದೇ ಬಹು ವಿಶೇಷವೂ ಅಚ್ಚರಿಯನ್ನುಂಟುಮಾಡುತ್ತಿರುವ ಸಂಗತಿಯಾಗಿದೆ. ಕಾಲೈಕ್ಯ, ಸ್ಥಳೈಕ್ಯ, ಕ್ರಿಯೈಕ್ಯಗಳ ಪ್ರಭಾವಕ್ಕೊಳಗಾಗಿಯೇ ಎಲ್ಲರ ಬದುಕು, ಭವಿಷ್ಯ, ಮತ್ತೊಂದು ಮಗದೊಂದು ಇತ್ಯಾದಿಗಳೆಲ್ಲವೂ ರೂಪಿತವಾಗುತ್ತ, ಘಟಿಸುತ್ತ ಹೋಗುತ್ತಿರುವುದು ನಿಜಕ್ಕೂ ವಿಸ್ಮಯದ, ನಮ್ಮಳವಿಗೆ ನಿಲುಕದ ವಿಚಾರವೇ ಆಗಿದೆ. ಕಾಲಪುರುಷಂಗೆ ಗುಣಂ ಅಣಮಿಲ್ಲಗಡಾ! ಎಂಬ ಮುದ್ದಣ ಕವಿವಾಣಿಯೂ ನೆನಪಾಗುತ್ತಿದೆ.

ಹೀಗೆ ಕಾಲೈಕ್ಯ, ಸ್ಥಳೈಕ್ಯ, ಕ್ರಿಯೈಕ್ಯಗಳ ಪ್ರಭಾವಗಳಿಗೊಳಗಾಗಿ ಮಾಡ್ರಹಳ್ಳಿಯಲ್ಲಿ ನಾವಿರುವಂತಾಗಿದ್ದಾಗಿನ ಅದೊಂದು ಶುಭ ಸಮಯದಲ್ಲಿ ನಮ್ಮ ಸುಕೃತದ ಫಲದಿಂದ ಪರಮಪೂಜ್ಯರ ದರ್ಶನ ಭಾಗ್ಯ ಪಡೆಯುವ ಸುಯೋಗ ನಮಗೊದಗಿಬಂದಿತ್ತು.

1977ರಲ್ಲಿ 'ಮೈಸೂರು ಜಿಲ್ಲಾ ವೀರಶೈವ ಮಠಾಧಿಪತಿಗಳ ಗೋಷ್ಠಿ'ಯನ್ನು ಪ್ರಾರಂಭಿಸುವ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಪ್ರಥಮ ಆಲೋಚನಾ ಸಭೆಗೆ ಮೈಸೂರು ಜಿಲ್ಲೆಯ ಎಲ್ಲ ಮಠಾಧಿಪತಿಗಳನ್ನು ಆಹ್ವಾನಿಸಿದ್ದಂತೆಯೇ ನಮ್ಮನ್ನೂ ಆಹ್ವಾನಿಸಲಾಗಿತ್ತು. ಮೈಸೂರಿನಲ್ಲಿ ಜರುಗಿದ ಈ ಸಭೆಯ ದಿವ್ಯ ಸಾನ್ನಿಧ್ಯವನ್ನು ಶ್ರೀಗಳವರು ವಹಿಸಿದ್ದರು. ಹಾಗಾಗಿ ಈ

ಸಂದರ್ಭದಲ್ಲೇ ನಾವು ಅವರನ್ನು ಪ್ರಪ್ರಥಮವಾಗಿ ಕಾಣಲು ಅವಕಾಶವಾಗಿದ್ದಿತು.

ಅನಂತರ ಗೋಷ್ಠಿ ನೋಂದಾವಣೆಗೊಂಡ ಮೇಲೆ ಮತ್ತೆ ಮತ್ತೆ ಈ ಸಭಾ ಕಾರ್ಯಕ್ರಮಕ್ಕೆ ನಾವು ಮೇಲಿಂದ ಮೇಲೆ ಬರುವಂತಾಗಿದ್ದರಿಂದ ಸುತ್ತೂರು ಶ್ರೀಮಠದಲ್ಲೆ ಜರುಗುತ್ತಿದ್ದ ಈ ಕಾರ್ಯಕ್ರಮದಲ್ಲಿ ನಾವು ಅವರನ್ನು ಸಾಕಷ್ಟು ಬಾರಿ ನೋಡುವಂತಾಗಿತ್ತು. ಪ್ರತಿ ಮೂರು ತಿಂಗಳಿಗೊಮ್ಮೆ ಈ ಸಭೆ ನಡೆಯಬೇಕೆಂಬುದು ಕಡ್ಡಾಯವಾಗಿತ್ತು. ಇಲ್ಲಿಗೆ ಬರುತ್ತಿದ್ದ ನಾವು ಎಲ್ಲರ ಜೊತೆಯಲ್ಲಿರುವುದು, ಸ್ನಾನ, ಪೂಜೆ ಮಾಡುವುದು, ಪ್ರಸಾದ ಸ್ವೀಕರಿಸುವುದು, ಹೊರಡುವುದು ಇದಿಷ್ಟನ್ನೇ ಮಾಡುತ್ತಿದ್ದವರಾಗಿದ್ದವೇ ಹೊರತು ನಾವು ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಲಾಗಿರಲಿಲ್ಲ.

1981ರ ಒಂದು ಸಮಯ ಎಂದೆನಿಸುತ್ತದೆ. ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳವರು ನಮ್ಮನ್ನು ತಮ್ಮ ಬಳಿ ಕರೆದು ನಮ್ಮ ಪೂರ್ವಾಪರಗಳನ್ನೆಲ್ಲ ವಿಚಾರಿಸಿದ್ದರು. ಅಂತೆಯೇ ನಮ್ಮ ಬಗೆಗಿನ ವಿಚಾರಗಳನ್ನು ಶ್ರೀಗಳವರಿಗೆ ತಿಳಿಸಿದ್ದರಿಂದಲೋ ಏನೋ ಇರಬೇಕೆಂದು ತೋರುತ್ತದೆ, ಪರಮಪೂಜ್ಯರು ನಮ್ಮನ್ನು ಪ್ರತ್ಯೇಕವಾಗಿ ಕರೆದು "ನೀವಿನ್ನೂ ಅಲ್ಲೇ (ಮಾಡ್ರಹಳ್ಳಿ ಮಠ) ಇದ್ದೀರಾ? ಇಲ್ಲಿಯ ಕಥೆ ಏನು?" ಎಂದು ಕೇಳಿದ್ದರು. ನಾವು ನಮ್ಮ ಹಿರಿಯ ಗುರುಗಳಾದ ಶ್ರೀ ಮಹಾಂತೇಶ್ವರರೇ ಸದ್ಯಕ್ಕೆ ಬರಡನಪುರ ಮಠದ ಕಾರ್ಯಗಳನ್ನೆಲ್ಲ ನಿರ್ವಹಿಸುತ್ತಿದ್ದಾರೆ. ನಾವು ಅವರ ಆಶಯ, ಅಪ್ಪಣೆಯಂತೆ ಮಾಡ್ರಹಳ್ಳಿ ಮಠದಲ್ಲೇ ಇರುವಂತಾಗಿದೆ ಎಂಬುದನ್ನೆಲ್ಲಾ ತಿಳಿಸಿದ್ದೆವು.

1982 ರಲ್ಲಿ ವೀರಶೈವ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಹದಿನಾಲ್ಕು ದಿನಗಳವರೆಗಿನ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನಾವು 50 ಜನ ಮಠಾಧಿಪತಿಗಳು ಬಸ್ಸಿನಲ್ಲಿ ಹೊರಟಿದ್ದೆವು. ಶ್ರೀಗಳವರು ಕಾರಿನಲ್ಲಿ ಬರುವುದಾಗಿ ತಿಳಿದುಬಂದಿತ್ತು. ಆಂಧ್ರಪ್ರದೇಶಕ್ಕೆ ಸೇರಿರುವ ಶ್ರೀಶೈಲಕ್ಕೆ ಮೊದಲಿಗೆ ಹೋಗುವುದೆಂದು ತೀರ್ಮಾನವಾಗಿತ್ತು. ಅಂದಿಗೆ ಅಲ್ಲಿ ಐ.ಜಿ.ಯಾಗಿದ್ದ ಸನ್ಮಾನ್ಯ ಶ್ರೀ ವೀರಭದ್ರಯ್ಯನವರು ನಮ್ಮನ್ನು ಭದ್ರ ಪೊಲೀಸ್ ರಕ್ಷಣಾ ವ್ಯವಸ್ಥೆಯಲ್ಲಿ ಶ್ರೀಶೈಲಕ್ಕೆ ಕಳುಹಿಸಿಕೊಟ್ಟಿದ್ದರು. ಶ್ರೀಶೈಲದಲ್ಲೇ ಎರಡು ದಿನ ತಂಗಿದ್ದೆವು. ಇಲ್ಲಿದ್ದಾಗ ಪರಮಪೂಜ್ಯ ಜಗದ್ಗುರುಗಳು ನಮ್ಮೊಡನೆ ಬಹು ಸಲಿಗೆಯಿಂದ, ಆತ್ಮೀಯತೆಯಿಂದ, ಖುಷಿಖುಷಿಯಾಗಿ ಇರುತ್ತಿದ್ದರು. ಮುಂದೆ ಬಸವ ಕಲ್ಯಾಣ ಇತ್ಯಾದಿ ಪುಣ್ಯಕ್ಷೇತ್ರಗಳನ್ನು ಇನ್ನುಳಿದಿದ್ದ ದಿನಗಳಲ್ಲಿ ನೋಡಿದ್ದೆವು. ನಾವು ಇದುವರೆವಿಗೆ ಇಷ್ಟು ದೀರ್ಘಕಾಲದ ಪ್ರವಾಸವನ್ನು ಈವರೆವಿಗೂ ಇನ್ನೂ ಮಾಡಲಾಗಿಲ್ಲ. ಶ್ರೀಗಳವರ ಕೃಪೆಯಿರದಿದ್ದರೆ ನಾವು ಈ ಎಲ್ಲ ಸ್ಥಳಗಳನ್ನು ನೋಡಲಾಗುತ್ತಿರಲಿಲ್ಲ. ಅವರೊಡಗೂಡಿ ನಡೆಸಿದ್ದ ಪ್ರವಾಸ ನಮಗೆ ಮರೆಯಲಾಗದ ಅನುಭವವನ್ನುಂಟುಮಾಡಿದೆ.



ಮತ್ತೊಂದು ಮರೆಯಲಾಗದ ಅನುಭವ ನಮಗಾಗಿರುವುದನ್ನಿಲ್ಲಿ ಹೇಳಲೇಬೇಕಾಗಿದೆ. ನಂಜನಗೂಡು ತಾಲ್ಲೂಕು ಏಚಗಹಳ್ಳಿಯಲ್ಲಿ 1980 ರ ದಶಕದ ಒಂದು ಸಮಯದಲ್ಲಿ ಅಲ್ಲಿ ನೂತನವಾಗಿ ಪ್ರಾರಂಭಿಸಲಾಗಿದ್ದ ಶ್ರೀ ಗುರುಮಲ್ಲೇಶ್ವರ ಮಠದ ಪ್ರಾರಂಭೋತ್ಸವಕ್ಕೆ ಶ್ರೀಗಳವರನ್ನು ಆಹ್ವಾನಿಸಲಾಗಿದ್ದಿತು. ಇಲ್ಲಿನ ಕಾರ್ಯಕ್ರಮ ಸಾಂಗವಾಗಿ ನಡೆಯುವಂತಾಗಲು ಬೇಕಾದ ಮಾರ್ಗದರ್ಶನ, ಸಲಹೆ, ಸೂಚನೆ ನೀಡುವುದು ಹಾಗೂ ಶ್ರೀಗಳವರ ಬೆಳ್ಳಿ ಅಡ್ಡಪಲ್ಲಕ್ಕಿ ಉತ್ಸವವನ್ನು ನಡೆಸುವುದು. ಈ ಎಲ್ಲ ಜವಾಬ್ದಾರಿಯನ್ನು ಈ ಊರಿನ ಸದ್ಭಕ್ತರು ನಾವೇ ವಹಿಸಿಕೊಳ್ಳಬೇಕೆಂದು ನಮ್ಮಲ್ಲಿ ವಿನಂತಿಸಿಕೊಂಡಿದ್ದರಿಂದ ಈ ಎಲ್ಲವನ್ನು ಎರಡು ಮೂರು ದಿನ ಮುಂಚೆ ಈ ಊರಿಗೆ ಬಂದು ಉಳಿದುಕೊಂಡು ವ್ಯವಸ್ಥೆಗೊಳಿಸಿದ್ದೆವು. ಕಾರ್ಯಕ್ರಮದ ದಿನ ಬೆಳ್ಳಿ ಅಡ್ಡಪಲ್ಲಕ್ಕಿಯಲ್ಲಿ ಶ್ರೀಗಳವರನ್ನು ಕೂರಿಸಿ ಊರು ತುಂಬ ಉತ್ಸವ ಮಾಡಲು ಸಿದ್ಧವಾಗಿತ್ತು. ಅಂದು ಸೇರಿದ್ದ ಜನಸ್ತೋಮವನ್ನು ಕಂಡು ನಾವು ಬೆರಗಾಗಿದ್ದೆವು. ಇದೇ ಪ್ರಥಮ ಬಾರಿಗೆ ನಾವು ಇಂತಹ ಅದ್ಧೂರಿಯಾದ ಉತ್ಸವವನ್ನು ನೋಡಿದ್ದುದು. ಇಲ್ಲಿ ಮತ್ತೊಂದು ಸ್ವಾರಸ್ಯಕರವಾದ ವಿಷಯವನ್ನೂ ಸ್ಮರಿಸುವಂತಾಗಿದೆ. ಅದೇನೆಂದರೆ, ಈ ಕಾರ್ಯಕ್ರಮಕ್ಕೆ ಆಗಮಿಸಿದ್ದ ಒಂದು ಪ್ರಸಿದ್ಧ ಮಠದ ಸ್ವಾಮಿಗಳವರು "ಉತ್ಸವ ಮುಗಿದ ಕೂಡಲೆ ನಾವು ಶ್ರೀಗಳವರಿಗೆ ನಮಸ್ಕರಿಸಿ, ಮಾತನಾಡಿಸಿ ಹೋಗಿಬಿಡುತ್ತೇವೆ, ನಮಗೆ ಮತ್ತೊಂದು ಮುಖ್ಯ ಕೆಲಸ ಇದೆ" ಎಂದು ಹೇಳಿದ್ದರು. ಆದರೆ ಅದ್ಧೂರಿಯಾಗಿ ನಡೆದ ಈ ಉತ್ಸವದ ಸೊಗಸನ್ನು ಕಣ್ಣಾರೆ ಕಂಡು ಅನುಭವಿಸಿದ್ದ ಅವರು ಅದು ಏಕೋ ಮನಸ್ಸನ್ನು ಬದಲಿಸಿ ಸಭಾಕಾರ್ಯವನ್ನು ಮುಗಿಸಿಕೊಂಡು ಶ್ರೀಗಳವರಿಗೆ ನಮಸ್ಕರಿಸಿ, ಅವರ ಅಪ್ಪಣೆ ಪಡೆದು ಆನಂತರ ಹೋದವರಾಗಿದ್ದರು.

ಈ ಉತ್ಸವ ನಡೆಸಿದ ಆನಂತರದ ದಿನಗಳಲ್ಲಿ ನಾವವರಿಗೆ ಹೆಚ್ಚು ಪರಿಚಯಕ್ಕೆ ಬಂದವರಾಗಿದ್ದೆವು. ಮುಂದೆ ಮೈಸೂರಿಗೆ ಕಾರ್ಯಾರ್ಥವಾಗಿ ನಾವು ಬಂದಾಗಲೆಲ್ಲ ಸುತ್ತೂರು ಶ್ರೀಮಠಕ್ಕೆ ಹೋಗಿ ಅವರ ದರ್ಶನಾಶೀರ್ವಾದಗಳನ್ನು ಪಡೆದು ಹೋಗುವುದನ್ನು ರೂಢಿಸಿಕೊಂಡಿದ್ದೆವು. ಅದುವರೆವಿಗೆ ಅವರು ಬಹು ಎತ್ತರದವರು, ಅವರನ್ನು ಮಾತನಾಡಿಸುವುದು ಹೇಗೆ ಎಂದು ಭಯಮಿಶ್ರಿತ ಭಾವದಿಂದ ಕೂಡಿ ಅವರಿವರ ಬೆಂಬಲವಿಡಿದು ಅವರನ್ನು ನೋಡುತ್ತಿದ್ದ ನಾವು ಇದೀಗ ಸ್ವತಃ ನಾವೇ ಖುದ್ದಾಗಿ ಅವರನ್ನು ನೋಡಿ ಮಾತನಾಡುವಂತಾಗಿದ್ದೆವು.

ವಿದೇಶಕ್ಕೆ ಹೋಗಿ ಪ್ರವಾಸ ಮುಗಿಸಿ ವಾಪಸ್ಸು ಬಂದಿದ್ದ ಕೆಲಸಮಯದಲ್ಲೆ ಅವರ ಆರೋಗ್ಯ ಹದಗೆಟ್ಟು ನಿತ್ರಾಣರಾಗಿದ್ದ ಸುದ್ದಿ ನಮಗೆ ತಲುಪಿತ್ತು. ಮಾಡ್ರಹಳ್ಳಿ ಸ್ವಾಮಿಗಳು ಮತ್ತು ನಾವು ಇಬ್ಬರೂ ಮೈಸೂರಿನ ಸುತ್ತೂರು ಮಠಕ್ಕೆ ಬಂದಿದ್ದೆವು. ವೈದ್ಯರು ಪರಿಚಾರಕರೊಬ್ಬರನ್ನುಳಿದು ಮತ್ಯಾರೂ ಅವರ ಬಳಿ ಹೋಗದಂತೆ ಎಚ್ಚರಿಕೆ ವಹಿಸಲಾಗಿತ್ತು. ನಾವವರನ್ನು ನೋಡಲೇಬೇಕೆನ್ನುತ್ತಿದ್ದೇವೆ ಎನ್ನುವುದನ್ನು ಪರಿಚಾರಕರ ಮೂಲಕ ಅವರಿಗೆ

ಹೇಳಿ ಕಳಿಸಿದ್ದೆವು. ನಮ್ಮ ಪುಣ್ಯ ನಮ್ಮೀರ್ವರನ್ನು ಕರೆಯಿಸಿಕೊಂಡು ಏನೂ ಮಾತನಾಡದೆ ಹಾಗೆ ಹಾಗೆಯೇ ತಮ್ಮ ಕೃಪಾದೃಷ್ಟಿ ಬೀರಿದ್ದರು.

6.12.1986ರಲ್ಲಿ ಅವರು ಲಿಂಗೈಕ್ಯರಾಗಿ ಅವರ ಪಾರ್ಥಿವ ಶರೀರದ ಉತ್ಸವ ರಾಮಾನುಜರಸ್ತೆಯಲ್ಲಿ ಸಾಗಿ ಬಂದಿತ್ತು. ಶಂಭು ಪ್ರಾಥಮಿಕ ಆರೋಗ್ಯ ಕೇಂದ್ರದ ಮೂಲೆಯೊಂದರಲ್ಲಿ ನಿಂತು ದರ್ಶನ ಪಡೆದಿದ್ದ ನಮಗೆ ದುಃಖ ಒತ್ತರಿಸಿ ಬಂದು, ನಾವೆಷ್ಟೇ ತಡೆದರೂ ತಡೆಯಲಾಗದೆ ಅಳು ಬಂದು ಬಿಕ್ಕಿ ಬಿಕ್ಕಿ ಅತ್ತಿದ್ದೆವು. ನಮ್ಮ ಸುತ್ತಮುತ್ತ ಇದ್ದವರೆಲ್ಲ ನಮ್ಮನ್ನೆ ಸಂತೈಸುತ್ತಿದ್ದರು. ನಮ್ಮ ಅಳು ಬಹಳ ಹೊತ್ತು ಮುಂದುವರೆದಿತ್ತು. ನಾವೆಂದೂ ಅಷ್ಟು ಅತ್ತವರಾಗಿರಲಿಲ್ಲ.

ನಾವವರ ಪರಿಚಯಕ್ಕೆ ಬಂದಾಗಿನಿಂದ ಏನೂ ಕೇಳಿರಲಿಲ್ಲ, ಬೇಡಿರಲಿಲ್ಲ. ಇತರರಿಗೂ ಸಹಾಯ ಮಾಡಿ ಎಂದಿರಲಿಲ್ಲ. ಅವರ ಸತ್ಸಂಗ, ಸಾನ್ನಿಧ್ಯವನ್ನಷ್ಟೇ ಬಯಸಿದ್ದವರಾಗಿದ್ದೆವು. ಇದೀಗ ನಾವವರ ಮೇಲೆ ಇರಿಸಿದ್ದ ಭಕ್ತಿಭಾವ, ನಿಷ್ಠೆಗಳು ಅಂತೆಯೇ ಶಾಶ್ವತವಾಗಿ ಉಳಿಯುವಂತಾಗಲಿ ಎಂಬಂತೆ ಅವರ ಕರಕಮಲ ಸಂಜಾತರಾದ ಇಂದಿನ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಇತ್ತೀಚೆಗೆ ಸುತ್ತೂರು ಮಠದ ಅಧೀನದಲ್ಲಿರುವ ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಬಳಿಯ ಶ್ರೀ ಸಂಗಮ ಕ್ಷೇತ್ರದ ಶ್ರೀ ಕಾರ್ಯ ಸ್ವಾಮಿ ಮಠದ ಜವಾಬ್ದಾರಿಯನ್ನು ನಮಗೆ ಹೊರಿಸಿದ್ದಾರೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಲ್ಲಿ ನಾವು ಅಷ್ಟು ದಿನ ಗುರುತಿಸಿದ್ದ ಅವರ ಮಂದಸ್ಮಿತ ಸುಂದರವದನ, ಕರುಣಾಂತರಂಗಭರಿತ ಘನಗಂಭೀರ ವ್ಯಕ್ತಿತ್ವದ ನೆನಪುಗಳು ಎಂದೆಂದಿಗೂ ಮಧುರ, ಅಜರಾಮರ.

ಸಂದರ್ಶನ : ಜೀಮಾರಹಳ್ಳಿ ಗುರುಸಿದ್ಧಪ್ಪ

ಸಂಸಾರವೆಂಬುದೊಂದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ !
ಇದ ನಚ್ಚಿ ಕೆಡಬೇಡ – ಸಿರಿಯೆಂಬುದ !
ಮಱೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

**ಬಸವಣ್ಣ**

# ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರೊಡನೆ ಸಂದರ್ಶನ

**ಸಂದರ್ಶಕರು: ಮಲೆಯೂರು ಗುರುಸ್ವಾಮಿ**
''ಪ್ರಸಾದ'' ಸಂಪಾದಕರು

ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರಿಗೆ ಈಗ 98 ವರ್ಷಗಳು. ಶ್ರೀಮಠಕ್ಕೆ ಸಂಬಂಧಿಸಿದ ಏನಾದರೂ ಪ್ರಶ್ನೆಗಳನ್ನು ಕೇಳಿದರೆ, ಏನೋ ನೆನಪಿಸಿಕೊಂಡವರಂತೆ ತುಸು ಹೊತ್ತು ಮೌನವಾಗಿದ್ದು, ಎಲ್ಲಿಯೋ ನೋಡುತ್ತಾ, ನಿಧಾನಗತಿಯಲ್ಲಿ ಮಾತನಾಡತೊಡಗುತ್ತಾರೆ. ಧ್ವನಿಯಲ್ಲಿ ಹಿಂದಿನ ಗಟ್ಟಿತನ ಇಲ್ಲದಿದ್ದರೂ, ವಿಚಾರಗಳ ಸ್ಪಷ್ಟತೆಯಂತೂ ಮಾಸಿದಂತೆ ಕಂಡು ಬರುವುದಿಲ್ಲ. ಎದುರಿಗೆ ಕುಳಿತು ಮಾತನಾಡುವುದೇ ಒಂದು ರೋಮಾಂಚಕಾರಿ ಅನುಭವ. ಅವರ ಮಾತುಗಳನ್ನ ಹಿಂಬಾಲಿಸಿಕೊಂಡು ಹೋದಷ್ಟೂ, ಸುಮಾರು ಏಳೆಂಟು ದಶಕಗಳ ಶ್ರೀಮಠದ ಇತಿಹಾಸ ನಮ್ಮ ಕಣ್ಣುಗಳ ಮುಂದೆ ಬಿಚ್ಚಿಕೊಳ್ಳುತ್ತದೆ. ಶ್ರೀಪೀಠದ ಒಳ ಹೊರಗಿನ ಬೆಳವಣಿಗೆಯ ಒಂದೊಂದು ಹಂತವನ್ನೂ ನಾವು ಹತ್ತುತ್ತಾ ಹೋಗುತ್ತಿದ್ದೇವೇನೋ ಎನ್ನುವ ಅನುಭವ ಉಂಟಾಗತೊಡಗುತ್ತದೆ. ಪೂಜ್ಯ ಶ್ರೀ ಶಿವಪ್ರಭು ಸ್ವಾಮಿಗಳವರು ಶ್ರೀಪೀಠದ ಮೂರು ಜನ ಜಗದ್ಗುರುಗಳೊಡನೆ ನಿಕಟ ಸಂಪರ್ಕವಿಟ್ಟುಕೊಂಡು ಬಾಳಿದವರು. ಮಠದ ಕಲ್ಯಾಣಕಾರಕ ಕಾರ್ಯಕ್ರಮಗಳ ಯೋಜಕರಾಗಿ,

ನಿರ್ದೇಶಕರಾಗಿ, ತನುಮನಗಳನ್ನು ಸಮರ್ಪಿಸಿಕೊಂಡು ಅಹರ್ನಿಶಿ ದುಡಿದವರು. ಅವರ ಒಂದೊಂದು ಮಾತಿನ ಹಿಂದೆ, ಲಿಂ|| ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೊಡನೆ ಹೆಜ್ಜೆಗೆ ಹೆಜ್ಜೆ ಹಾಕಿದ್ದರ ಸವಿನೆನಪಿನ ಸಾರ್ಥಕ್ಯ ಕಂಡುಬರುತ್ತದೆ. ಅತ್ತ ಗ್ರಾಂಥಿಕವೂ ಅಲ್ಲದ, ಇತ್ತ ಗ್ರಾಮ್ಯವೂ ಅಲ್ಲದ ಅವರ ಭಾಷೆಯ ಬನಿ ಕೇಳುಗರಿಗೆ ಒಂದು ರೀತಿಯ ವಿಶೇಷ ಅನುಭವವನ್ನು ತಂದುಕೊಡುವಂತಹುದು. ಮಠದ ಆಸ್ತಿಪಾಸ್ತಿಗಳ ವಿವರ, ಅವುಗಳನ್ನು ಪಡೆದ ರೀತಿ ಈ ಎಲ್ಲವನ್ನೂ ಚಾಚೂ ತಪ್ಪದೆ ದಿನಾಂಕ, ಗಂಟೆಗಳ ಸಮೇತ ಸವಿವರವಾಗಿ ಹೇಳುವ ಅವರ ನೆನಪಿನ ಶಕ್ತಿ ದಂಗುಬಡಿಸುತ್ತದೆ. ಮುಚ್ಚುಮರೆಯಿಲ್ಲದ ನೇರ ನುಡಿ; ತನ್ನ ಅಂದಂದಿನ ಒಂದೊಂದು ನಡವಳಿಕೆಯ ಹಿಂದಿನ ಉದ್ದೇಶಕ್ಕೆ ನಿರ್ದಿಷ್ಟವಾದ ಸಮರ್ಥನೆ ಇವುಗಳನ್ನು ಯಾರೂ ಒಪ್ಪಲೇಬೇಕು.

ನಿಜಕ್ಕೂ ಕ್ಯಾತನಹಳ್ಳಿ ಶ್ರೀಗಳು ಹಿರಿಯ ಹಾಗೂ ಕಿರಿಯ ತಲೆಮಾರಿನ ಚಿಂತನೆಯ ಹದವರಿತ ಬೆಸುಗೆಯಾಗಿದ್ದಾರೆ. ಇಂದಿನ ಶ್ರೀಮಠದ ಕಾರ್ಯವ್ಯಾಪ್ತಿ, ಹಾಗೂ ಕಾರ್ಯಭಾರ ಪೂಜ್ಯರಿಗೆ ಅನನ್ಯ ಆತ್ಮತೃಪ್ತಿಯನ್ನು ತಂದಿರುವುದಂತೂ ನಿಜ.

**1. ನಿಮ್ಮ ಅರಿವಿಗೆ ಬಂದಂತೆ - ಸುತ್ತೂರು ಶ್ರೀ ಜಗದ್ಗುರುಪೀಠದ ಪ್ರಗತಿಯಲ್ಲಿ ಮಂತ್ರಮಹರ್ಷಿಗಳ ಪಾತ್ರವೇನು/ಕೊಡುಗೆಗಳೇನು ?**

ನಮ್ಮ ಮಠವು ಆಧುನಿಕ ಕಾಲದ ಅವಶ್ಯಕತೆಗಳಿಗೆ ಸ್ಪಂದಿಸಲು ಪ್ರಾರಂಭವಾದದ್ದೇ ಮಂತ್ರಮಹರ್ಷಿಗಳ ಕಾಲದಲ್ಲಿ. ಅವರದು ಒಂದು ರೀತಿಯಲ್ಲಿ ತುಂಬಾ ಬಿಗಿಯಾದ ನಿಲುವು. ಆಗಾಗ ಶ್ರೀ ರಾಜೇಂದ್ರ ಸ್ವಾಮಿಗಳು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿದ ಸಂದರ್ಭವನ್ನು ನೆನೆಸಿಕೊಳ್ಳುತ್ತಿರುತ್ತೇನೆ. ನೇರವಾಗಿ ಅವರನ್ನು ಕೇಳಿ ಒಪ್ಪಿಸಿಕೊಳ್ಳುವ ಧೈರ್ಯ ಸಾಲದೆ, ರಾಜೇಂದ್ರ ಸ್ವಾಮಿಗಳು ಬೇರೆಯವರನ್ನು ಅವರ ಬಳಿಗೆ ಕಳುಹಿಸಿ ಒಪ್ಪಿಗೆ ಪಡೆಯಬೇಕಾಯಿತು. ಅದೂ ಇಂತಿಷ್ಟೇ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳಬೇಕೆನ್ನುವ ನಿಯಮದೊಡನೆ. ಆಗತಾನೇ ಸುತ್ತೂರು ಭಾಗಕ್ಕೆ ನಾಲೆ ಬಂದಿತ್ತು. ಎಲ್ಲ ಭೂಮಿಯನ್ನು ವ್ಯವಸ್ಥಿತಗೊಳಿಸಿ, ಒಳ್ಳೆಯ ಬೆಳೆ ತೆಗೆಯಲು ತುಂಬಾ ಶ್ರಮಿಸಿದರು. ಮಠ ಆರ್ಥಿಕವಾಗಿ ಸಬಲವಾಗತೊಡಗಿತು. ಮಠದ ವ್ಯವಹಾರದಲ್ಲಿ ಒಂದು ಅಚ್ಚುಕಟ್ಟುತನವನ್ನು ತಂದರು. ಅದು ಈಗಲೂ ನಮಗೆ ಮಾದರಿಯಾಗಿದೆ.

**2. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಹಾಗೂ ನಿಮ್ಮ ವಿದ್ಯಾಭ್ಯಾಸಕ್ರಮದ ವಿಧಿ-ವಿಧಾನಗಳೇನು?**

ರಾಜೇಂದ್ರ ಸ್ವಾಮಿಗಳವರನ್ನು ಕಂಡರೆ ಮಂತ್ರಮಹರ್ಷಿಗಳಿಗೆ ತುಂಬಾ ಪ್ರೀತಿ. ಪ್ರೀತಿಯಿಂದ ಪುಟ್ಟಸ್ವಾಮಿ ಎಂದೇ ಕರೆಯುತ್ತಿದ್ದರು. ಇವರನ್ನೂ ತುಂಬಾ ವಿದ್ಯಾವಂತರನ್ನಾಗಿಸಬೇಕೆನ್ನುವುದು ಅವರ ಹೆಬ್ಬಯಕೆಯಾಗಿತ್ತು. ಅದಕ್ಕಾಗಿಯೇ ಮೈಸೂರಿನಲ್ಲಿ



ಒಂದು ಮನೆ ಮಾಡಿ ರಾಜೇಂದ್ರ ಸ್ವಾಮಿಗಳನ್ನೂ, ನನ್ನನ್ನೂ ಮೈಸೂರಿಗೆ ಕಳುಹಿಸಿದರು. ಆಗ ಅವರಿಗೆ ಹತ್ತು ವರ್ಷಗಳು. ನನಗೆ ಹದಿನಾಲ್ಕು ವರ್ಷಗಳು. ಚಿಕ್ಕ ಮಾರ್ಕೆಟ್ ಕಟ್ಟಡದ ಮೇಲ್ಭಾಗದಲ್ಲಿ 'ಶಂಕರ ವಿಲಾಸ ಪಾಠಶಾಲೆ' ಅಂತ ಇತ್ತು. ಶ್ರೀ ಬಸವರಾಜಶಾಸ್ತ್ರಿಗಳು ನಮ್ಮ ವಿದ್ಯಾಗುರುಗಳು. ಅಲ್ಲಿ ಸಂಸ್ಕೃತಾಧ್ಯಯನ ನಡೆಯುತ್ತಿತ್ತು. ಎರಡು ವರ್ಷಗಳ ವಿದ್ಯಾಭ್ಯಾಸದ ನಂತರ, ರಾಜೇಂದ್ರ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವಾಯಿತು. ಅನಂತರ ನಮ್ಮ ವಾಸ್ತವ್ಯ ರಾಮಾನುಜ ರಸ್ತೆಯ ನಮಃ ಶಿವಾಯ ಮಠದಲ್ಲಿ. ಮುಂದೆ ಕ್ಯಾತನಹಳ್ಳಿ ಪಾಠಶಾಲೆಯಲ್ಲಿ.

**3. ತಾವು ವಿದ್ಯಾರ್ಥಿಗಳಾಗಿದ್ದಾಗಲೇ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರರು ಪ್ರಸಾದ ನಿಲಯವನ್ನು ಪ್ರಾರಂಭ ಮಾಡಿದುದಕ್ಕೆ ಒದಗಿಬಂದ ಹಿನ್ನೆಲೆಯೇನು?**

ರಾಜೇಂದ್ರ ಸ್ವಾಮಿಗಳವರಿಗೆ ಮೊದಲಿನಿಂದಲೂ, ಉನ್ನತ ವಿದ್ಯೆಯ ಬಯಕೆಯ ಜೊತೆಗೆ ಗ್ರಾಮೀಣ ಪ್ರದೇಶದ ಜನತೆಯ ವಿದ್ಯಾಭ್ಯಾಸಕ್ಕೆ ಒತ್ತು ಕೊಡಬೇಕು ಎನ್ನುವ ಬಯಕೆ. ಆಗ ಈ ಭಾಗದ ವೀರಶೈವರಲ್ಲಿ, ಕೇವಲ ಮೂರೇಮೂರು ಜನ ಪದವೀಧರರಾಗಿದ್ದರು. ಉಳಿದ ಅನೇಕರಿಗೆ ಆ ಭಾಗ್ಯ ಇರಲಿಲ್ಲ. ಕ್ಯಾತನಹಳ್ಳಿ ಸಾಹುಕಾರ ಸಿದ್ಧಲಿಂಗಯ್ಯನವರು ವಾಣೀವಿಲಾಸ ರಸ್ತೆಯಲ್ಲಿ ಸಂಸ್ಕೃತ ಪಾಠಶಾಲೆಯ ಜೊತೆಗೆ ಕೆಲವು ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಟ್ಟಿದ್ದರು. ರಾಜೇಂದ್ರ ಸ್ವಾಮಿಗಳು ಕಾಶಿಯಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಬೇಕೆಂದು ಹೋಗಿದ್ದು, ಶ್ರೀ ಗೌರೀಶಂಕರ ಸ್ವಾಮಿಗಳವರ ಮಾರ್ಗದರ್ಶನದಂತೆ ಹಿಂದಕ್ಕೆ ಬಂದರು. ಅಂದಿನಿಂದ ಅವರಿಗೆ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆನ್ನುವ ಆಸೆ ಹೆಚ್ಚಾಗುತ್ತಾ ಹೋಯಿತು. ಅದಕ್ಕಾಗಿ ನಂಜುಮಳಿಗೆ ಹತ್ತಿರ ಒಂದು ಕಟ್ಟಡವನ್ನು ಬಾಡಿಗೆಗೆ ಹಿಡಿದು ಹಾಸ್ಟೆಲ್‌ನ್ನು ಪ್ರಾರಂಭಿಸಿಯೇ ಬಿಟ್ಟರು. ಆಗಿನ ಸಮಸ್ಯೆಗಳು ಒಂದೇ ಎರಡೇ?

**4. ಪ್ರಸಾದನಿಲಯಗಳನ್ನು ಹತ್ತಾರು ಕಡೆ ತೆರೆಯುವುದರಿಂದಾಗಿಯೇ ಸುತ್ತೂರು ಪೀಠದ ಕೀರ್ತಿಯು ಎಲ್ಲೆಡೆಯು ಪ್ರಸರಿಸುವಂತಾಯಿತು ಎನ್ನುಬಹುದೆ?**

ಹೇಳಬೇಕೆಂದರೆ, ಕೀರ್ತಿ ಸಂಪಾದನೆಗಾಗಿ ನಾವು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಿಲ್ಲ. ಆದರೆ, ನಮ್ಮ ವಿದ್ಯಾರ್ಥಿನಿಲಯದ ಅನೇಕ ವಿದ್ಯಾರ್ಥಿಗಳು ಕೀರ್ತಿವಂತರಾದುದು ನಮಗೆ ತುಂಬಾ ಹೆಮ್ಮೆ ಎನಿಸುತ್ತದೆ. ಡಾ. ಡಿ.ಎಂ. ನಂಜುಂಡಪ್ಪ, ಡಾ. ಜಿ.ಎಸ್. ಶಿವರುದ್ರಪ್ಪ, ಎಲ್. ರೇವಣಸಿದ್ದಯ್ಯ, ಸಾ.ಶಿ. ಮರುಳಯ್ಯ, ಡಾ. ಯು.ಆರ್. ಅನಂತಮೂರ್ತಿ, ಡಾ. ಜಿ.ಎಸ್. ಸಿದ್ಧಲಿಂಗಯ್ಯ – ಹೀಗೆ ಇನ್ನೂ ಅನೇಕ ಜನ ಪ್ರತಿಭಾವಂತರು ನಮ್ಮಲ್ಲಿ ಇದ್ದವರು. ಹಾಗೆಯೇ ಅಸಂಖ್ಯ ಗ್ರಾಮೀಣರು ಇಲ್ಲಿ ಅಶನ ವಸತಿಗಳನ್ನೂ ಪಡೆದಿದ್ದಾರೆ. ಶ್ರೀ ಶ್ರೀಗಳವರ ಬಯಕೆ ಇದರಿಂದ ಈಡೇರಿದೆ. ನನಗಂತೂ ಇದು ಸಂತೋಷದಾಯಕ ವಿಷಯವಾಗಿದೆ.

**5. ಅಂದಿನ ದಿನಮಾನಗಳಲ್ಲಿ ಪ್ರಸಾದನಿಲಯಗಳನ್ನು ನಡೆಸುವ ಸಂದರ್ಭದಲ್ಲಿ ರಾಜೇಂದ್ರ ಸ್ವಾಮಿಗಳು ಅನುಭವಿಸಿದ ನೋವು-ನಲಿವುಗಳ ವಿವರಗಳೇನು? ಕಷ್ಟ-ಕಾರ್ಪಣ್ಯ ಗಳೇನು?**

ಹೇಳಿ ಕೇಳಿ ಅದು ರೇಷನ್ ಕಾಲ, ಜೊತೆಗೆ ನಮ್ಮ ಮಠದ ಆರ್ಥಿಕ ಸ್ಥಿತಿಗತಿಗಳೂ ಅಷ್ಟು ಚೆನ್ನಾಗಿರಲಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯಂತೂ ಪ್ರತಿವರ್ಷವೂ ಹೆಚ್ಚುತ್ತಲೇ ಇತ್ತು. ಇಂದಿಗಾಯಿತು,ಇನ್ನು ನಾಳೆಗೆ ಹೇಗೆ ಎನ್ನುವ ಚಿಂತೆ ಶ್ರೀಗಳವರನ್ನು ಸದಾ ಕಾಡುತ್ತಲೇ ಇದ್ದರೂ, ಅವರು, ಹೇಗೋ ಆಗುತ್ತದೆ ಸುಮ್ಮನಿರಿ ಎನ್ನುತ್ತಿದ್ದರು. ಅವರ ಚಿನ್ನದ ಕರಡಿಗೆಯೂ ಒಮ್ಮೆ ಗಿರವಿ ಅಂಗಡಿಗೆ ಹೋಗಿತ್ತು ಎಂದ ಮೇಲೆ ಉಳಿದಿದ್ದನ್ನು ನೀವೇ ಯೋಚಿಸಿ. ದವಸ ಧಾನ್ಯ ಹಣ ಸಂಗ್ರಹಣೆಗಾಗಿ ಊರೂರು ಸುತ್ತುತ್ತಿದ್ದ ರಾಜೇಂದ್ರ ಸ್ವಾಮಿಗಳಿಗೆ ಎಷ್ಟೋ ದಿನಗಳು ಪೂಜೆ ಪ್ರಸಾದಗಳೇ ಇರುತ್ತಿರಲಿಲ್ಲ. ಆಗಾಗ ಗೌರೀಶಂಕರ ಸ್ವಾಮಿಗಳು ಇವರನ್ನು ಎಚ್ಚರಿಸಿ, ಕಟ್ಟುನಿಟ್ಟಿನ ಆದೇಶ ಕೊಡುತ್ತಿದ್ದುದೂ ಉಂಟು. ನಗರದ ಅನೇಕ ಅಂಗಡಿಗಳವರು, ನಾವು ನಿಗದಿತ ಸಮಯಕ್ಕೆ ಮರುಪಾವತಿ ಮಾಡುವುದಿಲ್ಲ ಎಂದುಕೊಂಡು, ಸಾಲ ಕೊಡಲೂ ಹಿಂಜರಿಯುತ್ತಿದ್ದರು. ಕೆಲವೊಮ್ಮೆ ಹಗುರವಾಗಿ ಮಾತನಾಡುತ್ತಿದ್ದುದೂ ಉಂಟು.

**6. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಗೂ ಶ್ರೀಮನ್ಮಹಾರಾಜ ಶ್ರೀ ಜಯಚಾಮ ರಾಜೇಂದ್ರ ಒಡೆಯರಿಗೂ ಇದ್ದ ಗುರು-ಶಿಷ್ಯ ಬಾಂಧವ್ಯದ ಸ್ವರೂಪವೇನು?**

ಅರಮನೆಗೂ ಶ್ರೀ ಗೌರೀಶಂಕರ ಮಠಕ್ಕೂ ಆಗ ಬಹಳ ಒಳ್ಳೆಯ ಸಂಬಂಧವಿತ್ತು. ಅವರ ಮೂಲಕ ನಮ್ಮ ಮಠದ ಪರಿಚಯ ಮಹಾರಾಜರಿಗೆ ಉಂಟಾಯಿತು. ಮುಂದೆ ಮಹಾರಾಜರಿಗೂ, ರಾಜೇಂದ್ರ ಸ್ವಾಮಿಗಳಿಗೂ ಹೆಚ್ಚಿನ ಬಾಂಧವ್ಯ ಬೆಳೆಯುವುದಕ್ಕೆ ಕಾರಣರಾದವರು. ಎ.ಡಿ.ಸಿ. ಮಹದೇವಯ್ಯನವರು. ನಜರ್‌ಬಾದ್‌ನಲ್ಲಿರುವ ಬೇಸಿಗೆ ಅರಮನೆಯಲ್ಲಿ ಇವರುಗಳು ಸೇರುತ್ತಿದ್ದರು. ಮುಂದೆ ರಾಜೇಂದ್ರ ಸ್ವಾಮಿಗಳಿಂದ, ಮಹಾರಾಜರು ಎಷ್ಟು ಪ್ರಭಾವಿತರಾದರೆಂದರೆ, ತಮ್ಮ ಅನೇಕ ವ್ಯವಹಾರಗಳನ್ನು ಇವರ ಗಮನಕ್ಕೆ ತಂದೇ ಮಾಡುತ್ತಿದ್ದರು. ತಮ್ಮ ಬಳಿಗೆ ಬರುತ್ತಿದ್ದ ಅನೇಕ ನ್ಯಾಯತೀರ್ಮಾನಗಳನ್ನೂ ಮಹಾರಾಜರು, ರಾಜೇಂದ್ರ ಸ್ವಾಮಿಗಳ ಸಮ್ಮುಖದಲ್ಲಿಯೇ ಮಾಡುತ್ತಿದ್ದರು. ತಮ್ಮ ಅನೇಕ ವೈಯಕ್ತಿಕ ಸಮಸ್ಯೆಗಳನ್ನು ಮುಕ್ತ ಮನಸ್ಸಿನಿಂದ ಶ್ರೀಗಳವರ ಮುಂದೆ ನಿವೇದಿಸಿಕೊಳ್ಳುತ್ತಿದ್ದರು. ಜಯಚಾಮರಾಜ ಒಡೆಯರಿಗಂತೂ ನಮ್ಮ ಗುರುಗಳ ಬಗ್ಗೆ ತುಂಬಾ ಭಕ್ತಿ ಇತ್ತು.

**7. ರಾಜೇಂದ್ರ ಜಗದ್ಗುರುಗಳವರ ಚಿರಸಂಗಾತಿಗಳಾಗಿದ್ದರೂ ನೀವು ಕ್ಯಾತನಹಳ್ಳಿ ಶ್ರೀಗಳು ಎಂದೇ ಖ್ಯಾತನಾಮರಾದುದಕ್ಕೆ ಕಾರಣವೇನು?**

ಈಗಲೂ ನನ್ನ ಕ್ಯಾತನಹಳ್ಳಿ ಸ್ವಾಮಿಗಳೆಂದೇ ಜನ ಕರೆಯುತ್ತಾರೆ. ಹಾಗೆ ನೋಡಿದರೆ ನಾನು ಕ್ಯಾತನಹಳ್ಳಿ (ಪಾಂಡವಪುರ ತಾಲ್ಲೂಕು)ಯ ಮಠದಲ್ಲಿ ಇದ್ದವನೇ ಅಲ್ಲ. ಮಂತ್ರಮಹರ್ಷಿಗಳು ನನಗೆ ಪಟ್ಟಾಧಿಕಾರ ಮಾಡುವಾಗಲೇ ಈ ಷರತ್ತನ್ನು ಹಾಕಿದ್ದರು. ಏಕೆಂದರೆ ನಾನು ಇಲ್ಲಿ ರಾಜೇಂದ್ರ ಸ್ವಾಮಿಗಳವರ ನೆರಳಿನಂತೆ ಇರಬೇಕಾಗಿತ್ತು. ಅವರನ್ನು ಬಿಟ್ಟು ನಾನು ಒಂದು ದಿನವೂ ಇರುತ್ತಿರಲಿಲ್ಲ. ನನಗೆ ಅದು ಸಾಧ್ಯವೂ ಆಗುತ್ತಿರಲಿಲ್ಲ. ಆದ್ದರಿಂದ ನಾನು ಸಂದರ್ಭವೊದಗಿದಾಗ ಮಾತ್ರ ಅಲ್ಲಿಗೆ ಹೋಗಿ ಒಂದೆರಡು ದಿನ ಇದ್ದು ಬರುತ್ತಿದ್ದೆ ಅಷ್ಟೆ. ಅದೂ ಹೆಚ್ಚಾಗಿ ಸಾಹುಕಾರ್ ಸಿದ್ದಲಿಂಗಯ್ಯನವರ ಮನೆಯಲ್ಲಿಯೇ ವಾಸ್ತವ್ಯ. ಮುಂದೆ ಅದೂ ತಪ್ಪಿಹೋಯಿತು. ಆದರೂ ನನ್ನ ಹೆಸರಿನ ಜೊತೆ ಕ್ಯಾತನಹಳ್ಳಿ ಎನ್ನುವುದು ಸೇರಿಕೊಂಡಿತು. ಎಷ್ಟರ ಮಟ್ಟಿಗೆ ಅದು ಅಂಟಿಕೊಂಡಿತೆಂದರೆ, ಎಷ್ಟೋ ಜನಕ್ಕೆ ಈಗಲೂ ನನ್ನ ಹೆಸರೇ ಗೊತ್ತಿಲ್ಲ. ಕ್ಯಾತನಹಳ್ಳಿ ಸ್ವಾಮಿಗಳು ಎಂದೇ ಕರೆಯುತ್ತಾರೆ. ಅವರ ಹೆಸರೇನು ಎಂದು ಕೇಳಿದರೆ, ಸ್ವಲ್ಪ ಹೊತ್ತು ನೆನಪಿಸಿಕೊಳ್ಳುವ ಸ್ಥಿತಿ ಉಂಟಾಗಿದೆ.



**8. ರಾಜೇಂದ್ರ ಜಗದ್ಗುರುಗಳವರ ಎಡೆಬಿಡದೆ ಒಡನಾಡಿಗಳಾಗಿದ್ದರೂ ಅವರನ್ನು ನೀವು ಸಂಪೂರ್ಣ ಅರ್ಥಮಾಡಿಕೊಂಡಿದ್ದಿರೋ ಹೇಗೆ? ನೀವು ಕಂಡಂತೆ ರಾಜೇಂದ್ರ ಗುರುಗಳು – ಏನು, ಹೇಗೆ?**

ಅವರನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೆ. ನನ್ನನ್ನು ಅವರು ಸಂಪೂರ್ಣ ಅರ್ಥಮಾಡಿಕೊಂಡಿದ್ದರು. ಆದ್ದರಿಂದಲೇ ನಾವಿಬ್ಬರೂ ಅಷ್ಟು ದೀರ್ಘಕಾಲ ಒಡನಾಡಿಗಳಾಗಿರಲು ಸಾಧ್ಯವಾದದ್ದು. ಅವರದ್ದು ತುಂಬಾ ಸಂಕೋಚದ ಸ್ವಭಾವ ದಾಕ್ಷಿಣ್ಯಕ್ಕೆ ಒಳಗಾಗಿ ಕೆಲವು ನೇರವಾದ ಮಾತುಗಳನ್ನು ಹೇಳಲು ಹಿಂಜರಿಯುತ್ತಿದ್ದರು. ಎಷ್ಟೋ ತಪ್ಪುಗಳನ್ನು ಮಾಡಿದವರನ್ನೂ ಬಹಳ ಬೇಗ ಕ್ಷಮಿಸಿಬಿಡುತ್ತಿದ್ದರು. ತಮಗೇ ನೂರೆಂಟು ಸಮಸ್ಯೆಗಳು ಇದ್ದರೂ, ಮತ್ತೊಬ್ಬರ ಸಮಸ್ಯೆಗಳನ್ನು ಹೇಗಾದರೂ ಪರಿಹರಿಸಬೇಕೆಂದು ಚಡಪಡಿಸುತ್ತಿದ್ದರು. ನಮ್ಮ ವಿದ್ಯಾರ್ಥಿನಿಲಯದ ವಿದ್ಯಾರ್ಥಿಯೊಬ್ಬ ಉನ್ನತ ಮಟ್ಟಕ್ಕೆ ಹೋದರೆ, ಅದನ್ನು ಅವರು ಹತ್ತಾರು ಜನಕ್ಕೆ ಹೇಳಿಕೊಂಡು ಸಂತೋಷಿಸುತ್ತಿದ್ದರು. ಅಷ್ಟು ಹೃದಯ ವೈಶಾಲ್ಯ ಅವರದ್ದು. (ಈ ಮಾತುಗಳನ್ನು ಹೇಳುವಾಗ ಕ್ಯಾತನಹಳ್ಳಿ ಶ್ರೀಗಳು ಸ್ವಲ್ಪ ಹೊತ್ತು ಗದ್ಗದಿತರಾದರು.) ಎಂತಹ ಇಕ್ಕಟ್ಟಿನ ಸಂದರ್ಭಗಳಲ್ಲಿಯೂ ಅವರು ಸಮಚಿತ್ತದಿಂದ ಇರುತ್ತಿದ್ದರು. ಅದು ಅವರಿಗೆ ಮಾತ್ರ ಸಾಧ್ಯವಾಗುತ್ತಿದ್ದ ಸ್ಥಿತಿ. ಎಂತಹ ಅಪರಾಧಿಯೂ ಅವರ ಮುಂದೆ ಧೈರ್ಯವಾಗಿ ನಿಂತುಕೊಂಡು ತನ್ನ ಅಪರಾಧವನ್ನು ಹೇಳಿಬಿಡುತ್ತಿದ್ದ. ಅವರು ಕ್ಷಮಿಸಿಯೇ ಕ್ಷಮಿಸುತ್ತಾರೆ ಎನ್ನುವ ನಂಬಿಕೆ ಅವನಿಗೆ ಇರುತ್ತಿತ್ತು. ಹಾಗೆಯೇ ಎಂತಹ ಕೋಪಿಷ್ಠನೂ ಅವರ ಮುಂದೆ ಸೌಮ್ಯವಾಗಿಬಿಡುತ್ತಿದ್ದ. ಅವರ ವ್ಯಕ್ತಿತ್ವವೇ ಅಂತದ್ದಾಗಿತ್ತು.

**9. 'ದೇವರು ವರ ಕೊಟ್ಟರೂ ಪೂಜಾರಿ ಕೊಡುವುದಿಲ್ಲ' – ಎಂಬ ನಾಣ್ಣುಡಿಯಂತೆ ರಾಜೇಂದ್ರರು ಮುಕ್ತಹಸ್ತರಾದರೂ ನೀವು ಬಿಗಿಹಸ್ತದವರೆಂಬ ಕೆಲವರ ಟೀಕೆಯನ್ನು ನೀವು ಸಂತೋಷದಿಂದಲೇ ಸ್ವಾಗತಿಸುತ್ತಿದ್ದಿರಿ ಎನ್ನಬಹುದಲ್ಲವೆ?**

ಈ ಪ್ರಶ್ನೆ ಕೇಳಿದಾಗ ಕ್ಯಾತನಹಳ್ಳಿ ಶ್ರೀಗಳು ಸ್ವಲ್ಪ ಹೊತ್ತು ನಕ್ಕರು. ನೋಡಪ್ಪ ಕನ್ನಡದಲ್ಲಿ ಒಂದು ಮಾತಿದೆ. ಏನಾದರೂ ಕೇಳುವ ಸಂದರ್ಭದಲ್ಲಿ "ನೀನೇನು ನಿಮ್ಮ ಅಪ್ಪನ ಮನೆಯಿಂದ ಕೊಡುತ್ತೀಯಾ" ಎಂದು . ಇದರ ಅರ್ಥವೇನು? ನಿಮ್ಮ ಅಪ್ಪನ ಮನೆಯದಾದರೆ ವ್ಯರ್ಥವಾಗಿ ಹಣವನ್ನು ಪೋಲು ಮಾಡಬೇಡ ಎಂದು ಅರ್ಥ. ಅಂದರೆ ಅಪ್ಪ ಹಣವನ್ನು ಕಷ್ಟಪಟ್ಟು ಸಂಪಾದಿಸಿರುತ್ತಾನೆ. ಆ ಕಷ್ಟವನ್ನೂ ತಿಳಿದುಕೊಂಡು ಮಗ ಹಣವನ್ನು ಸರಿಯಾಗಿ ಬಳಸಬೇಕು. ನಿನ್ನಂತಹವನಿಗೆ ಇದನ್ನು ಮತ್ತಷ್ಟು ವಿಸ್ತರಿಸುವ ಅವಶ್ಯಕತೆಯಿಲ್ಲ ಎಂದು ಕಾಣುತ್ತದೆ. ಮಠದ ಪ್ರತಿಯೊಂದು ಪೈಸೆಯೂ ಕಷ್ಟಪಟ್ಟು ಸಂಪಾದಿಸಿದ್ದು; ಭಕ್ತಾದಿಗಳ ಕಷ್ಟದ ಬೆವರು ಇದರಲ್ಲಿ ಬೆರೆತಿದೆ. ಅದು ಸದ್ವಿನಿಯೋಗವಾಗುವುದು ಬೇಡವೇ? ರಾಜೇಂದ್ರ ಸ್ವಾಮಿಗಳು ಸ್ವಲ್ಪ ಮಾತೃಹೃದಯದವರು, ಕರುಣೆಯ ಗುಣವುಳ್ಳವರು. ತಮಗೆ ಕಷ್ಟವೆಂದುಕೊಂಡು ಯಾರೇ ಬರಲಿ, ಆ ಕಷ್ಟವನ್ನು ಕೇಳಿ ಅವರು ಕರಗಿಬಿಡುತ್ತಿದ್ದರು. ಅವರ ಸಹಾಯಕ್ಕೆ ಮುಂದಾಗುತ್ತಿದ್ದರು. ಸ್ವಾಮಿಗಳ ಈ ಗುಣವನ್ನು ತಿಳಿದಿದ್ದವರಲ್ಲಿ ಕೆಲವರು, ಅದನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೂ ಮುಂದಾಗುತ್ತಿದ್ದರು. ಜನರಲ್ಲಿ ಎಲ್ಲ ತರದವರೂ ಇರ್ತಾರೆ ನೋಡು. ಭಾವುಕ ಸ್ವಭಾವದ ಶ್ರೀಗಳು, ಸುಣ್ಣ ಬೆಣ್ಣೆಗಳ ವ್ಯತ್ಯಾಸವನ್ನು ಅಷ್ಟಾಗಿ ವಿಶ್ಲೇಷಿಸುತ್ತಿರಲಿಲ್ಲ. ಆರಂಭದ ದಿನಗಳಲ್ಲಿ ನಾನೂ ಸಹ ಅವರೊಡನೆ ಹಾಗೆಯೇ ಸ್ಪಂದಿಸುತ್ತಿದ್ದೆ. ಅನಂತರದ ದಿನಗಳಲ್ಲಿ ವಾಸ್ತವ್ಯದ ಸೂಕ್ಷ್ಮಗಳು ಅರ್ಥವಾಗತೊಡಗಿದಂತೆ, ನಾನು ಸ್ವಲ್ಪ ಭಿನ್ನವಾದೆ. ಅದು ವ್ಯಾವಹಾರಿಕವಾಗಿ ಅನಿವಾರ್ಯವಾಗಿತ್ತು. ನನ್ನೊಳಗೆ ಇನ್ನಾವ ಉದ್ದೇಶವೂ ಇರಲಿಲ್ಲ. ಇದು ಗೊತ್ತಿರುವವರಿಗೇ ಗೊತ್ತು. ಬರಿಯ ಮೇಲ್ಪದರದಲ್ಲಿ ಚಿಂತಿಸುವವರಿಗೆ ನಾನು ಹಾಗೆ ಕಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅದರಿಂದ ನನಗೆ ಬೇಸರವೂ ಇಲ್ಲ. ಈಗಲೂ ನಾನು ಹಾಗೆಯೇ ಚಿಂತಿಸುವಂತಹವನು. ಇದರಲ್ಲಿ ನನಗೆ ತಪ್ಪೇನೂ ಕಾಣುವುದಿಲ್ಲ. ತನಗೆ ಇಷ್ಟವಾದ ಆಹಾರವನ್ನು ತಿನ್ನುವುದಕ್ಕೆ ಬಿಡುತ್ತಿಲ್ಲವಲ್ಲ ಎಂದು ರೋಗಿಗೆ, ವೈದ್ಯನ ಮೇಲೆ ಕೋಪ ಸಹಜವಾದದ್ದೇ. ಹಾಗಂದುಬಿಟ್ಟು, ವೈದ್ಯ ರೋಗಿಯ ಇಚ್ಛೆಯಂತೆ ನಡೆಯುವುದಕ್ಕೆ ಸಾಧ್ಯವೂ ಇಲ್ಲ, ನಡೆಯಲೂಬಾರದು. ಇರಲಿ, ಜನ ನನ್ನನ್ನು ಏನೇ ಕರೆಯಲಿ, ನನಗೆ ಅದು ಸಂತೋಷದಾಯಕವಾದದ್ದೇ. ಇಂದಿನ ನಮ್ಮ ಮಠದ ಬೆಳವಣಿಗೆಯನ್ನು ನೋಡಿದರೆ, ನನಗೆ ಉಳಿದೆಲ್ಲವೂ ಮರೆತೇಹೋಗುತ್ತದೆ. ಇದರಲ್ಲಿ ನನ್ನ "ಪೂಜಾರಿ ಗುಣ"ದ ಪಾಲೂ ಇದೆ ಎನ್ನುವುದು ನನ್ನ ನಂಬಿಕೆ. ನನಗೆ ಆ ತೃಪ್ತಿಯೇ ಸಾಕು. ನಾನು ಹಾಗೇ ನಡೆದುಕೊಳ್ಳುತ್ತಿದ್ದುದು ನನಗಾಗಿಯಂತೂ ಅಲ್ಲ. ಎಲ್ಲಾ ನಿಮಗಾಗಿ.

**10. ಸುತ್ತೂರು ಮಠದ ಸೇವೆಯಲ್ಲಿಯೆ ಸಂಪೂರ್ಣ ಸವೆದ ನಿಮ್ಮ ತುಂಬುಜೀವನ ಸಂತೃಪ್ತಿಯನ್ನು ತಂದಿದೆ ಎಂದು ನಂಬಬಹುದಲ್ಲವೆ?**

ದೊಡ್ಡ ಸೇವೆ ಮಾಡಿದವರು ರಾಜೇಂದ್ರ ಸ್ವಾಮಿಗಳು. ನಾನು ಕೇವಲ ಅವರಿಗೆ ಒತ್ತಾಸೆಯಾಗಿದ್ದೆ ಅಷ್ಟೆ. ನಾನು ಏನು ಸೇವೆ ಮಾಡಿದ್ದೇನೆ ಎಂದು ನನಗೇ ತಿಳಿಯದು.



ಹೊಲಗದ್ದೆಗಳ ವ್ಯವಸಾಯ ನಿರ್ವಹಣೆಯಲ್ಲಿ, ಕೆಲವು ಕಟ್ಟಡಗಳನ್ನು ಕಟ್ಟುವ ದಿನಗಳಲ್ಲಿ, ರಾಜೇಂದ್ರ ಸ್ವಾಮಿಗಳನ್ನು ದರ್ಶನ ಮಾಡಲು ಬರುತ್ತಿದ್ದ ಭಕ್ತಾದಿಗಳ ಪೂರ್ವಾಪರಗಳನ್ನು ವಿಚಾರಿಸಿ, ಏನಾದರೂ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಂದರ್ಭಗಳಲ್ಲಿ ಸ್ವಲ್ಪ ಸಲಹೆ ಸೂಚನೆಗಳನ್ನು ಕೊಡುತ್ತಿದ್ದೆ. ಇರಲಿ. ಇವೆಲ್ಲಾ ನಾನು ಮಾಡಬೇಕಾಗಿದ್ದ ಕೆಲಸಗಳೇ ಆಗಿದ್ದುವು. ಏಕೆಂದರೆ ಎಲ್ಲವನ್ನೂ ಬುದ್ಧಿಯವರೇ ನೋಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ಯೋಚನೆ ಮಾಡಿದರೆ, ಅವರೊಡನೆ ಇದ್ದು ಸೇವೆ ಮಾಡುವ ಅವಕಾಶ ಸಿಕ್ಕಿದ್ದು ನನಗೆ ನಿಜಕ್ಕೂ ಸಂತೃಪ್ತಿಯನ್ನು ತಂದಿದೆ.

**11. ರಾಜೇಂದ್ರ ಜಗದ್ಗುರುಗಳವರೊಡನೆ ಪಾಶ್ಚಾತ್ಯ ರಾಷ್ಟ್ರಗಳ ಪ್ರವಾಸದಲ್ಲಿ ನೀವು ಕಂಡುಂಡ ಅನುಭವಗಳೇನು?**

ನನಗೆ ಅಲ್ಲಿ ಅಂತಹ ಅನುಭವಗಳೇನೂ ಆಗಲಿಲ್ಲ. ಹೊರಗಡೆ ನಾನು ಸುತ್ತಾಡಿದ್ದು ತುಂಬಾ ಕಡಿಮೆಯೆಂದೇ ಹೇಳಬೇಕು. ನಾನು ಸದಾ ಗುರುಗಳ ಜೊತೆಯಲ್ಲಿಯೇ ಇರುತ್ತಿದ್ದೆ. ಅವರ ಆಹಾರ, ಪೂಜೆ ಮುಂತಾದವುಗಳ ಉಸ್ತುವಾರಿ ಮಾಡುತ್ತಿದ್ದೆ. ಹೊರಕ್ಕೆ ಹೋದರೂ ಶ್ರೀಗಳವರ ಜೊತೆ ಮಾತ್ರ ಬೇರೆ ಬೇರೆ ಭಕ್ತರ ಮನೆಗಳಲ್ಲಿ ಪೂಜೆ ಇರುತ್ತಿತ್ತು. ಅಲ್ಲಿಗೆ ಮಾತ್ರ ಹೋಗುತ್ತಿದ್ದೆವು. ಆ ಭಕ್ತರಲ್ಲಿ ಕೆಲವರು ನಮ್ಮ ವಿದ್ಯಾರ್ಥಿನಿಲಯದವರು ಎಂದು ತಿಳಿದಾಗಲಂತೂ, ಅಲ್ಲಿನ ಅವರ ಸ್ಥಿತಿಗತಿಗಳನ್ನು ನೋಡಿ ತುಂಬಾ ಸಂತೋಷವಾಗುತ್ತಿತ್ತು. ನಾವು ಇಲ್ಲಿ ಹಾಸ್ಟೆಲ್ ನಡೆಸಲು ಪಡುತ್ತಿದ್ದ ಶ್ರಮ, ಸಾರ್ಥಕವಾಯಿತು ಎಂದು ಆಗ ನನಗೆ ಅನಿಸುತ್ತಿತ್ತು. ಆ ದೇಶದ ಕಟ್ಟಡಗಳನ್ನು ನೋಡಿದಾಗ, ಸಮಯಪ್ರಜ್ಞೆಯ ಬಗ್ಗೆ ಕೇಳಿದಾಗ, ದುಡಿಮೆಗೆ ಪ್ರಥಮ ಪ್ರಾಶಸ್ತ್ಯ ಎನ್ನುವ ಅಂಶಗಳನ್ನು ತಿಳಿದಾಗ–ನಮ್ಮಲ್ಲಿ ಇರುವ ಕೊರತೆಯಾದರೂ ಏನು ಎನ್ನುವ ಪ್ರಶ್ನೆ ನನ್ನನ್ನು ಆಗಾಗ ಕಾಡುತ್ತಿದೆ.

**12. ಅಂದಿನಿಂದ ಇಂದಿನವರೆಗೆ ಸುತ್ತೂರು ಶ್ರೀಕ್ಷೇತ್ರದ ಸೇವಾಕ್ಷೇತ್ರಗಳ ವ್ಯಾಪ್ತಿ-ವಿಸ್ತಾರಗಳನ್ನು ಹೆಜ್ಜೆಹೆಜ್ಜೆಗೂ ಕಂಡಿದ್ದೀರಿ. ನಿಮಗೆ ಇಂದು ಅದರ ಬೆಳವಣಿಗೆಯನ್ನು ಕುರಿತು ನಿಮ್ಮ ಅನಿಸಿಕೆಗಳೇನು?**

ಇಂದು ನಮ್ಮ ಸಂಸ್ಥೆ ಅಗಾಧವಾಗಿ ಬೆಳೆದಿದೆ. ಅಂದಿನ ಸಮಸ್ಯೆಯ ಸ್ವರೂಪಗಳನ್ನು ಇಂದಿನದಕ್ಕೆ ಹೋಲಿಸಲು ಸಾಧ್ಯವಿಲ್ಲ. ಆ ದಿನಗಳಲ್ಲಿ ಒಂದು ಸಣ್ಣ ಸಂಸ್ಥೆಯನ್ನು ಪ್ರಾರಂಭಿಸಬೇಕಾದರೂ ನಾವು ಹತ್ತಾರು ಬಾರಿ ಯೋಚಿಸುತ್ತಿದ್ದೆವು. ಇಂದು ನಮ್ಮ ಬೃಹತ್ ಸಂಸ್ಥೆಯನ್ನು ನಿರ್ವಹಿಸುವ ಜವಾಬ್ದಾರಿ ಇನ್ನೂ ಹೆಚ್ಚಿನದಾಗಿದೆ. ಇಡೀ ದೇಶದಲ್ಲಿಯೇ ಇದೊಂದು ಪ್ರತಿಷ್ಠಿತ ಸಂಸ್ಥೆಯಾಗಿರುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ. ಈಗಿನ ನಮ್ಮ ಗುರುಗಳಂತೂ ಅಗಾಧ ಶಕ್ತಿ ಇರುವಂತಹವರು. ಆದರೆ ಅವರು ಒಬ್ಬರೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ ಎನ್ನುವುದನ್ನೂ ಎಲ್ಲರೂ ತಿಳಿದುಕೊಳ್ಳಬೇಕು.

**13. ಶ್ರೀಮಠದ ಭಕ್ತ ಸಮೂಹದಲ್ಲಿ ಅಂದಿಗೂ ಇಂದಿಗೂ ಕಂಡುಬಂದಿರುವ ಬದಲಾವಣೆಗಳೇನು? ಏನಾದರೂ ಗಮನಿಸಿದ್ದೀರಾ?**

ಆಗ ಸುತ್ತೂರು ಮಠದಲ್ಲಿ ಹೆಚ್ಚಾಗಿ ಧರ್ಮಸಂಬಂಧಿಯಾದ ಚಟುವಟಿಕೆಗಳು ಮಾತ್ರ ನಡೆಯುತ್ತಿದ್ದುವು. ಜಾತ್ರೆ, ಜಯಂತಿ - ಇವುಗಳಲ್ಲಿ ಪ್ರಮುಖವಾದುವು. ಆಗ ಸಹಜವಾಗಿಯೇ ಅಕ್ಕಪಕ್ಕದ ಗ್ರಾಮಸ್ಥರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಪ್ರತಿಯೊಬ್ಬರೂ ನಮಗೆ ವೈಯಕ್ತಿಕವಾಗಿ ಪರಿಚಯವಿರುತ್ತಿದ್ದವರೇ ಆಗಿರುತ್ತಿದ್ದರು. ಈಗ ಮಠದ ಕಾರ್ಯಕ್ಷೇತ್ರದ ವೈಶಾಲ್ಯಕ್ಕೆ ಅನುಗುಣವಾಗಿ ಭಕ್ತರ ಸಂಖ್ಯೆಯೂ ಹೆಚ್ಚಾಗಿದೆ. ಸಮಾಜದ ಬೇರೆ ಬೇರೆ ವರ್ಗಗಳಿಂದ, ಸ್ತರಗಳಿಂದ ಜನ ಬರುತ್ತಿದ್ದಾರೆ. ನಮಗೆ ವೈಯಕ್ತಿಕವಾಗಿ ಅಷ್ಟು ಪರಿಚಯವಿಲ್ಲದಿದ್ದರೂ, ಅವರುಗಳು ತುಂಬಾ ಭಕ್ತಿಯಿಂದ, ಅಭಿಮಾನದಿಂದ ಬಂದು ಭಾಗವಹಿಸುತ್ತಾರೆ. ಇವರ ಜೊತೆಗೆ ನಮ್ಮ ನೌಕರ ವರ್ಗ, ಅಪಾರ ಸಂಖ್ಯೆಯ ವಿದ್ಯಾರ್ಥಿ ಸಮುದಾಯವಂತೂ ಇದ್ದೇ ಇರುತ್ತದೆ. ಎಷ್ಟೋ ಜನರನ್ನೂ ನಾವು ವೈಯಕ್ತಿಕವಾಗಿ ಭೇಟಿ ಮಾಡಲು ಸಾಧ್ಯವೇ ಆಗುವುದಿಲ್ಲ. ಆದರೂ ಅವರಲ್ಲಿ ಭಕ್ತಿ ಗೌರವಗಳು ಎಂದಿನಂತೆಯೇ ಇವೆ. ಅದೇ ನನಗೆ ಸಂತೋಷ ತರುವ ವಿಚಾರ. ಅಂದಂದಿನ ರೀತಿ ಅಂದಂದಿಗೆ ಅಲ್ವಾ?

**14. ತೊಂಬತ್ತೆಂಟರ ತುಂಬು ವಯಸ್ಸಿನ ಈ ಶುಭ ಸಂದರ್ಭದಲ್ಲಿ ತಾವು ನೀಡಲಿರುವ ಆದೇಶ-ಸಂದೇಶಗಳೇನು?**

ನಾನೇನು ತಾನೇ ಸಂದೇಶ ನೀಡಲಿ. ಸಂದೇಶ ನೀಡುವಷ್ಟು ದೊಡ್ಡವನೇನಲ್ಲ ನಾನು. ಆದರೂ ಕೇಳ್ತಾ ಇದ್ದೀರಿ. ಮಠ ಮತ್ತು ಭಕ್ತರು ಪರಸ್ಪರ ಒಬ್ಬರಿಗಾಗಿ ಮತ್ತೊಬ್ಬರು ಎನ್ನುವುದನ್ನು ಮರೆಯಬಾರದು. ಜನತೆಯ ಉದ್ಧಾರಕ್ಕೆ ಮಠ ಶ್ರಮಿಸಬೇಕು. ಮಠದ ಬೆಳವಣಿಗೆಗೆ ಜನತೆ ಶ್ರಮಿಸಬೇಕು. ಆಗಲೇ ಅದಕ್ಕೆ ಅರ್ಥ ಬರುವುದು. ನಮ್ಮ ಮಠ ಮೊದಲಿನಿಂದಲೂ ಹಾಗೆಯೇ ಬಂದಿದೆ. ಅದು ಹೀಗೆಯೇ ಮುಂದುವರಿಯಬೇಕು ಎನ್ನುವುದು ನನ್ನ ಒಂದೇ ಒಂದು ಬಯಕೆ. ಈಗಿನ ಜಗದ್ಗುರುಗಳವರ ಶ್ರಮ ಎಷ್ಟಿದೆ. ಅದನ್ನು ಅರ್ಥಮಾಡಿಕೊಂಡು ಎಲ್ಲರೂ ಜೊತೆಯಾಗಿ ಹೋಗಬೇಕು. ನಾನೂ ನೀನೂ ಶಾಶ್ವತವಲ್ಲ ಮಠ ಶಾಶ್ವತ. ಅದನ್ನು ಯಾರೂ ಮರೆಯಬಾರದು. ಈ ಎಲ್ಲದರ ಹಿಂದೆ ಸ್ಫೂರ್ತಿಯಾಗಿರುವ ಶ್ರೀ ರಾಜೇಂದ್ರ ಸ್ವಾಮಿಗಳವರು ಕ್ರಿಯಾಶಕ್ತಿಗೆ ನಾವೆಲ್ಲಾ ಎಂದೆಂದಿಗೂ ತಲೆಬಾಗಬೇಕು. ಅವರ ಸೇವೆಯನ್ನು ನೆನೆಸಿಕೊಳ್ಳುವುದು ಒಂದು ಪುಣ್ಯಪ್ರದವಾದ ಕೆಲಸ. ಅವರು ನನಗೆ ಪ್ರಾತಃಸ್ಮರಣೀಯರು.

# ಸಾಧನೆಯ ಪಕ್ಷಿನೋಟ

**ಗುರುಚೇತನಕ್ಕೆ ನಮನ**

ಒಂದು ಸಹಸ್ರಮಾನಕ್ಕೂ ಮೀರಿದ ಸುದೀರ್ಘ ಇತಿಹಾಸವನ್ನು ಹೊಂದಿರುವ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಇಪ್ಪತ್ತೂರನೆಯ ಜಗದ್ಗುರುಗಳಾದ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಶ್ರೀಮಠದ ಕಾರ್ಯವ್ಯಾಪ್ತಿಯನ್ನು ಅಭೂತಪೂರ್ವವಾಗಿ ವಿಸ್ತರಿಸಿದವರು. ಅವರು ಶ್ರೀಪೀಠದ ಗುರುಪರಂಪರೆಯ ಜ್ಞಾನಶಕ್ತಿ, ತಪಶ್ಶಕ್ತಿ ಹಾಗೂ ಕ್ರಿಯಾಶಕ್ತಿಗಳೆಲ್ಲವೂ ಏಕೀಭವಿಸಿದಂತಹ ಮಹಾನ್ ಚೇತನವಾಗಿದ್ದರು. ಸಮಾಜದ ಎಲ್ಲ ಸಮಸ್ಯೆಗಳ ಮೂಲ ಕಾರಣ ಅವಿದ್ಯೆ ಎನ್ನುವುದನ್ನು ಅರಿತಿದ್ದ ಶ್ರೀಗಳವರು ಉಚಿತ ವಿದ್ಯಾರ್ಥಿ ನಿಲಯಗಳನ್ನು ತೆರೆಯುವುದರ ಮೂಲಕ ಗ್ರಾಮೀಣ ಪ್ರದೇಶದ ಯುವಜನತೆಯನ್ನು ಅಕ್ಷರಸಂಸ್ಕೃತಿಯ ಕಡೆಗೆ ಸೆಳೆದರು. ಸ್ವಾತಂತ್ರ್ಯಪೂರ್ವದ ದಿನಮಾನಗಳಲ್ಲಿ ಅದು ಸಾಮಾನ್ಯವಾದ ಕೆಲಸವಾಗಿರಲಿಲ್ಲ. ಆದರೂ ತಮ್ಮ ಧೀಶಕ್ತಿಯಿಂದ ಅವರು ಅಸಾಧ್ಯವಾದುದನ್ನು ಸಾಧ್ಯಮಾಡಿ ಜನಸಮುದಾಯದ ಭಾಗ್ಯಜ್ಯೋತಿ ಯಾದರು.

ಅನ್ನ, ಅರಿವು, ಆರೋಗ್ಯ, ಕಲೆ, ಸಾಹಿತ್ಯ, ಸಂಗೀತ, ಸಮಾಜಸೇವೆ, ಧಾರ್ಮಿಕ ಚಟುವಟಿಕೆಗಳು - ಹೀಗೆ ಇಂದು ಶ್ರೀಮಠ ಹಮ್ಮಿಕೊಂಡಿರುವ ಎಲ್ಲ ತೆರನಾದ ಸೇವೆಗಳಿಗೆ ಸುಭದ್ರ ಬುನಾದಿ ಹಾಕಿದವರು.

ದಿನಾಂಕ 29.8.2009 ರಂದು ಅವರ 94 ನೆಯ ಜಯಂತಿ ಮಹೋತ್ಸವ. ನಮ್ಮೆಲ್ಲರಿಗೂ ಪರಮ ಪವಿತ್ರವಾದ ದಿನ. ಅವರ ದಿವ್ಯಸ್ಮರಣೆಯ ಮೂಲಕ, ಅವರ ಸದ್ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ, ಅವರು ಬಾಳಿದ ಆದರ್ಶಗಳನ್ನು ಸಾಕಾರಗೊಳಿಸಲು ಕಂಕಣಬದ್ಧರಾಗಬೇಕಾದ ಮಹಾಸುದಿನ.

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮಿಗಳವರ 94 ನೇ ಜಯಂತಿ ಮಹೋತ್ಸವ ಸಮಾರಂಭವು ಇದೇ ಆಗಸ್ಟ್ 29 ರಂದು ಶನಿವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ನಡೆಯುತ್ತಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮತ್ತು ಶ್ರೀ ಸಿದ್ಧಗಂಗಾ ಕ್ಷೇತ್ರದ ನಿ.ಪ್ರ.ಸ್ವ. ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿರುವ ಈ ಸಮಾರಂಭವನ್ನು ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಎಚ್.ಆರ್. ಭಾರದ್ವಾಜ್‌ರವರು ಉದ್ಘಾಟಿಸುತ್ತಾರೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಜೆಎಸ್‌ಎಸ್ ಶಿಕ್ಷಕಿಯರ ಪ್ರಶಿಕ್ಷಣ ಸಂಸ್ಥೆಯ (ಸರಸ್ವತಿಪುರಂ, ಮೈಸೂರು) ಸುವರ್ಣ ಮಹೋತ್ಸವ ಉದ್ಘಾಟನೆಯನ್ನು ನೆರವೇರಿಸುತ್ತಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರಾದ ಸನ್ಮಾನ್ಯ ಕು. ಶೋಭಾ ಕರಂದ್ಲಾಜೆಯವರ ಅಧ್ಯಕ್ಷತೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ ಸನ್ಮಾನ್ಯ ಡಾ. ಶಿವರಾಜ್ ವಿ. ಪಾಟೀಲ್‌ರವರು 'ಪ್ರಸಾದ' ದ್ವೈಮಾಸಿಕ ವಿಶೇಷ ಸಂಚಿಕೆಯನ್ನು ಹಾಗೂ ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವರಾದ ಸನ್ಮಾನ್ಯ ಶ್ರೀ ಕೆ.ಎಚ್. ಮುನಿಯಪ್ಪನವರು 'ನೆನಪು ದಿವ್ಯಾನುಭವ - ಭಾಗ 2' ಕೃತಿಯನ್ನು ಬಿಡುಗಡೆ ಮಾಡಲಿದ್ದಾರೆ. ಈ ಸಮಾರಂಭದ ಅಂಗವಾಗಿ ಆಯೋಜಿಸಿರುವ ರಕ್ತದಾನ ಶಿಬಿರವನ್ನು ಮಾಜಿ ಸಚಿವರೂ, ಹಾಲಿ ಸಂಸದರೂ ಆದ ಸನ್ಮಾನ್ಯ ಶ್ರೀ ಎಚ್. ವಿಶ್ವನಾಥ್‌ರವರು ಉದ್ಘಾಟಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯರು, ಮಾಜಿ ಕೇಂದ್ರ ಸಚಿವರು ಆದ ಸನ್ಮಾನ್ಯ ಶ್ರೀ ಎಂ.ವಿ. ರಾಜಶೇಖರನ್‌ರವರು ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ಮಹಾಪೌರರಾದ ಸನ್ಮಾನ್ಯ ಶ್ರೀ ಪುರುಷೋತ್ತಮರವರು ಮೆರವಣಿಗೆಯನ್ನು ಉದ್ಘಾಟಿಸುವರು.

ಸಮಾರಂಭಕ್ಕೆ ಆಗಮಿಸುವ ಸರ್ವರಿಗೂ ತಿಂಡಿ, ಊಟ ವ್ಯವಸ್ಥೆ ಮಾಡಲಾಗಿದೆ.



**ಕಾರ್ಯಕ್ರಮಗಳ ವಿವರ**

ಅಂದು ಬೆಳಗ್ಗೆ 8.00 ಗಂಟೆಗೆ ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರದ ಬೆಳ್ಳಿ ಪಲ್ಲಕ್ಕಿ ಉತ್ಸವ ನಡೆಯಲಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಹೊರಡುವ ಈ ಮೆರವಣಿಗೆಯು ಶ್ರೀ ಬಸವೇಶ್ವರ ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ಮಾಧವರಾವ್ ವೃತ್ತ, ನೂರೊಂದು ಗಣಪತಿ ದೇವಾಲಯ ವೃತ್ತ, ಬಸವೇಶ್ವರ ರಸ್ತೆ, ಕಂಸಾಳೆ ಮಹದೇವಯ್ಯ ವೃತ್ತ, ಎಲೆತೋಟದ ರಸ್ತೆ ಮೂಲಕ ಶ್ರೀ ಸುತ್ತೂರು ಮಠಕ್ಕೆ ಬಿಜಯಂಗೈಯುವುದು. ಶ್ರೀಮಠದ ಬಿರುದು ಬಾವಲಿಗಳು, ಜನಪದ ಕಲಾ ತಂಡಗಳು, ಭಜನಾ ತಂಡಗಳು ಉತ್ಸವದಲ್ಲಿ ಪಾಲ್ಗೊಳ್ಳುವುವು. ಜೆಎಸ್‌ಎಸ್ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಬೆಳಗ್ಗೆ 9.15 ಕ್ಕೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಮಠಾಧಿಪತಿಗಳ ಗೋಷ್ಠಿಯ ಸಹಕಾರದೊಡನೆ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ.

ಮಧ್ಯಾಹ್ನ 3.00 ಗಂಟೆಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸಂಜೆ 6.30 ಕ್ಕೆ ನಿಡ್ಲೆಯ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಂದ ಸಂಪಾದಿತವಾದ 'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕದ ರಂಗಪ್ರದರ್ಶನ ನೀಡುತ್ತದೆ. ಪ್ರದರ್ಶನದ ಅವಧಿ ಸುಮಾರು 3 ಗಂಟೆಗಳು.

ಈ ಸಂದರ್ಭದಲ್ಲಿ ಸಾರ್ವಜನಿಕರ ಅವಗಾಹನೆಗಾಗಿ ಜೆಎಸ್‌ಎಸ್ ಸಂಸ್ಥೆಯ ಸಾಧನೆ ಮತ್ತು ಮುಂದಿನ ಯೋಜನೆಗಳ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

**ಸಾಮಾನ್ಯ ಆಡಳಿತ ವಿಭಾಗ**

**1. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ**

ಬೆಂಗಳೂರಿನಲ್ಲಿರುವ ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದಿಂದ 2008-09 ನೇ ಸಾಲಿನ ಕೇಂದ್ರ ಸರ್ಕಾರದ ಸಿವಿಲ್ ಸರ್ವಿಸ್ ಮೆಯಿನ್ ಪರೀಕ್ಷೆಯಲ್ಲಿ 16 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು ಇದರಲ್ಲಿ 10 ಅಭ್ಯರ್ಥಿಗಳು ವಿವಿಧ ಸೇವೆಗಳಿಗೆ ಆಯ್ಕೆಯಾಗಿರುತ್ತಾರೆ. 2009 ನೇ ಸಾಲಿನಲ್ಲಿ 48 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. 2009-10 ನೇ ಸಾಲಿನಲ್ಲಿ ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಸಿವಿಲ್ ಸರ್ವಿಸ್ ಪರೀಕ್ಷೆಗಳಿಗೆ ಮತ್ತು ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಿಕೆಯನ್ನು ಮುಂದುವರಿಸಲಾಗುತ್ತಿದೆ.

**2. ಅಕ್ಷರ ದಾಸೋಹ**

ಸರ್ಕಾರದ ಸಹಯೋಗದೊಡನೆ ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಎಲ್ಲಾ 58 ಪ್ರಾಥಮಿಕ ಶಾಲೆಗಳು ಮತ್ತು 11 ಪ್ರೌಢಶಾಲೆಗಳ ಒಟ್ಟು 9,606 ವಿದ್ಯಾರ್ಥಿಗಳಿಗೆ (ಪ್ರಾಥಮಿಕ: 7,013 ಮತ್ತು ಪ್ರೌಢ: 2,593) ಮಧ್ಯಾಹ್ನದ ಬಿಸಿಯೂಟವನ್ನು ಯಳಂದೂರಿನಲ್ಲಿ ಸಿದ್ಧಪಡಿಸಿ ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಸುಮಾರು 52 ಲಕ್ಷ ರೂ. ಗಳ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ದಾಸೋಹ ಭವನದ ಕಾಮಗಾರಿ ಪ್ರಗತಿಯಲ್ಲಿದೆ.

ಚಾಮರಾಜನಗರದ 4 ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಮೈಸೂರಿನ 8 ಜೆಎಸ್‌ಎಸ್ ಶಾಲೆಗಳ ಒಟ್ಟು 3,522 ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡಲಾಗುತ್ತಿದೆ.

ಕೊಳ್ಳೇಗಾಲ ತಾಲ್ಲೂಕಿನ 6 ಪ್ರೌಢಶಾಲೆಗಳ 1,335 ವಿದ್ಯಾರ್ಥಿಗಳಿಗೆ ರಾಮಾಪುರದ ಕೇಂದ್ರದಿಂದ ಬಿಸಿಯೂಟ ಸಿದ್ಧಪಡಿಸಿ ನೀಡಲಾಗುತ್ತಿದೆ.

**3.** ಬೆಂಗಳೂರು ವಿಭಾಗದಲ್ಲಿ ಹೊಸದಾಗಿ ಎರಡು ಪಬ್ಲಿಕ್ ಶಾಲೆಗಳನ್ನು ಮತ್ತು ಫ್ಯಾಷನ್ ಡಿಸೈನ್ ಟೆಕ್ನಾಲಜಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

**4.** ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಫೈನ್ ಆರ್ಟ್ಸ್ ಸಂಸ್ಥೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ವಿಲೀನಗೊಳಿಸಲಾಗಿದೆ. ಇದನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಇಲ್ಲಿನ ನಿವೇಶನದ ಒಟ್ಟು ವಿಸ್ತೀರ್ಣ 107 ಎಕರೆ.

## ಸಾಮಾನ್ಯ ಶಿಕ್ಷಣ

1) ಒಟ್ಟು 56 ಪ್ರೌಢಶಾಲೆಗಳಲ್ಲಿ ಹುಲ್ಲಹಳ್ಳಿ, ವೀರರಾಜಪುರ, ಮಹದೇವನಗರ, ಕೆ.ಆರ್.ನಗರ ಶಾಲೆಗಳಲ್ಲಿ 100% ಫಲಿತಾಂಶ ಬಂದಿರುತ್ತದೆ.

2) ಒಟ್ಟು 13 ಪದವಿಪೂರ್ವ ಕಾಲೇಜಿನಲ್ಲಿ ಎರಡು ಕಾಲೇಜುಗಳ ಕಲಾ ವಿಭಾಗದಲ್ಲಿ ಶೇ.70 ಫಲಿತಾಂಶ ಬಂದಿದೆ; ಏಳು ಕಾಲೇಜುಗಳ ವಾಣಿಜ್ಯ ವಿಭಾಗದಲ್ಲಿ ಫಲಿತಾಂಶ ಶೇ.70 ಕ್ಕಿಂತ ಹೆಚ್ಚಾಗಿದೆ. ಎರಡು ಕಾಲೇಜುಗಳ ವಿಜ್ಞಾನ ವಿಭಾಗದಲ್ಲಿ ಫಲಿತಾಂಶ ಶೇ. 70 ಕ್ಕಿಂತ ಹೆಚ್ಚಾಗಿದೆ.

3) 6 ಡಿ.ಇಡಿ. ಕಾಲೇಜುಗಳ ಪೈಕಿ, ಹೂವಿನಹಡಗಲಿಯಲ್ಲಿ ಶೇ.100 ಫಲಿತಾಂಶ ಬಂದಿದೆ; ಉಳಿದ ಕಾಲೇಜುಗಳಲ್ಲಿ ಶೇ. 90 ಫಲಿತಾಂಶ ಬಂದಿದೆ.

4) 6 ಬಿ.ಇಡಿ. ಕಾಲೇಜುಗಳಲ್ಲಿ ಎರಡು ಕಾಲೇಜುಗಳಲ್ಲಿ ಶೇ. 100 ಫಲಿತಾಂಶ ಬಂದಿದೆ; ಉಳಿದ ಕಾಲೇಜುಗಳಲ್ಲಿ ಶೇ. 90 ಫಲಿತಾಂಶ ಬಂದಿದೆ.



## ವಿದ್ಯಾರ್ಥಿಗಳ ವೈಯಕ್ತಿಕ ಸಾಧನೆ

1) ಮೈಸೂರಿನ **ರಾಮಾನುಜ ರಸ್ತೆಯಲ್ಲಿರುವ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ** ಎಂ.ಎಸ್. ಹರೀಶ್ ಎಂಬ ವಿದ್ಯಾರ್ಥಿಯು ರಾಷ್ಟ್ರಮಟ್ಟದ **ಚಿಂತನ ಗಣಿತ** ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾನೆ.

2) ಕೊಳ್ಳೇಗಾಲ ತಾಲ್ಲೂಕು **ರಾಮಾಪುರ ಪ್ರೌಢಶಾಲೆಯ** ಭವಾನಿ ಅಕ್ಷಯಕುಮಾರ್, ಮತ್ತು ಪ್ರಿಯಾಂಕ ಅಂತರರಾಷ್ಟ್ರೀಯ ಚಿಂತನ ಗಣಿತ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

3) **ಜೆಎಸ್‌ಎಸ್ ಪ್ರೌಢಶಾಲೆ, ಜಯನಗರ, ಬೆಂಗಳೂರು**
ಅಜಯ್, ರಾಷ್ಟ್ರಮಟ್ಟದ ಈಜು ಸ್ಪರ್ಧೆ— ದ್ವಿತೀಯ ಸ್ಥಾನ

4) **ಜೆಎಸ್‌ಎಸ್ ಪ್ರೌಢಶಾಲೆ, ದೊಡ್ಡಕಾಡನೂರು, ಹೊಳೆನರಸೀಪುರ ತಾಲ್ಲೂಕು**
ಹರ್ಷಿತ, ರಾಷ್ಟ್ರಮಟ್ಟದ ಆಶುಭಾಷಣ ಸ್ಪರ್ಧೆ — ತೃತೀಯ ಸ್ಥಾನ

5) **ಜೆಎಸ್‌ಎಸ್ ಪ್ರೌಢಶಾಲೆ, ಸರಸ್ವತಿಪುರಂ, ಮೈಸೂರು**
ವಿನೋದ್ ಗೌಡ, ರಾಷ್ಟ್ರಮಟ್ಟದ ಕ್ರಿಕೆಟ್ ಪಂದ್ಯಕ್ಕೆ ಆಯ್ಕೆ.

## ಪಬ್ಲಿಕ್ ಶಾಲೆಗಳು

ಚಿಕ್ಕ ಮಂಡ್ಯ (ಮಂಡ್ಯ ಜಿಲ್ಲೆ) ಮತ್ತು ಬೆಲವತ್ತ (ಮೈಸೂರು ಜಿಲ್ಲೆ) ಗ್ರಾಮಗಳಲ್ಲಿ ಪಬ್ಲಿಕ್ ಶಾಲೆಗಳನ್ನು ತೆರೆಯಲು ಉದ್ದೇಶಿಸಿದೆ.

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ, ಧಾರವಾಡ ಜಿಲ್ಲೆಯ ಕೆಲಗೇರಿಯಲ್ಲಿ ಸಿಬಿಎಸ್‌ಸಿ 2009-10 ನೇ ಸಾಲಿನಿಂದ ಪಠ್ಯಕ್ರಮದ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

**ಉತ್ತರಪ್ರದೇಶ:** ಉತ್ತರಪ್ರದೇಶದ ನೊಯಿಡಾದಲ್ಲಿ ಪಬ್ಲಿಕ್ ಶಾಲೆಯ ಕಟ್ಟಡ ನಿರ್ಮಾಣಗೊಳ್ಳುತ್ತಿದ್ದು 2010 ರಿಂದ ಪ್ರವೇಶ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

**ದುಬೈ:** 2009 ರಿಂದ ದುಬೈನಲ್ಲಿ ಜೆಎಸ್‌ಎಸ್ ಅಂತಾರಾಷ್ಟ್ರೀಯ (ಸಿಬಿಎಸ್‌ಸಿ ಪಠ್ಯ) ಶಾಲೆಯನ್ನು ಪ್ರಾರಂಭಿಸಲಾಗಿದೆ.

## ಕಾಲೇಜು ಶಿಕ್ಷಣ ವಿಭಾಗ

1) **ಹೊಸ ಕೋರ್ಸುಗಳ ಪ್ರಾರಂಭ:** 2009-10 ನೇ ಸಾಲಿನಿಂದ ಕೆಳಕಂಡ ಕಾಲೇಜುಗಳಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ.

2) **ಮಹಿಳಾ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ :**

ಅ) ಕೊಳ್ಳೇಗಾಲದ ಜೆಎಸ್ಎಸ್ ಮಹಿಳಾ ಕಾಲೇಜಿನ ಆವರಣದಲ್ಲಿ ಭಾಗಶಃ ಯುಜಿಸಿ ಅನುದಾನದಿಂದ 101.91 ಲಕ್ಷ ರೂ. ಗಳ ವೆಚ್ಚದಲ್ಲಿ ವಿದ್ಯಾರ್ಥಿನಿಲಯದ ಕಟ್ಟಡವನ್ನು ನಿರ್ಮಿಸಲಾಗಿದೆ. ಇಲ್ಲಿ 216 ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶ ಕಲ್ಪಿಸಿಕೊಡಲಾಗಿದೆ.

ಆ) ಮೈಸೂರಿನ ಜೆಎಸ್ಎಸ್ ಕಾಲೇಜಿನ (ಊಟಿ ರಸ್ತೆ) ಆವರಣದಲ್ಲಿ ಹಾಲಿ ಇದ್ದ ಮಹಿಳಾ ವಸತಿನಿಲಯದ ಕಟ್ಟಡವನ್ನು 146.5 ಲಕ್ಷ ರೂ.ಗಳ ವೆಚ್ಚದಲ್ಲಿ ವಿಸ್ತರಿಸಲಾಗಿದೆ. ಇಲ್ಲಿ 150 ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶ ಕಲ್ಪಿಸಿಕೊಡಲಾಗಿದೆ.

ಇ) ಚಾಮರಾಜನಗರದ ಜೆಎಸ್ಎಸ್ ಮಹಿಳಾ ಕಾಲೇಜು, ನಂಜನಗೂಡಿನ ಜೆಎಸ್ಎಸ್ ಕಾಲೇಜು, ಮತ್ತು ಗುಂಡ್ಲುಪೇಟೆಯ ಜೆಎಸ್ಎಸ್ ಕಾಲೇಜು ಇಲ್ಲಿನ ಆವರಣಗಳಲ್ಲಿ ಮಹಿಳಾ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಇವುಗಳ ಒಟ್ಟು ಅಂದಾಜು ವೆಚ್ಚ 626.50 ಲಕ್ಷ ರೂ.ಗಳು.

ಈ) ಮೈಸೂರಿನ ಜೆಎಸ್ಎಸ್ ಮಹಿಳಾ ಕಾಲೇಜಿನ (ಸರಸ್ವತಿಪುರಂ) ಆವರಣದಲ್ಲಿ ಹಾಲಿ ಇರುವ ವಿದ್ಯಾರ್ಥಿನಿಲಯಕ್ಕೆ ಹೊಂದಿಕೊಂಡಂತೆ ಹೊಸ ಬ್ಲಾಕ್ ಒಂದನ್ನು 135 ಲಕ್ಷ ರೂ. ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಮೇಲಿನ ಎಲ್ಲ ವಿದ್ಯಾರ್ಥಿನಿಲಯಗಳ ಒಟ್ಟು ನಿರ್ಮಾಣ ವೆಚ್ಚ 1009.91 ಲಕ್ಷ ರೂ.ಗಳು. ಈ ಪೈಕಿ ಯುಜಿಸಿಯಿಂದ 423 ಲಕ್ಷ ರೂ.ಗಳ ಅನುದಾನ ದೊರೆತಿರುತ್ತದೆ.

## ತಾಂತ್ರಿಕ ಶಿಕ್ಷಣ ವಿಭಾಗ

**1. ಜೆಎಸ್ಎಸ್ ಅಕ್ಯಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್, ನೊಯಿಡಾ**

ಈ ಸಂಸ್ಥೆಗೆ ಕಳೆದ ಸಾಲಿನಲ್ಲಿ ಉತ್ತರಪ್ರದೇಶ ತಾಂತ್ರಿಕ ವಿಶ್ವವಿದ್ಯಾನಿಲಯದಿಂದ ಉತ್ತಮ ಶೈಕ್ಷಣಿಕ ಸಾಧನೆಗಾಗಿ (Academic Excellence) ಪ್ರಶಸ್ತಿ ಲಭಿಸಿದೆ.

ಇದೇ ಕಾಲೇಜಿನಲ್ಲಿ ಐಬಿಎಂ ಸಂಸ್ಥೆಯು ವಿದ್ಯಾರ್ಥಿಗಳಲ್ಲಿ ಆಧುನಿಕ ತಂತ್ರಜ್ಞಾನದ ಬಗೆಗೆ ಹೆಚ್ಚಿನ ಅರಿವು ಮೂಡಿಸಲು ಜೆಡಿಎ ಸೆಂಟರ್ ಫಾರ್ ಎಕ್ಸೆಲೆನ್ಸ್ ಎಂಬ ವಿಭಾಗವನ್ನು ಪ್ರಾರಂಭಿಸಲಿದೆ.

ಸುಮಾರು 400 ಲಕ್ಷ ರೂ.ಗಳ ವೆಚ್ಚದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅಂತಾರಾಷ್ಟ್ರೀಯ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಿಸಲಾಗಿದೆ. ಮತ್ತು ಸುಮಾರು 2,700 ಲಕ್ಷ ರೂ. ವೆಚ್ಚದಲ್ಲಿ 1,000 ಬೇರೆ ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸಲು ವಿದ್ಯಾರ್ಥಿ ನಿಲಯವನ್ನು ನಿರ್ಮಿಸಲು ಯೋಜಿಸಲಾಗಿದೆ.



ಸುಮಾರು 2,500 ಲಕ್ಷ ರೂ.ಗಳ ವೆಚ್ಚದಲ್ಲಿ ಇದೇ ಮಹಾವಿದ್ಯಾಲಯದ ಶೈಕ್ಷಣಿಕ ಬ್ಲಾಕ್ ನಿರ್ಮಾಣ ಪ್ರಾರಂಭಿಸಲಾಗಿದ್ದು ಅದು ಶೀಘ್ರದಲ್ಲಿಯೇ ಉದ್ಘಾಟನೆಯಾಗಲಿದೆ.

**2. ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಮೈಸೂರು**

ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಸಾಲಿನಲ್ಲಿ ನಾನ್ ಡಿಸ್ಟ್ರಕ್ಟಿವ್ ಟೆಸ್ಟಿಂಗ್ ಮತ್ತು 'ಪರಿಸರ ಸಂಬಂಧಿ ಕಾನೂನು' ವಿಷಯಗಳಲ್ಲಿ ಸ್ನಾತಕೋತ್ತರ ಡಿಪ್ಲೊಮ ಶಿಕ್ಷಣ ಪ್ರಾರಂಭಿಸಲಾಗುವುದು. ಇದೇ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇನ್‌ಫರ್‌ಮೇಷನ್ ಸೈನ್ಸ್ ವಿಭಾಗದ ಕಟ್ಟಡಗಳ ನಿರ್ಮಾಣಕ್ಕೆ 4 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಅಲ್ಲದೆ ಬಯೋಟೆಕ್ನಾಲಜಿ ಮತ್ತು ಕನ್‌ಸ್ಟ್ರಕ್ಷನ್ ಟೆಕ್ನಾಲಜಿ ವಿಭಾಗ ನಿರ್ಮಾಣಕ್ಕೆ 90 ಲಕ್ಷ ರೂ. ಖರ್ಚು ಮಾಡಲಾಗಿದೆ.

**3. ಜೆಎಸ್ಎಸ್ ಅಂಗವಿಕಲರ ಪಾಲಿಟೆಕ್ನಿಕ್**

ದೆಹಲಿಯ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಇಲಾಖೆಯು 2008-09 ನೇ ಸಾಲಿನಲ್ಲಿ ಈ ಸಂಸ್ಥೆಯ ವಿವಿಧ ವಿಭಾಗಗಳ ಆಧುನೀಕರಣಕ್ಕಾಗಿ 20 ಲಕ್ಷ ರೂ.ಗಳಿಗೂ ಮಿಕ್ಕು ಅನುದಾನ ನೀಡಿದೆ. ಅಲ್ಲದೆ, ಕೇಂದ್ರ ಸರ್ಕಾರದ ಜವಳಿ ಸಚಿವಾಲಯವು ಆಭರಣ ತಯಾರಿಕಾ ಕೌಶಲ್ಯ ಅಭಿವೃದ್ಧಿ ವಿಷಯದಲ್ಲಿ ಕುಶಲಕರ್ಮಿಗಳಿಗೆ ಹೆಚ್ಚಿನ ತರಬೇತಿ ನೀಡಲು 32 ಲಕ್ಷ ರೂ.ಗಳ ಅನುದಾನ ನೀಡಿದೆ. ವೃತ್ತಿನಿರತ ಕಸುಬುದಾರರಿಗೆ ಚಿನ್ನಾಭರಣ ತಯಾರಿಕೆಯಲ್ಲಿ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಇಲ್ಲಿ ಈಗಾಗಲೇ ಪ್ರಾರಂಭಿಸಲಾಗಿದೆ.

**4. ಜೆಎಸ್ಎಸ್ ಕೈಗಾರಿಕಾ ತರಬೇತಿ ಕೇಂದ್ರ, ತಾಳವಾಡಿ**

ಕರ್ನಾಟಕ ಸರ್ಕಾರ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಕೌಶಲ್ಯ ಅಭಿವೃದ್ಧಿ ತರಬೇತಿ ಯೋಜನೆ ಅಡಿಯಲ್ಲಿ ಪ್ರತಿವರ್ಷವೂ 2,000 ನಿರುದ್ಯೋಗಿ ಯುವಕ-ಯುವತಿಯರಿಗೆ ತರಬೇತಿ ನೀಡಲು ಆಲೋಚಿಸಿದ್ದು, ಈಗಾಗಲೇ 9 ಕೋರ್ಸುಗಳ ಮೂಲಕ 200 ನಿರುದ್ಯೋಗಿಗಳು ತರಬೇತಿ ಪಡೆದುಕೊಂಡು, ಸ್ವಂತ ಉದ್ಯೋಗದಲ್ಲಿ ನಿರತರಾಗಿದ್ದಾರೆ.

ಇದೇ ಸಂಸ್ಥೆಯಲ್ಲಿ ಭಾರತ ಸರ್ಕಾರದ ಸಹಯೋಗದೊಂದಿಗೆ ಸುಮಾರು 25 ಕೋಟಿ ರೂ.ಗಳ ವೆಚ್ಚದಲ್ಲಿ "ಕಿರು ಉಪಕರಣ ಕಾರ್ಯಾಗಾರ ಮತ್ತು ತರಬೇತಿ ಕೇಂದ್ರ"ವನ್ನು ಸ್ಥಾಪಿಸಲು ಉದ್ದೇಶಿಸಿದೆ. ಕರ್ನಾಟಕ ಸರ್ಕಾರದ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದ ಸಹಯೋಗದೊಡನೆ (ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಆಧಾರದಲ್ಲಿ) ಚಾಮರಾಜನಗರ ಜಿಲ್ಲೆಯ ನಿರುದ್ಯೋಗಿ ಯುವಕರಿಗೆ "ಉದ್ಯೋಗ ಸಿರಿ" ಯೋಜನೆಯಡಿ ತರಬೇತಿ ನೀಡಲು ಕ್ರಿಯಾಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

**5. ಜೆಎಸ್‌ಎಸ್ ವಿಶ್ವವಿದ್ಯಾನಿಲಯ**

ಜೆಎಸ್‌ಎಸ್ ವಿಶ್ವವಿದ್ಯಾನಿಲಯವು ಪರಿಗಣಿತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದ್ದು, ಸದ್ಯದಲ್ಲಿ ಈ ಕೆಳಗಿನ ನಾಲ್ಕು ಕಾಲೇಜುಗಳು ಇದರ ಆಡಳಿತಕ್ಕೆ ಒಳಪಟ್ಟಿದೆ:

(ಅ) ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಮೈಸೂರು

(ಆ) ಜೆಎಸ್‌ಎಸ್ ದಂತ ವೈದ್ಯ ಕಾಲೇಜು, ಮೈಸೂರು

(ಇ) ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಮೈಸೂರು

(ಈ) ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಊಟಿ

ಈ ವಿಶ್ವವಿದ್ಯಾನಿಲಯವು ಮಲೇಷಿಯಾದ ಸೆಲಾಂಗೋರ್ ಕಾಲೇಜು, ಅಮೆರಿಕಾದ ಆಲ್ಫಾಜೀನ್ ಬಯೋಸೈನ್ಸ್ ಕಾಲೇಜು ಮತ್ತು ಷಿಕಾಗೋದ ಇಲಿನಾಯ್ ವಿಶ್ವವಿದ್ಯಾನಿಲಯಗಳೊಂದಿಗೆ ಸಂಶೋಧನೆ ಮತ್ತು ಶೈಕ್ಷಣಿಕ ವಿಷಯಗಳಲ್ಲಿ ಸಹಯೋಗಕ್ಕೆ ಒಡಂಬಡಿಕೆ ಮಾಡಿಕೊಂಡಿದೆ.

ಈ ವಿಶ್ವವಿದ್ಯಾನಿಲಯವು ರಾಷ್ಟ್ರೀಯ ಮೈಕ್ರೋಬಯಾಲಜಿ ಸಮ್ಮೇಳನವನ್ನು ಡಿಸೆಂಬರ್ 2009 ರಲ್ಲಿ ನಡೆಸಲು ಉದ್ದೇಶಿಸಿದೆ.

ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಕೆಳಕಂಡ ಕಾಲೇಜುಗಳನ್ನು ತರುವ ಸಲುವಾಗಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

1. ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು, ಮೈಸೂರು
2. ಜೆಎಸ್‌ಎಸ್ ನರ್ಸಿಂಗ್ ಕಾಲೇಜು, ಮೈಸೂರು
3. ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜು, ಮೈಸೂರು
4. ಜೆಎಸ್‌ಎಸ್ ಸ್ಪೀಚ್ ಅಂಡ್ ಹಿಯರಿಂಗ್ ಕಾಲೇಜು, ಮೈಸೂರು
5. ಜೆಎಸ್‌ಎಸ್ ಕಾನೂನು ಕಾಲೇಜು, ಮೈಸೂರು
6. ಜೆಎಸ್‌ಎಸ್ ಇನ್ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಅಂಡ್ ಯೋಗ, ಮೈಸೂರು
7. ಜೆಎಸ್‌ಎಸ್ ಏಟಿಈ, ಬೆಂಗಳೂರು, ನೊಯಿಡಾ ಮತ್ತು ಮಾರಿಷಸ್

**6. ವೈದ್ಯಕೀಯ ಶಿಕ್ಷಣ ವಿಭಾಗ**

**i. ಜೆಎಸ್‌ಎಸ್ ಮೆಡಿಕಲ್ ಕಾಲೇಜ್, ಮೈಸೂರು**

2008-09 ಈ ವರ್ಷ ಈ ಕಾಲೇಜು ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಅದರ ಅಂಗವಾಗಿ ಹಲವಾರು ವಿಚಾರಗೋಷ್ಠಿಗಳು, ಪರಿಣತರ ಉಪನ್ಯಾಸಗಳನ್ನು ಆಯೋಜಿಸಿದೆ.



**ii. ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಮೈಸೂರು**

ಈ ಸಾಲಿನಲ್ಲಿ (1) ಫಾರ್ಮಸ್ಯೂಟಿಕಲ್ ಅನಾಲಿಸಿಸ್ (2) ಫಾರ್ಮಸ್ಯೂಟಿಕಲ್ ಕ್ವಾಲಿಟಿ ಅಶ್ಯೂರೆನ್ಸ್ ಮತ್ತು (3) ಫಾರ್ಮಸ್ಯೂಟಿಕಲ್ ಕೆಮಿಸ್ಟ್ರಿ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. ಈ ಸಂಸ್ಥೆಗೆ ದೆಹಲಿಯ ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್ ಸಂಸ್ಥೆಯಿಂದ 5 ಲಕ್ಷ ರೂ.ಗಳ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನಿಂದ 22 ಲಕ್ಷ ರೂ.ಗಳ ಹಾಗೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ 4.50 ಲಕ್ಷ ರೂ. ಗಳ ಅನುದಾನ ದೊರೆತಿದೆ.

**iii. ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಊಟಿ**

2008-09 ನೇ ಸಾಲಿನಲ್ಲಿ ಇಲ್ಲಿನ 15 ಸಂಶೋಧನಾ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆದಿದ್ದಾರೆ.

**ಪ್ರಕಟಣ ವಿಭಾಗ**

**1. ಶಿಬಿರಗಳು**

2009 ರ ಮೇ ಮತ್ತು ಜೂನ್ ತಿಂಗಳಲ್ಲಿ ಊಟಿ ಮತ್ತು ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾರ್ವಜನಿಕರು ಹಾಗೂ ಜೆಎಸ್‌ಎಸ್ ಸಂಸ್ಥೆಯ ನೌಕರ ವರ್ಗದವರಿಗೆ ಒಟ್ಟು 14 ವ್ಯಕ್ತಿತ್ವ ವಿಕಸನ ಹಾಗೂ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸಲಾಯಿತು.

**ಅ) ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ**

2007 ನೇ ಸಾಲಿನಲ್ಲಿ ಪ್ರಕಟಗೊಂಡ ಶ್ರೀಮತಿ ವೀಣಾ ಬನ್ನಂಜೆಯವರ 'ಅಕ್ಕಮಹಾದೇವಿಯ ದ್ವೈತ' ಕೃತಿಗೆ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ' ನೀಡಲಾಯಿತು. ಇದುವರೆವಿಗೆ 19 ಜನ ಲೇಖಕರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

| **ಆ) ಮುದ್ರಣಗೊಂಡಿರುವ ಕೃತಿಗಳು** | | **ಲೇಖಕರು** |
|---|---|---|
| 1. ಭಕ್ತಿಭಾಂಡಾರಿ ಬಸವಣ್ಣ | - | ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ |
| 2. ಶೂನ್ಯ ಸಂಪಾದನೆಯ ಪರಾಮರ್ಶೆ | - | ಪ್ರೊ. ಸಂ.ಶಿ. ಭೂಸನೂರ ಮಠ |
| 3. ಸಂಯಮ ಮತ್ತು ಸಿದ್ಧಿ | - | ಶ್ರೀ ಸಿದ್ಧೇಶ್ವರ ಸ್ವಾಮಿಗಳು |

**ಇ) ಮುದ್ರಣ ಹಂತದಲ್ಲಿರುವ ಕೃತಿಗಳು**

| | | |
|---|---|---|
| ಶರಣರ ಆಯ್ದ ವಚನಗಳ ವ್ಯಾಖ್ಯಾನ ಭಾಗ-1, ಭಾಗ-2, ಭಾಗ-3, ಭಾಗ-4 ಮತ್ತು ಭಾಗ-5 | - | ವಿವಿಧ ಲೇಖಕರಿಂದ |

**ಈ) ಶರಣ ಸಂಸ್ಕೃತಿ ಮಾಲೆಯ 100 ಕೃತಿಗಳ ಯೋಜನೆ**

ಶಾಲಾಕಾಲೇಜು ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ಜನತೆಗೆ ಶರಣರ ಸಾಹಿತ್ಯ, ಜೀವನದರ್ಶನ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವ ಉದ್ದೇಶದಿಂದ 'ಶರಣ ಸಂಸ್ಕೃತಿ ಮಾಲೆ' ಯೋಜನೆಯನ್ನು ರೂಪಿಸಲಾಗಿದೆ. ಈ ಮಾಲೆಯಡಿಯಲ್ಲಿ ಒಟ್ಟು100 ಕಿರುಹೊತ್ತಿಗೆಗಳನ್ನು ಪ್ರಕಟಿಸುವ ಉದ್ದೇಶವಿದೆ. ಈಗಾಗಲೇ ಈ ಮಾಲೆಯಲ್ಲಿ 54 ಕೃತಿಗಳನ್ನು ಹೊರತರಲಾಗಿದೆ.

**ಉ)** **'ವೀರಶೈವ ಪುಣ್ಯಪುರುಷರ ಮಾಲೆ'**ಯಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ 19 ಗಣ್ಯರ ಜೀವನ ಚರಿತ್ರೆಯ ಕಿರುಹೊತ್ತಿಗೆಗಳನ್ನು ಹೊರತರ ಲಾಗುತ್ತಿದೆ.

**ಊ)** ಜೆಎಸ್‌ಎಸ್ ಮಹಾವಿದ್ಯಾಪೀಠವು ಸ್ಥಾಪನೆಯಾಗಿ 50 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಇದರ ನೆನಪಿಗಾಗಿ ನಾಲ್ಕು ಸಂಪುಟಗಳನ್ನು ಹೊರತರಲಾಗುತ್ತಿದೆ.

**ತೋಟಗಾರಿಕೆ ವಿಭಾಗ**

ಜೆಎಸ್‌ಎಸ್ ಎಸ್‌ಜಿಎಸ್‌ವೈ ಯೋಜನೆಯಡಿ ಜಾಕಿಹುಳು ಸಾಕಾಣಿಕೆ ಕೇಂದ್ರಗಳನ್ನು ಹಾಗೂ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಹಾರ ಸಂಸ್ಕರಣ ತರಬೇತಿ ಘಟಕವನ್ನು ಪ್ರಾರಂಭಿಸಲಾಗಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜಪಾನಿನ ಕೈಗಾರಿಕೆ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಅಂತರಾಷ್ಟ್ರೀಯ ಸಂಸ್ಥೆಗಳ ಸಹಯೋಗದಲ್ಲಿ ಶಾಲಾ ವಿದ್ಯಾರ್ಥಿಗಳ ಅರಣ್ಯ ಯೋಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಧಾರವಾಡದಲ್ಲಿ ಜೀವವೈವಿಧ್ಯ ರಕ್ಷಣೆಗೆ ಒಂದು ಉದ್ಯಾನವನ ಸ್ಥಾಪಿಸಲು ಕ್ರಮ ತೆಗೆದುಕೊಂಡಿದೆ.

**ವಿದೇಶದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥೆಗಳು**

**1) ಮಾರಿಷಸ್ :** ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್ ವತಿಯಿಂದ ಬಿ.ಇ. ತರಗತಿಗಳನ್ನು ಪ್ರಾರಂಭಿಸಿದ್ದು ಸದ್ಯ ಕೆಳಕಂಡ ನಾಲ್ಕು ವಿಭಾಗಗಳಲ್ಲಿ ತರಗತಿಗಳು ನಡೆಯುತ್ತಿವೆ.

(ಅ) ಸಿವಿಲ್

(ಆ) ಎಲೆಕ್ಟ್ರಿಕಲ್

(ಇ) ಎಲೆಕ್ಟ್ರಾನಿಕ್ಸ್

(ಈ) ಕಂಪ್ಯೂಟರ್ ಸೈನ್ಸ್



ಇಲ್ಲಿ ಒಟ್ಟು 4 ಎಕರೆಗಳಷ್ಟಿದ್ದು ಜಾಗವಿದ್ದು ಕಟ್ಟಡದ ಮೊದಲ ಹಂತದ ಕಾಮಗಾರಿಯ ಅಂದಾಜು ಮೊತ್ತ ಮಾರಿಷಸ್‌ನ ರೂ. 40 ಕೋಟಿ ರೂ.ಗಳು.

ಸಂಸ್ಥೆಯು ಇಂಗ್ಲೆಂಡಿನ ಮಿಡ್ಲ್‌ಸೆಕ್ಸ್ ವಿಶ್ವವಿದ್ಯಾನಿಲಯದ ಸಹಯೋಗದೊಡನೆ ಅಕ್ಟೋಬರ್ 2009 ರಿಂದ ಈ ಕೆಳಕಂಡ ತರಗತಿಗಳನ್ನು ನಡೆಸಲು ಉದ್ದೇಶಿಸಿದೆ.

(ಅ) ಅಂತರರಾಷ್ಟ್ರೀಯ ಬಿಜಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ

(ಆ) ಬಿ.ಎಸ್ಸಿಯಲ್ಲಿ ಇನ್‌ಫರ್‌ಮೇಷನ್ ಟೆಕ್ನಾಲಜಿ

(ಇ) ಬಿಜಿನೆಸ್ ಇನ್‌ಫರ್‌ಮೇಷನ್ ಸಿಸ್ಟಂ

ಅಲ್ಲದೆ ಇನ್‌ಕ್ಯುಬೇಷನ್ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.

**ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರ**

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಸದಾಶಯದಂತೆ 1999 ರಲ್ಲಿ 501(c) (3)ರನ್ವಯ ಅಮೆರಿಕಾದ ಮೇರಿಲ್ಯಾಂಡ್‌ನಲ್ಲಿ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಭಾರತದ ವಿಶಿಷ್ಟ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯ ಸಾರವನ್ನು ಜಗತ್ತಿನ ಮೂಲೆಮೂಲೆಗೂ ಕೊಂಡೊಯ್ಯಲು ಮಾಡಿದ ಪ್ರಯತ್ನವಿದು.

ಆಧ್ಯಾತ್ಮಿಕ ಕೇಂದ್ರದಲ್ಲಿ ಅಮೆರಿಕದಲ್ಲಿ ನೆಲೆಸಿರುವ ಮಕ್ಕಳಿಗಾಗಿ ಯೋಗಾಭ್ಯಾಸ, ಕನ್ನಡ ತರಗತಿಗಳು, ಭರತನಾಟ, ಸಂಗೀತ, ಕರಾಟೆ, ಸಂಸ್ಕೃತ ತರಗತಿಗಳನ್ನು ನಡೆಸಲಾಗುತ್ತಿದ್ದು, ಇದರಲಿಂದ ಅಲ್ಲಿನ ಮಕ್ಕಳಿಗೆ ನಮ್ಮ ಭಾಷೆ, ಸಂಸ್ಕೃತಿಗಳನ್ನು ರೂಢಿಸಿಕೊಳ್ಳಲು ಸಹಾಯ ವಾಗುತ್ತಿದೆ. ಅಲ್ಲದೆ, ಗ್ರಂಥಾಲಯವನ್ನು ಸಹ ಸ್ಥಾಪಿಸಿದ್ದು, ಕನ್ನಡ ಹಾಗೂ ಇಂಗ್ಲಿಷ್‌ನ ಸುಮಾರು 3,000 ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಧಾರ್ಮಿಕ, ಆಧ್ಯಾತ್ಮಿಕ ಪ್ರಸಾರದ ಪುಸ್ತಕಗಳನ್ನು ಪ್ರಕಟಿಸಿ ಅವುಗಳ ಮೂಲಕ ಆಧ್ಯಾತ್ಮಿಕ ಜ್ಞಾನಪ್ರಸಾರ ಮುಂತಾದ ಕಾರ್ಯವನ್ನು ಹಮಿಕೊಂಡಿದೆ.

ಅಲ್ಲಿನ ಭಕ್ತಾದಿಗಳ ಕೋರಿಕೆಯ ಮೇರೆಗೆ ಹಿಂದೂ ಸಂಪ್ರದಾಯಗಳಿಗನುಗುಣವಾಗಿ ಪೂಜಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದು, ತಾತ್ಕಾಲಿಕವಾಗಿ ನಿರ್ಮಿಸಿರುವ 'ಹಿಂದೂ ಟೆಂಪಲ್ ಆಫ್ ಮೇರಿಲ್ಯಾಂಡ್' ದೇವಾಲಯದಲ್ಲಿ ಜುಲೈ, 10, 11 ಹಾಗೂ 12 ರಂದು ಶ್ರೀ ಗಣಪತಿ, ಶ್ರೀ ಶಿವಲಿಂಗ, ಶ್ರೀ ಚಾಮುಂಡೇಶ್ವರಿ, ಶ್ರೀ ವೆಂಕಟೇಶ್ವರ ಹಾಗೂ ನವಗ್ರಹಗಳ ವಿಗ್ರಹಗಳ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಶಾಶ್ವತವಾದ ಒಂದು ಹಿಂದೂ ದೇವಾಲಯ ಹಾಗೂ ಅಲ್ಲಿ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ಅತಿಥಿಗೃಹ ನಿರ್ಮಿಸುವ ಯೋಜನೆಯಿದೆ.

## ಮುಂದಿನ ಯೋಜನೆಗಳು

**ಜೆಎಸ್‌ಎಸ್ ವಿಶ್ವವಿದ್ಯಾನಿಲಯ**

ಅತ್ಯಾಧುನಿಕವೂ ಸುಸಜ್ಜಿತವೂ ಆದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ನ್ಯಾನೋ ಟೆಕ್ನಾಲಜಿ, ಬಯೋಟೆಕ್ನಾಲಜಿಯಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆ (STEP) ನೀರು ಮತ್ತು ಆರೋಗ್ಯ ಸಂಸ್ಥೆ ಪರಿಸರವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಟೆಲಿಮೆಡಿಸನ್ — ಇವುಗಳಿಗೆ ಸಂಬಂಧಿಸಿದ ಪರಿಣತಿ ಕೇಂದ್ರಗಳ (Centre of Excellence) ಸ್ಥಾಪನೆ.

ಕೆಳಕಂಡ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡಿಸುವಂತೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

1. ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು, ಮೈಸೂರು
2. ಜೆಎಸ್‌ಎಸ್ ನರ್ಸಿಂಗ್ ಕಾಲೇಜು, ಮೈಸೂರು
3. ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜು, ಮೈಸೂರು
4. ಜೆಎಸ್‌ಎಸ್ ಸ್ಪೀಚ್ ಅಂಡ್ ಹಿಯರಿಂಗ್ ಕಾಲೇಜು, ಮೈಸೂರು
5. ಜೆಎಸ್‌ಎಸ್ ಕಾನೂನು ಕಾಲೇಜು, ಮೈಸೂರು
6. ಜೆಎಸ್‌ಎಸ್ ಇನ್ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಅಂಡ್ ಯೋಗ, ಮೈಸೂರು
7. ಜೆಎಸ್‌ಎಸ್ ಎಟೀಇ, ಬೆಂಗಳೂರು, ನೊಯಿಡಾ ಮತ್ತು ಮಾರಿಷಸ್

### ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರ, ಮೇರಿಲ್ಯಾಂಡ್ (ಅಮೆರಿಕ)

1. ಭಕ್ತಾದಿಗಳ ಅನುಕೂಲಕ್ಕಾಗಿ ಶಾಶ್ವತವಾದ ಹಿಂದೂ ದೇವಾಲಯದ ಸಮುಚ್ಚಯ ಮತ್ತು ಅತಿಥಿಗೃಹ ನಿರ್ಮಾಣ.
2. ವಿದ್ಯಾಸಂಸ್ಥೆಗಳ ನಿರ್ಮಾಣ.
3. ಡೇ ಕೇರ್ ಸೆಂಟರ್ ಮತ್ತು ಯೋಗ ಹಾಗೂ ಸ್ಟ್ರೆಸ್ ಮ್ಯಾನೇಜ್‌ಮೆಂಟ್ ಸೆಂಟರ್‌ಗಳ ಸ್ಥಾಪನೆ.

### ಕಟ್ಟಡ ಕಾಮಗಾರಿ

ಮಹಾವಿದ್ಯಾಪೀಠದ ವತಿಯಿಂದ ಮುಂದಿನ ವರ್ಷದಲ್ಲಿ ನೊಯಿಡ, ಕೊಯಮತ್ತೂರು, ಧಾರವಾಡ, ಬೆಂಗಳೂರು, ಮೈಸೂರು ನಗರಗಳಲ್ಲಿ ಒಟ್ಟು 228.45 ಕೋಟಿ ರೂ.ಗಳ ವೆಚ್ಚದಲ್ಲಿ ಕಟ್ಟಡ ಕಾಮಗಾರಿ ಕೆಲಸಗಳು ನಡೆಯಲಿವೆ.

□